

ದುಡಿಯುವ ಜನರ ಪ್ರಾಣ ಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 32 | ಪುಟ 16 | ಆಗಸ್ಟ್ 7, 2016 | ರೂ. 10/-

web: www.janashakthi.co.in e-mail : js_weekly@yahoo.com

**ಮಹಾಶ್ವೇತಾದೇವಿ ಕಂಬನಿ**

# ಮಹದಾಯಿ

## ಪ್ರಧಾನಿ ಮಧ್ಯಪ್ರವೇಶ ಅಗತ್ಯ



## ಸಾರಿಗೆ ಕಾರ್ಮಿಕರ ಚಾರಿತ್ರಿಕ ಮುಷ್ಕರ



## ದಲಿತ ಅಭಿವೃದ್ಧಿ : ಚಿಂತನ-ಮಂಥನ

- ಹಾಸನದಲ್ಲಿ ಅಧ್ಯಯನ ಶಿಬಿರ, ವಿಚಾರಸಂಕಿರಣ
- ಸಿಗರನಹಳ್ಳಿಗೆ ಯೆಚೂರಿ ಭೇಟಿ
- ದಲಿತ ಅಭಿವೃದ್ಧಿ ಅಳೆಯುವುದು ಹೇಗೆ?

**ನಿರುದ್ಯೋಗ, ಭ್ರಷ್ಟಾಚಾರಗಳ ವಿರುದ್ಧ ಪ್ರಚಾರಾಂದೋಲನ**

**ಬಾಲ ಕಾರ್ಮಿಕ ಕಾಯ್ದೆ ತಿದ್ದುಪಡಿ**
**- ವಿಶ್ವಾಸಘಾತ : ಕಾರಟ್**



# ದಲಿತರ ಮೇಲೆ ಅತ್ಯಾಚಾರವೇ ಗುಜರಾತ ಮಾದರಿ
## ಆದ್ದರಿಂದಲೇ ಮೋದಿಯವರು ಮೌನವಾಗಿದ್ದಾರೆ–ಬೃಂದಾ ಕಾರಟ್

ಗುಜರಾತಕ್ಕೆ ಭೇಟಿ ನೀಡಿರುವ ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಗುಜರಾತದ ಜುನಾಗಡದ ಉನಾದಲ್ಲಿ ಜುಲೈ 11ರಂದು 'ಗೋರಕ್ಷಾ ಸಮಿತಿ'ಯ ದುಷ್ಟಪಡೆಗಳ ಅತ್ಯಾಚಾರಕ್ಕೆ ಒಳಗಾದ ಯುವಕರ ತಂದೆ–ತಾಯಿಯನ್ನು ಸಮಧಿಯಲ ಗ್ರಾಮದ ಅವರ ಮನೆಯಲ್ಲಿ ಭೇಟಿ ಮಾಡಿದ ನಂತರ ಮಾಡಿರುವ ಟಿಪ್ಪಣಿ ಇದು.



ಈ ಯುವಕರ ತಂದೆ ಸರ್ವಿಯ ಬಾಬು ಭಾಯ್ ಮತ್ತು ತಾಯಿ ಕವಿತಾ ಬಾಯಿ ಗುಜರಾತ ಸರಕಾರ ನಡೆಸಿರುವ ತನಿಖೆಯಿಂದ ಸಂತುಷ್ಟರಾಗಿಲ್ಲ. ಕನಿಷ್ಟ 35 ಮಂದಿಯಿದ್ದ ಈ ಅತ್ಯಾಚಾರಿಗಳ ಗುಂಪಿನಲ್ಲಿದ್ದ ಕೇವಲ 17 ಮಂದಿಯನ್ನು ಮಾತ್ರ ಈಗ ಬಂಧಿಸಲಾಗಿದೆ. ರಾಜ್ಯ ಸರಕಾರ ನೀಡುವುದಾಗಿ ಹೇಳಿರುವ ಐದು ಲಕ್ಷ ರೂ.ಗಳ ಪರಿಹಾರ ಇನ್ನೂ ಅವರನ್ನು ತಲುಪಿಲ್ಲ ಎಂದು ಅವರು ಸಿಪಿಐ(ಎಂ) ನಿಯೋಗದೊಂದಿಗೆ ಮಾತಾಡುತ್ತ ಹೇಳಿದ್ದಾರೆ.

ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಗೋರಕ್ಷಾ ಸಮಿತಿಗಳನ್ನು ನಿಷೇಧಿಸಬೇಕು ಎಂದು ಸಿಪಿಐ(ಎಂ) ನಿಯೋಗ ಆಗ್ರಹಿಸಿದೆ.

ಈ ನಿಯೋಗದಲ್ಲಿ ಬಂದಾ ಕಾರಟ್‌ರೊಂದಿಗೆ ಸಿಪಿಐ(ಎಂ) ಸಂಸತ್ ಸದಸ್ಯ ಪಿ.ಕೆ.ಬಿಜು, ಕೇಂದ್ರ ಸಮಿತಿ ಸದಸ್ಯ ಅರುಣ್ ಮೆಹ್ತಾ ಮತ್ತಿತರ ರಾಜ್ಯ ಮುಖಂಡರು ಇದ್ದರು.

ಒಯ್ಯಬೇಕು ಎಂದರು.

ಉನಾಕ್ಕೆ ಸಿಪಿಐ(ಎಂ) ನಿಯೋಗದ ಮುಖ್ಯಸ್ಥರಾಗಿ ಭೇಟಿ ನೀಡಿ ಬಂದಿದ್ದ ಬೃಂದಾ ಕಾರಟ್ ಅಲ್ಲಿ ಜುಲೈ 11ರಂದು ಮತ್ತು ನಂತರ ನಡೆದ ಘಟನೆಗಳ ವಿವರ ನೀಡುತ್ತ, ನಾಲ್ಕು ಜನ ದಲಿತರ ಮೇಲೆ ಸುಮಾರು 40 ಮಂದಿ ಗೋರಕ್ಷಕರೆನಿಸಿಕೊಮಡವರು ಅಮಾನುಷ ದಾಳಿ ನಡೆಸಿದ್ದರೂ, ಇದುವರೆಗೆ ಕೇವಲ 17 ಮಂದಿಯನ್ನು ಬಂಧಿಸಲಾಗಿದೆ, ಉಳಿದವರು ಆರಾಮವಾಗಿ ಅಡ್ಡಾಡಿಕೊಂಡಿದ್ದಾರೆ ಎಂದರು.

ಗೋರಕ್ಷಣೆಯ ಹೆಸರಲ್ಲಿ ಈ ಗೂಂಡಾಗಳು ಜನರನ್ನು ಬೆದರಿಸಿ ಹಣ ಮಾಡಿಕೊಳ್ಳುತ್ತಿದ್ದಾರೆ. ಇವರಿಗೆ ಅಧಿಕಾರಸ್ಥರಿಂದ ಬೆಂಬಲವೂ ಇದೆ ಎಂಬುದು ಸ್ಪಷ್ಟ ಎಂದು ಅವರು ಹೇಳಿದರು. ಇಲ್ಲವಾದರೆ ಅವರ ಕೈಗಳಲ್ಲಿ ಗಲಭೆ ನಿಯಂತ್ರಿಸುವ ಪೋಲೀಸ್ ಪಡೆಗಳ ಬಳಿಯಿರುವ ದಂಡಾಯುಧಗಳು ಹೇಗೆ ಬರಲು ಸಾಧ್ಯ?ಇದು ಪೂರ್ವಯೋಜಿತ ಹಲ್ಲೆ ಎಂಬುದಕ್ಕೂ ಆಧಾರಗಳಿವೆ. ಗುಜರಾತಿನ ದಲಿತರು ಈಗ ಸಿಡಿದೆದ್ದಿದ್ದಾರೆ. ಈ ಘಟನೆಯಿಂದ ಹತಾಶರಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿರುವ ಯುವಜನರನ್ನು ಉದ್ದೇಶಿಸಿ ಬೃಂದ ಅವರು "ಬದುಕು ಮಉಲ್ಯ, ಅನ್ಯಾಯಗಳ ವಿರುದ್ಧ ಜಂಟಿಯಾಗಿ ಹೋರಾಡೋಣ, ಕೆಂಬಾವುಟ ಈ ಹೋರಾಟದಲ್ಲಿ ನಿಮ್ಮ ಜತೆಗಿರುತ್ತದೆ" ಎಂದರು.

### 'ಗೋರಕ್ಷಾ' ಸಮಿತಿಗಳನ್ನು ನಿಷೇಧಿಸಿ –ದಿಲ್ಲಿಯಲ್ಲಿ ಡಿಎಸ್‌ಎಂಎಂ ಧರಣಿ ಆಗ್ರಹ

ಜುಲೈ 25ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಸುರುಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ನೂರಾರು ದಲಿತ ಶೋಷಣಾ ಮುಕ್ತಿ ಮಂಚ್(ಡಿಎಸ್‌ಎಂಎಂ)ನ ನೂರಾರುಕಾರ್ಯಕರ್ತರು ಗುಜರಾತಿನ ಉನಾದಲ್ಲಿ ದಲಿತರ ಮೇಲೆ ನಡೆದ ಅತ್ಯಾಚಾರವನ್ನು ಪ್ರತಿಭಟಿಸಿ ಧರಣಿ ನಡೆಸಿದರು. ಗೋರಕ್ಷಾ ಸಮಿತಿಗಳ ಹೆಸರಲ್ಲಿ ದಲಿತರ ಮೇಲೆ ದಾಳಿಗಳು ನಡೆಯುತ್ತಿದ್ದು ಈ ಸಮಿತಿಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಡಿಎಸ್‌ಎಂಎಂ ದಿಲ್ಲಿ ಘಟಕದ ಅಧ್ಯಕ್ಷ ಬ್ರಹ್ಮಜಿತ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಈ ಧರಣಿಯನ್ನು ಉದ್ದೇಶಿಸಿ ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್, ಡಿಎಸ್‌ಎಂಎಂ ಕೇಂದ್ರ ಕಾರ್ಯಕಾರಿ ಮಂಡಲಿಯ ಸದಸ್ಯೆ ಮಮತಾ, ಡಿಎಸ್‌ಎಂಎಂ ದಿಲ್ಲಿ ಪ್ರಧಾನ ಕಾರ್ಯದರ್ಶಿ ನಾಥು ಪ್ರಸಾದ್, ಜನವಾದಿ ಮಹಿಳಾ ಸಂಘಟನೆಯ ಮೈಮುನಾ ಮೊಲ್ಲ, ಡಿಎಸ್‌ಎಂಎಂನ ಉತ್ತರಪ್ರದೇಶ ಘಟಕದ ಸಂಚಾಲಕ ವಿನೋದ ರಾವತ್ ಮತ್ತಿತರರು ಮಾತಾಡಿದರು.

ದೇಶದಲ್ಲಿ ದಲಿತರ ಶೋಚನೀಯ ಪರಿಸ್ಥಿತಿಯ ಬಗ್ಗೆಯೂ ಮಾತಾಡಿ ಈ ಹೋರಾಟವನ್ನು ದಲಿತರ ಆರ್ಥಿಕ ಸ್ಥಾನಮಾನವನ್ನು ಉತ್ತಮ ಪಡಿಸುವತ್ತ

### ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳನ್ನು ಕಳಚಿ ಹಾಕುವ ದುಷ್ಟ ಯೋಜನೆಯ ತಿದ್ದುಪಡಿ ಮಸೂದೆ–ಸಾರಿಗೆ ನೌಕರರ ಸಮನ್ವಯ ಸಮಿತಿಯ ಖಂಡನೆ

ರಸ್ತೆ ಸಾರಿಗೆ ವಲಯದಲ್ಲಿ ಗಂಭೀರ ಬೆಳವಣಿಗೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಜುಲೈ 27ರಂದು ನವದೆಹಲಿಯಲ್ಲಿ ರಸ್ತೆ ಸಾರಿಗೆ ನೌಕರರ ಒಕ್ಕೂಟಗಳು ಮತ್ತು ಸಂಘಗಳ ಅಖಿಲ ಭಾರತ ಸಮನ್ವಯ ಸಮಿತಿಯ ಸಭೆ ನಡೆದಿದೆ.

ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿಗೆ ಸೇರಿದ ಅಖಿಲ ಭಾರತ ಒಕ್ಕೂಟಗಳಲ್ಲದೆ, ತಮಿಳುನಾಡಿನ ಎಲ್‌ಪಿಎಫ್‌ಗೆ ಸಂಯೋಜಿತವಾದ ಮತ್ತು ತೆಲಂಗಾಣ ,ಆಂಧ್ರಪ್ರದೇಶ, ದಿಲ್ಲಿ, ಉತ್ತರಾಖಂಡದ ಸಾರಿಗೆ ನೌಕರರ ಸಂಘಟನೆಗಳ ಮುಖಂಡರೂ ಇದರಲ್ಲಿ ಭಾಗವಹಿಸಿದ್ದರು.

ಮೋಟಾರು ವಾಹನಗಳ ಕಾಯ್ದೆಗೆ ಕೇಂದ್ರ ಸರಕಾರ ದೇಶ–ವಿರೋಧಿ ತಿದ್ದುಪಡಿಗಳನ್ನು ತರಬೇಕೆಂದಿರುವುದನ್ನು ಸಭೆ ಬಲವಾಗಿ ಖಂಡಿಸಿತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳನ್ನು ಕಳಸಿ ಹಾಕುವುದು, ಸಣ್ಣ ಪುಟ್ಟ ಒಡೆತನದ ಟ್ರಕ್, ಬಸ್, ಆಟೋ, ಟ್ಯಾಕ್ಸಿ ಮುಂತಾದ ಸಾರಿಗೆ ವ್ಯವಸ್ಥೆ ಇಲ್ಲದಂತೆ ಮಾಡಿ ಇಡೀ ಸಾರಿಗೆ ವಲಯವನ್ನು ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸುವುದು ಈ ತಿದ್ದುಪಡಿಯ ನಿಜ ಉದ್ದೇಶ. ಇದು ಜನಸಾಮಾನ್ಯರ ಮೇಲೆ ಹೆಚ್ಚಿನ ಪ್ರಯಾಣ ದರಗಳ ಹೊರೆಯನ್ನು ಹಾಕುತ್ತದಲ್ಲದೆ, ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳಲ್ಲಿ ಏರಿಕೆಗೂ ಕಾರಣವಾಗುತ್ತದೆ ಎಂದು ಸಭೆ ಅಭಿಪ್ರಾಯ ವ್ಯಕ್ತಪಡಿಸಿತು.

ಸರಕಾರ ತಕ್ಷಣವೇ ಈ ಕರಾಳ ಮಸೂದೆಯನ್ನು ಮತ್ತು ತಿದ್ದುಪಡಿಗಳನ್ನು ಹಿಂತೆಗೆದುಕೊಂಡು ಸಂಬಂಧಪಟ್ಟ ಎಲ್ಲರೊಂದಿಗೆ ಮಾತುಕತೆ ನಡೆಸಬೇಕು ಎಂದು ಸಭೆ ಆಗ್ರಹಿಸಿತು.

ಸಪ್ಟಂಬರ್2ರ ಮುಷ್ಕರದಲ್ಲಿ ಎಲ್ಲ ಸಾರಿಗೆ ನೌಕರರು ಭಾಗವಹಿಸಬೇಕು ಎಂದು ಕರೆ ನೀಡಿದ ಸಭೆ, ಸಾರ್ವಜನಿಕರು ಅಂದಿನ ತಮ್ಮ ಪ್ರಯಾಣವನ್ನು ಮುಂದೂಡಿ ಮುಷ್ಕರವನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದೆ.

## ಬೆಲೆಗಳ ನಾಗಾಲೋಟಕ್ಕೆ ಮೋದಿ ಸರಕಾರದ ಧೋರಣೆಗಳೇ ಇಂಧನ–ಸಂಸತ್ತಿನಲ್ಲಿ ಚರ್ಚೆಯಲ್ಲಿ ಯೆಚೂರಿ

ಜನಗಳ ಬದುಕನ್ನು ತೀವ್ರವಾಗಿ ತಟ್ಟುತ್ತಿರುವ ಬೆಲೆಯೇರಿಕೆ ಕಳೆದ ವಾರ ಸಂಸತ್ತಿನ ಎರಡೂ ಸದನಗಳಲ್ಲಿಯೂ ಪ್ರತಿಧ್ವನಿಗೊಂಡಿತು. ಪ್ರತಿಪಕ್ಷಗಳ ಸದಸ್ಯರ ಆಕ್ರೋಶಗಳಿಗೆ ಪ್ರತಿಯಾಗಿ ಆಳುವ ಕೂಟದ ಸದಸ್ಯರು ಸರಕಾರವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಹೊಣೆಯನ್ನು ರಾಜ್ಯ ಸರಕಾರಗಳ ಹೆಗಲಿಗೆ ದಾಟಿಸಲು ಪ್ರಯತ್ನಿಸಿದರು.

ರಾಜ್ಯಸಭೆಯ ಚರ್ಚೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಜೂನ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಕಳೆದ 22 ತಿಂಗಳಲ್ಲಿಯೇ ಅತಿ ಹೆಚ್ಚು ಎಂಬ ಸಂಗತಿಯತ್ತ ಗಮನ ಸೆಳೆಯುತ್ತ ಈ ಬೆಲೆಯೇರಿಕೆಗೆ ಇಂಧನ ಒದಗಿಸಿರುವುದು ಮೋದಿ ಸರಕಾರವೇ ಎಂದರು. ಕಾಳಸಂತೆ ತಡೆ ಇತ್ಯಾದಿಗಳಲ್ಲಿ ರಾಜ್ಯ ಸರಕಾರಗಳ ಪಾತ್ರವಿದ್ದರೂ ಈಗ ದೇಶದಲ್ಲಿ ಜನಗಳನ್ನು ಅತಿಯಾಗಿ ಬಾಧಿಸುತಿರುವ ಬೆಲೆಯೇರಿಕೆಗಳಿಗೆ ಮುಖ್ಯವಾಗಿ ಮೋದಿ ಸರಕಾರ ಅನುಸರಿಸುತ್ತಿರುವ ಧೋರಣೆಗಳೇ ಕಾರಣ ಎಂದು ವಿವರಿಸಿದರು.


**ಒಂಭತ್ತು ಬಾರಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಬಕಾರಿ ಸುಂಕಗಳನ್ನು ಏರಿಸಲಾಗಿದೆ. ಇದರ ಪರಿಣಾಮವಾಗಿ ಪೆಟ್ರೋಲ್‌ನ ರಿಫೈನರಿ ಬೆಲೆ ಲೀಟರಿಗೆ ರೂ.22.94 ಇದ್ದರೆ ಜನರು ರೂ.66.54 ತೆರಬೇಕಾಗಿದೆ. ಡೀಸೆಲ್‌ನ ರಿಫೈನರಿ ಬೆಲೆ ರೂ.25.10, ಅದರ ಮಾರಾಟ ಬೆಲೆ.ರೂ.54.30. ಇದು ಎಲ್ಲ ಸಾಮಗ್ರಿಗಳ ಬೆಲೆಗಳ ಮೇಲೆ ಪರಿಣಾಮ ಬೀರಿದೆ.**

ಸಾಲದ್ದಕ್ಕೆ ಹೊಸ–ಹೊಸ ತೆರಿಗೆಗಳು ಮತ್ತು ಸೆಸ್‌ಗಳು– ಸ್ವಚ್ಛ ಭಾರತ, ಕೃಷಿ ಕಲ್ಯಾಣ, ಮೂಲರಚನೆ ಸ್ವಚ್ಛ ಪರಿಸರ ಮತ್ತು ತೈಲ ಅಭಿವೃದ್ಧಿ ಹೆಸರಲ್ಲಿ ಸೆಸ್‌ಗಳು. ಇವುಗಳಲ್ಲಿ ರಾಜ್ಯಗಳಿಗೆ ಪಾಲೇ ಇಲ್ಲವಾದ್ದರಿಂದ ಇವು ಜನಗಳ ಮೇಲೆ ಹೇರಿರುವ ಹೊರೆಗಳಿಗೆ ಕೇಂದ್ರ ಸರಕಾರವೇ ಕಾರಣ. ಇದಲ್ಲದೆ ಸೇವಾ ತೆರಿಗೆ ದರಗಳು ಏರುತ್ತಲೇ ಇವೆ.

ಆಹಾರ ಸಾಮಗ್ರಿಗಳ ಬೆಲೆಗಳಲ್ಲಿಯೇ ಅತಿ ಹೆಚ್ಚು ಏರಿಕೆ ಆಗಿರಲು ಮುಖ್ಯ ಕಾರಣ ಆಹಾರ ಸಾಮಗ್ರಿಗಳಲ್ಲಿ ಸಟ್ಟಾಕೋರತನಕ್ಕೆ ಅವಕಾಶ ನಿಡಿರುವುದು. ಆಹಾರ ವಸ್ತುಗಳಲ್ಲಿ ಮುಂಗಡ ವ್ಯಾಪಾರ, ವಾಯಿದಾ ವ್ಯಾಪಾರವನ್ನು ನಿಲ್ಲಿಸಿ ಎಂಬ ಬೇಡಿಕೆಗೆ ಈ ಸರಕಾರ ಇನ್ನೂ ಕಿವಿಗೊಡುತ್ತಿಲ್ಲ. ಅದನ್ನು ಮಾಡಿದರೆ ಮೂರೇ ತಿಂಗಳಲ್ಲಿ ಬೆಲೆಗಳು ಇಳಿಯುತ್ತವೆ ಎಂದು ಸೀತಾರಾಮ್ ಯೆಚೂರಿ ಹಿಂದೆ ಈ ಕ್ರಮಕೈಗೊಂಡದ್ದರ ಅನುಭವವನ್ನು ನೆನಪಿಸಿದರು. ಮೋದಿ ಸರಕಾರ ತನ್ನ ಧೋರಣೆಗಳನ್ನು ಬದಲಿಸಿದರೆ ಮಾತ್ರವೇ ಬೆಲೆಯೇರಿಕೆಗೆ ಕಡಿವಾಣ ಸಾಧ್ಯ ಎಂದರು.

ಲೋಕಸಭೆಯಲ್ಲಿ ಮಾತನಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಮಹಮ್ಮದ್ ಸಲಿಂ ಅವರು ಔಷಧಿಗಳು ಮತ್ತು ಆರೋಗ್ಯಕ್ಕಾಗಿ ಮಾಡಬೇಕಾದ ಖರ್ಚುಗಳಿಂದಾಗಿ ಪ್ರತಿವರ್ಷ 8 ಕೋಟಿ ಭಾರತೀಯರು ಬಡತನ ರೇಖೆಯ ಕೆಳಕ್ಕೆ ತಳ್ಳಲ್ಪಡುತ್ತಿದ್ದಾರೆ ಎಂದು ನೆನಪಿಸಿದರು.

### ಶೋಷಿತರ ಪರವಾಗಿ ಲೇಖಣಿಯೆತ್ತಿದ ಮಹಾಶ್ವೇತಾ ದೇವಿ




ಜ್ಞಾನ ಪೀಠ ಪ್ರಶಸ್ತಿ ವಿಜೇತರಾದ ಹಿರಿಯ ಬಂಗಾಳೀ ಕಾದಂಬರಿಗಾರ್ತಿ ಮಹಾಶ್ವೇತಾ ದೇವಿ ಜುಲೈ 28ರಂದು ನಿಧನರಾಗಿದ್ದಾರೆ. ಅವರಿಗೆ 90 ವರ್ಷವಾಗಿತ್ತು. ಅವರು ಕೇವಲ ಲೇಖಕಿಯಷ್ಟೇ ಅಲ್ಲ, ಸಾಮಾಜಿಕ ದಮನದ ವಿರುದ್ಧ ಸಕ್ರಿಯ ಕಾರ್ಯಕರ್ತೆಯೂ ಆಗಿದ್ದರು. ಮುಖ್ಯವಾಗಿ ಬುಡಕಟ್ಟು ಜನಗಳ ಶೋಷಣೆಯ ವಿರುದ್ಧ, ಸಂಕಟಗಳ ಅಭಿವ್ಯಕ್ತಿಗೆ ತನ್ನ ಲೇಖಣಿಯೆತ್ತಿದವರು.

"...ನಮ್ಮಂತಹ ಯಾವುದೇ ಪ್ರಾಚೀನ ಸಂಸ್ಕೃತಿ ಇಷ್ಟು ಕಾಲ ಉಳಿದಿದೆಯೆಂದರೆ ಅದು ಒಂದು ಮೂಲಭೂತ ಎಲ್ಲರೂ ಸ್ವೀಕರಿಸುವ ವಿಚಾರದಿಂದಲೇ, ಅಂದರೆ ಮಾನವೀಯತೆಯಿಂದಲೇ. ಪ್ರತಿಯೊಬ್ಬರಿಗೂ ಘನತೆಯಿಂದ ಮಾನವರಾಗಿರುವ ಹಕ್ಕು ಇದೆ ಎಂದು ಪರಸ್ಪರ ಒಪ್ಪುವ ವಿಚಾರದಿಂದಲೇ. ಇದೀಗ ನನ್ನ ಹೋರಾಟ, ನನ್ನ ಕನಸು–ನನ್ನ ಬದುಕಿನಲ್ಲೂ, ನನ್ನ ಬರವಣಿಗೆಯಲ್ಲೂ" – ಹೀಗಂದಿದ್ದರು ಅವರು ಅಕ್ಟೋಬರ್ 2006ರಲ್ಲಿ ಫ್ರಾಂಕ್‌ಫರ್ಟ್ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸುತ್ತ.

ರಮೋನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನೂ ಪಡೆದಿರುವ ಮಹಾಶ್ವೇತಾದೇವಿ ತನ್ನ ಸುಮಾರು ಆರು ದಶಕಗಳ ಬರವಣಿಗೆಯಲ್ಲಿ 120ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಸುಮಾರು 100 ಕಾದಂಬರಿಗಳು, 20 ಸಣ್ಣ ಕತೆಗಳ ಸಂಗ್ರಹಗಳು. ಅಲ್ಲದೆ ಪತ್ರಿಕೆಗಳಿಗೆ ಹಲವಾರು ಲೇಖನಗಳು ಮತ್ತು ಅಂಕಣಗಳನ್ನು ಬರೆದಿದ್ದಾರೆ–ಇವುಗಳಲ್ಲಿ ಹೆಚ್ಚಿನವು ಬುಡಕಟ್ಟು ಬದುಕಿನ ಸುತ್ತ ಹೆಣೆದವುಗಳು.

aAiAvEAzAgEEzAA



ಬೇರೆಯವರ ಸುರಕ್ಷಿತತೆಯ ಭರವಸೆ ಕೊಡಲು ನಮಗೆ ಸಾಧ್ಯವಾಗದಿದ್ದರೆ ನಮ್ಮ ಸ್ವಂತ ಸುರಕ್ಷಿತತೆಯ ಭರವಸೆ ಎಂದೂ ಸಾಧ್ಯವಿಲ್ಲ.

–ಬರ್ಟ್ರೆಂಡ್ ರಸೆಲ್

# ಕಳಸಾ–ಬಂಡೂರಿ ಯೋಜನೆ : ಪ್ರಧಾನಿ ಮಧ್ಯಪ್ರವೇಶಿಸಲಿ

ಸಂಪಾದಕೀಯ

ಮಹದಾಯಿ ಜಲವಿವಾದ ನ್ಯಾಯಾಧಿಕರಣ (ಟ್ರಿಬ್ಯುನಲ್') ಜುಲೈ 27ರಂದು ತೀರ್ಪು ನೀಡಿದೆ. ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ನೀಗಿಸಲು 7.5 ಟಿ.ಎಂ.ಸಿ. ನೀರನ್ನು ಕಳಸಾ–ಬಂಡೂರಿ ನಾಲಾಗೆ ಹರಿಸುವ ಈ ಯೋಜನೆಗೆ ಕೊಡಬೇಕೆಂದು ಕರ್ನಾಟಕ ಸರಕಾರದ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಾಧಿಕರಣ ವಜಾ ಮಾಡಿದೆ. ಉತ್ತರ ಕರ್ನಾಟಕದ ಗದಗ, ಧಾರವಾಡ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಬರಗಾಲದ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಅಭಾವ ನೀಗಿಸಲು ಬಹಳ ಹಿಂದೆನೇ ಯೋಜಿಸಲಾಗಿದ್ದ ಕಳಸಾ–ಬಂಡೂರಿ ಯೋಜನೆ ತುರ್ತಾಗಿ ಜಾರಿ ಆಗಬೇಕೆಂದು ಜನರ ಹಲವು ವರ್ಷಗಳ ಹಕ್ಕೊತ್ತಾಯವಾಗಿತ್ತು. ಮಹದಾಯಿ ನದಿಯಲ್ಲಿ ಕರ್ನಾಟಕದ ಪಾಲಿನ ನೀರಿನಲ್ಲಿ 7.5 ಟಿ.ಎಂ.ಸಿ. ನೀರನ್ನು ಕಳಸಾ–ಬಂಡೂರಿ ನಾಲಾಗೆ ಹರಿಸುವ ಈ ಯೋಜನೆಗೆ ಗೋವಾ ವಿರೋಧಿಸಿತ್ತು. ನ್ಯಾಯಾಧಿಕರಣವನ್ನು ಮಹದಾಯಿ ನದಿನೀರನ್ನು ಮೂರು ರಾಜ್ಯಗಳ ನಡುವೆ ಹಂಚಿಕೆಯ ಬಗ್ಗೆ ಇರುವ ವಿವಾದವನ್ನು ಪರಿಹರಿಸಲು ನೇಮಿಸಲಾಗಿತ್ತು.

ರಾಜ್ಯ ಮತ್ತು ಇಡೀ ದೇಶದಲ್ಲೇ ಕುಡಿಯುವ ನೀರಿನ ತೀವ್ರ ಅಭಾವದ ಹಿನ್ನೆಲೆಯಲ್ಲಿ ಕಳಸಾ–ಬಂಡೂರಿ ಯೋಜನೆಗೆ ಅನುಕೂಲಕರ ತೀರ್ಪು ನಿರೀಕ್ಷಿಸಲಾಗಿತ್ತು. ಆದ್ದರಿಂದ ಈ ತೀರ್ಪಿನ ವಿರುದ್ಧ ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಮಾತ್ರವಲ್ಲ, ಇದು ರಾಜ್ಯಕ್ಕೆ ಬಗೆದ ಅನ್ಯಾಯ ಎಂದು ಇಡೀ ರಾಜ್ಯದ ತುಂಬಾ ತೀವ್ರ ಆಕ್ರೋಶ ವ್ಯಕ್ತವಾಗಿದೆ. ರಾಜಕೀಯ ಪಕ್ಷಗಳು, ರೈತಸಂಘಗಳು, ಕನ್ನಡ–ಪರ ಸಂಘಟನೆಗಳು ತೀವ್ರ ಪ್ರತಿಭಟನೆ ಸಲ್ಲಿಸಿದ್ದು ಬಂದ್ ಮತ್ತು ಚಳುವಳಿಗೆ ಕರೆ ಕೊಟ್ಟಿವೆ. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು "ಇಡೀ ರಾಜ್ಯದ ಜನತೆಗೇ ಅನ್ಯಾಯವಾಗಿದೆ" ಎನ್ನುತ್ತಾ ತೀರ್ಪಿಗೆ "ತೀವ್ರ ಆತಂಕ ಹಾಗೂ ಆಕ್ಷೇಪವನ್ನು" ವ್ಯಕ್ತಪಡಿಸಿದೆ. ಕರ್ನಾಟಕ ಪ್ರಾಂತ ರೈತ ಸಂಘ ನ್ಯಾಯಾಧಿಕರಣದ ತೀರ್ಪು "ದುರದೃಷ್ಟಕರ" "ಈ ತೀರ್ಪನ್ನು ಒಪ್ಪುವುದಿಲ್ಲ' ಎಂದು ಹೇಳಿ, ಈ ಬಗ್ಗೆ "ಕೇಂದ್ರ ಸರಕಾರದ ದಿವ್ಯ ಮೌನವನ್ನು ಬಲವಾಗಿ" ಖಂಡಿಸಿದೆ.

ಈ ತೀರ್ಪಿಗೆ ತಕ್ಷಣದ ಪ್ರತಿಕ್ರಿಯೆಯಾಗಿ ರಾಜ್ಯ ಸರಕಾರ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಬೇಕೆಂದು ಸಾರ್ವತ್ರಿಕವಾಗಿ ಅಭಿಪ್ರಾಯ ವ್ಯಕ್ತವಾಗಿದೆ. ರಾಜ್ಯ ಸರಕಾರ ಸಹ ಇದಕ್ಕೆ ಸಿದ್ಧತೆ ನಡೆಸಿದೆ. ಆದ–ರೆ ಇದು ನಿಜವಾದ ಪರಿಹಾರವಲ್ಲ. ಮಾತುಕತೆಗಳ ಮೂಲಕವೇ ಅಂತಿಮವಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂಬುದರ ಬಗ್ಗೆ ಸಹ ಸಾಕಷ್ಟು ಸಹಮತ ಇದೆ. "ಪ್ರಧಾನಿ ಮೋದಿ ಅವರು ಕೂಡಲೇ ಮಧ್ಯಪ್ರವೇಶಮಾಡಿ ಸಂಬಂಧಪಟ್ಟ ಗೋವಾ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳ ಸಭೆ ಕರೆದು ನ್ಯಾಯಾಧಿಕರಣದ ಹೊರಗಡೆಯೇ ಪರಿಹಾರ ಕಂಡುಕೊಳ್ಳಬೇಕೆಂದು" ಒತ್ತಾಯಿಸಿರುವ ಸಿಪಿಐ(ಎಂ) "ಕುಡಿಯುವ ನೀರಿನಂತಹ ಜೀವನಾವಶ್ಯಕ ವಿಷಯದ ಬಗ್ಗೆ ರಾಜಕೀಯ ಲೆಕ್ಕಾಚಾರಮಾಡಿ ರಾಜ್ಯದ ಜನತೆಯ ತಾಳ್ಮೆಯನ್ನು ಪರೀಕ್ಷಿಸಬಾರದು" ಎಂದು ಆಗ್ರಹಿಸಿದೆ. "ಕೇಂದ್ರ ಸರಕಾರ ಅದರಲ್ಲೂ ಮುಖ್ಯವಾಗಿ ಶುಭ ದಿನಗಳನ್ನು ತರುವುದಾಗಿ ಹೇಳಿ ಪ್ರಧಾನ ಮಂತ್ರಿಯಾದ ನರೇಂದ್ರ ಮೋದಿಯವರು ತಕ್ಷಣವೇ ಮೂರು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆಯನ್ನು ನಡೆಸಿ ಮಾತುಕತೆಯ ಮೂಲಕ ಸಮಸ್ಯೆಯನ್ನು ಪರಿಹರಿಸಲು ಕ್ರಮ ವಹಿಸುವಂತೆ" ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಒತ್ತಾಯಿಸಿದೆ.

ನ್ಯಾಯಾಧಿಕರಣ ರಾಜ್ಯ ಸರಕಾರದ ಅರ್ಜಿಯನ್ನು ವಜಾ ಮಾಡಲು ಐದು ಪ್ರಮುಖ ಕಾರಣಗಳನ್ನು ಹೇಳಿದೆ. ಮೊದಲನೆಯದಾಗಿ, ಕಳಸಾ–ಬಂಡೂರಿ ಯೋಜನೆಯ ಪ್ರಕಾರ ನೀರು ಎತ್ತಲಾಗುವ ಮೂರು ಜಾಗಗಳಲ್ಲಿ 7.5 ಟಿಎಂಸಿ ನೀರು ಲಭ್ಯತೆ ಬಗ್ಗೆ ಕರ್ನಾಟಕ ಮಾಹಿತಿ ಒದಗಿಸದೆ ಒಟ್ಟು ಲಭ್ಯವಿರುವ 199 ಟಿಎಂಸಿ ನೀರಿನ ಬಗ್ಗೆ ಮಾತ್ರ ಹೇಳಿದೆ. ಎರಡನೆಯದಾಗಿ, ಪರಿಸರದ ಹಾಗೂ ಜೀವ ವೈವಿಧ್ಯದ ಸಮತೋಲನದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂಬ ಗೋವಾದ ವಾದವನ್ನು ಎತ್ತಿ ಹಿಡಿದಿದೆ. ಮೂರನೇಯದಾಗಿ, ಅದು ತಾತ್ಕಾಲಿಕ ರಚನೆ ಮತ್ತು ಉಪಕರಣಗಳ ಮೂಲಕ ಯೋಜನೆಯನ್ನು ಪೂರೈಸುವ ತಾಂತ್ರಿಕ ಸಾಧ್ಯತೆಯನ್ನು ಪ್ರಶ್ನಿಸುತ್ತಾ ಈ ಬಗ್ಗೆ ತನಗೆ ಮನವರಿಕೆಯಾಗಿಲ್ಲ ಎಂದಿದೆ. ಅವನ್ನು ಮುಂಗಾರಿನ ನಂತರ ತೆರವುಗೊಳಿಸಲಾಗುವುದು ಎಂಬುದರ ಬಗ್ಗೆ ಸಂದೇಹ ವ್ಯಕ್ತ ಪಡಿಸಿದೆ. ನಾಲ್ಕನೇಯದಾಗಿ, ಕರ್ನಾಟಕ ಯೋಜನೆಗೆ ಅಗತ್ಯವಾದ ಪರಿಸರ, ವನ್ಯಜೀವಿ ಮತ್ತಿತರ ಕಾಯಿದೆಗಳ ಪ್ರಕಾರ ಕೇಂದ್ರ ಸರಕಾರ ಮತ್ತು ನೀತಿ ಆಯೋಗದ ಅನುಮತಿ ಪಡೆದಿಲ್ಲ. ಐದನೆಯದಾಗಿ, ಮಲಪ್ರಭಾ ಜಲಾನಯನ ಪ್ರದೇಶದ ಒಳಹರಿವು, ಜಲಾನಯನದಲ್ಲಿನ ಮಳೆಯ ಪ್ರಮಾಣದ ಬಗ್ಗೆ ದಾಖಲೆ ಒದಗಿಸದೆ ಬರಿಯ ಬರಗಾಲದ ಪರಿಸ್ಥಿತಿಯನ್ನು ಮಾತ್ರ ಮುಂದು ಮಾಡಲಾಗಿದೆ ಎಂದಿದೆ.

ಯೋಜನೆಯ ತಾಂತ್ರಿಕ ಸಾಧ್ಯತೆ ವಿಶ್ಲೇಷಿಸುವುದಾಗಲಿ, ಪರಿಸರ ಮತ್ತಿತರ ಅನುಮತಿ ಬಗ್ಗೆ ತಪಾಸಣೆ ಮಾಡುವುದಾಗಲಿ ನ್ಯಾಯಾಧಿಕರಣದ ಅಳವಿಗೆ ಬರುವುದಿಲ್ಲ. ಅದು ಜಲ ಕಮಿಶನ್ ಮತ್ತಿತರ ಸಂಸ್ಥೆಗಳ ಕೆಲಸ. ನ್ಯಾಯಾಧಿಕರಣ ರಾಜ್ಯದ ಪಾಲಿನ ಬಗ್ಗೆ ಮುಖ್ಯವಾಗಿ ತೀರ್ಪು ನೀಡಬೇಕಾದ್ದು. ಆದರೂ ತೀರ್ಪಿನ ವಿವರಗಳನ್ನು ಅಧ್ಯಯನ ಮಾಡಿ ಮುಂದಿನ ಕ್ರಮ ವಹಿಸುವುದಾಗಿ ರಾಜ್ಯ ಸರಕಾರದ ಪರವಾಗಿ ವಾದಿಸಿದ ಕಾನೂನು ತಂಡ ತೀರ್ಪಿನ ಬಗ್ಗೆ ಮೊದಲ ಪ್ರತಿಕ್ರಿಯೆಯಲ್ಲಿ ಹೇಳಿದೆ. ಮೂರು ರಾಜ್ಯಗಳ ನಡುವೆ ಮಹದಾಯಿ ನದಿನೀರಿನ ಹಂಚಿಕೆಯ ಪ್ರಶ್ನೆ ಇತ್ಯರ್ಥವಾಗದೆ ಕಳಸಾ–ಬಂಡೂರಿ ಯೋಜನೆಗೆ ನೀರು ಕೊಡಲು ಅರ್ಜಿ ಹಾಕುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹಲವು ಕಾನೂನು ತಜ್ಞರು ಹೇಳಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ವಿವಾದವನ್ನು ಮಾತುಕತೆಗಳ ಮೂಲಕ ಪರಿಹರಿಸಬೇಕು. ಇದು ಜೀವನಾಶ್ಯಕ ಕುಡಿಯುವ ಮತ್ತು ಕೃಷಿಗೆ ನೀರಿನ ಪ್ರಶ್ನೆಯಾಗಿದ್ದು ಇದು ತೀವ್ರವಾದ ಭಾವನಾತ್ಮಕ ಪ್ರಶ್ನೆ ಸಹ. ಕಳಸಾ–ಬಂಡೂರಿ ಯೋಜನೆಗಾಗಿ ಜನತೆ ಕಳೆದ 15 ವರ್ಷಗಳಿಂದ ಒತ್ತಾಯಿಸುತ್ತಿದ್ದು, ಇದು ಪ್ರಮುಖ ರಾಜಕೀಯ ಪ್ರಶ್ನೆ ಸಹ. ಇದನ್ನು ತುರ್ತಾಗಿ ಪರಿಹರಿಸಬೇಕು. ಇಲ್ಲದಿದ್ದರೆ ನೆರೆಯ ರಾಜ್ಯಗಳ ಜನತೆಯ ನಡುವೆ ಕಹಿ ಭಾವನೆ, ವೈರತ್ವ, ಹಿಂಸಾಚಾರಕ್ಕೆ ಎಡೆ ಮಾಡಿಕೊಡುತ್ತದೆ. ಇದು ಎಲ್ಲಾ ರಾಜಕೀಯ ಪಕ್ಷಗಳನ್ನು ಬಾಧಿಸಬೇಕಾದ ಪ್ರಶ್ನೆ ಸಹ. ಆದರೂ ರಾಜ್ಯದ ಪ್ರಮುಖ ಎರಡು ರಾಷ್ಟ್ರೀಯ ಪಕ್ಷಗಳೂ ಮತ್ತು ಪ್ರಾದೇಶಿಕ ಪಕ್ಷ ವಿವಿಧ ಅವಧಿಯಲ್ಲಿ ಕೇಂದ್ರ ಮತ್ತು ಸಂಬಂಧಿತ ರಾಜ್ಯ ಸರಕಾರಗಳಲ್ಲಿ ಅಧಿಕಾರದಲ್ಲಿದ್ದರೂ 15 ವರ್ಷಗಳಿಂದ ವಿವಾದವನ್ನು ಪರಿಹರಿಸಲು ಗಂಭೀರ ಪ್ರಯತ್ನ ಮಾಡಿಲ್ಲ. ಕಳೆದ ಒಂದು ವರ್ಷದಿಂದ ತೀವ್ರ ಹೋರಾಟ ನಡೆಯುತ್ತಿದ್ದರೂ ಈಗಲೂ ಮಾಡುತ್ತಿಲ್ಲ. ಬದಲಾಗಿ ಪಕ್ಷಗಳ ನಡುವಿನ ಪೈಪೋಟಿ ಮತ್ತು ಹಗ್ಗ–ಜಗ್ಗಾಟಕ್ಕೆ ಬಳಸುತ್ತಿವೆ. ಅದನ್ನು ರಾಜಕೀಯ ದಾಳವಾಗಿ ಬಳಸಲಾಗುತ್ತಿದೆ.

ಬಿಜೆಪಿ ಸರಕಾರ ಇದ್ದಾಗ 2002ರಲ್ಲಿ ಈ ಯೋಜನೆಗೆ ಭಾರತ ಸರಕಾರದ ಜಲಸಂಪನ್ಮೂಲ ಇಲಾಖೆಯಿಂದ ತಾತ್ವಿಕ ಒಪ್ಪಿಗೆ ಸಿಕ್ಕಿತ್ತು. ಆದರೆ ಐದೇ ತಿಂಗಳಲ್ಲಿ ಕೇಂದ್ರ ಜಲ ಆಯೋಗ ತನ್ನ ಒಪ್ಪಿಗೆಗೆ ತಡೆ ಆಜ್ಞೆ ನೀಡಿತು. ಇದುವೇ ಸಮಸ್ಯೆಯ ಮೂಲ. 2004 ರ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಗೋವಾದಲ್ಲಿ ಸೋನಿಯಾ ಗಾಂಧಿ ಮಹದಾಯಿ ನೀರು ಕರ್ನಾಟಕಕ್ಕೆ ಕೊಡಲು ಬಿಡುವುದಿಲ್ಲ ಎಂದು ಘೋಷಿಸಿದರು. ರಾಜ್ಯದಲ್ಲಿ ಬಿಜೆಪಿ ಸರಕಾರ ಇರುವಾಗ ಈ ಯೋಜನೆಗೆ ಶಂಕು ಸ್ಥಾಪನೆ ಆಯಿತು. ಯುಪಿಎ ಕೇಂದ್ರ ಸರಕಾರ ನಡೆಸುತ್ತಿದ್ದಾಗ ಕಾಂಗ್ರೆಸ್–ಜೆಡಿಎಸ್ ಸರಕಾರ ರಾಜ್ಯದಲ್ಲಿದ್ದಾಗಲೂ ಸಮಸ್ಯೆ ಬಗೆಹರಿಸುವ ಗಂಭೀರ ಪ್ರಯತ್ನ ನಡೆಸಲಿಲ್ಲ. ಈಗ ಕರ್ನಾಟಕ ಬಿಟ್ಟರೆ ಇತರ ಎರಡೂ ರಾಜ್ಯಗಳಲ್ಲೂ ಕೇಂದ್ರದಲ್ಲೂ ಬಿಜೆಪಿ ಸರಕಾರ ಇದ್ದರೂ, ಉತ್ತರ ಕರ್ನಾಟಕ ಮತ್ತು ರಾಜ್ಯದಿಂದ ಬಹುಸಂಖ್ಯಾತ ಬಿಜೆಪಿ ಲೋಕಸಭಾ ಸದಸ್ಯರು ಇದ್ದರೂ, ಪ್ರಧಾನಿ ಬಳಿ ಸರ್ವಪಕ್ಷ ನಿಯೋಗ ಹೋದರೂ ಸಮಸ್ಯೆ ಬಗೆಹರಿಸುವ ಲಕ್ಷಣಗಳೇ ಕಾಣಿಸುತ್ತಿಲ್ಲ.

ಇದು ಯಾಕೆ ಹೀಗೆ? ಒಂದು ಕಾರಣವಂತೂ ಸ್ಪಷ್ಟವಿದೆ. ಬೂರ್ಜ್ವಾ–ಭೂಮಾಲಕ ಪಕ್ಷಗಳು ಜನರ ಗಮನ ಬೇರೆಡೆಗೆ ತಿರುಗಿಸಲು, ವಿವಿಧ ರಾಜ್ಯಗಳ ಜನರ ಐಕ್ಯತೆ ಮುರಿಯಲು, ಸುಳ್ಳು ಆಶ್ವಾಸನೆಗಳನ್ನು ಕೊಡುತ್ತಾ ಇರಲು ಕೆಲವು ಸಮಸ್ಯೆಗಳನ್ನು 'ಸರ್ವ ಪಕ್ಷಗಳ ಸಹಮತ'ದಿಂದ 'ಜೀವಂತ'ವಾಗಿಡುತ್ತಾರೆ. ಗಡಿ, ಜಲವಿವಾದಗಳು ಖಂಡಿತ ಇವುಗಳಲ್ಲಿ ಸೇರಿರುತ್ತವೆ. ಆದರೆ ಬರಿಯ ಅಷ್ಟೇನಾ? ಬಿಜೆಪಿಯ ಸಂಸದರ ಮೇಲೆ ವೈಯಕ್ತಿಕವಾಗಿ ಮಹದಾಯಿ ಚಳುವಳಿಗಾರರ ಸತತ ದಾಳಿ, ಆಕ್ರೋಶ ಇದ್ದರೂ, ತಮ್ಮ ರಾಜಕೀಯ ಜೀವನಕ್ಕೆ ಮುಳುವಾಗಬಹುದು ಎಂಬ ಅಪಾಯ ಇದ್ದಾಗಲೂ ಇದನ್ನು ಮುಂದುವರೆಸುವಷ್ಟು ಬಲವಾದ ಕಾರಣವೇ ಇದು.


ಹಾಗೆ ಅನಿಸುವುದಿಲ್ಲ. ಇನ್ನಷ್ಟು ಬಲವಾದ ಕಾರಣ ಇರಬೇಕು. ಅಂತಹ ಕಾರಣ ಏನಿರಬಹುದು ಎಂಬುದನ್ನು ಕರ್ನಾಟಕ ಪ್ರಾಂತ ರೈತ ಸಂಘದ ಹೇಳಿಕೆ ಸರಿಯಾಗಿಯೇ ಗುರುತಿಸಿದೆ – "ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮತ್ತು ಮುಖ್ಯವಾಗಿ, ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯ ಪಕ್ಷಗಳು ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣದ ನೀತಿಗಳನ್ನು ಅನುಸರಿಸುತ್ತಿವೆ. ಹೀಗಾಗಿ ಪ್ರಾಕೃತಿಕ ಸಂಪನ್ಮೂಲಗಳನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ಒಳಪಡಿಸುತ್ತಿರುವುದು ಈಗಾಗಲೇ ನಮಗೆಲ್ಲಾ ತಿಳಿದ ವಿಷಯವಾಗಿದೆ. ಪರಿಣಾಮವಾಗಿ, ಹಲವು ರಾಜ್ಯಗಳಲ್ಲಿ ನದಿಗಳನ್ನೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಈಗಲೂ ಕುಡಿಯುವ ನೀರಿನ ಮೂಲಗಳು ಮತ್ತು ಕುಡಿಯುವ ನೀರು ಸರಬರಾಜನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡಲು ಕ್ರಮವಹಿಸಲಾಗುತ್ತಿದೆ. ಇಂತಹ ಬಹುರಾಷ್ಟ್ರೀಯ ಸಂಸ್ಥೆಗಳ ಲಾಬಿಗೆ ಮಣಿದ ಈ ಸರಕಾರಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಮೇಲಾಗಿ ಎರಡೂ ಸರಕಾರಗಳಿಗೆ ವ್ಯವಸಾಯವೂ, ರೈತರು ಮತ್ತು ಕೂಲಿಕಾರರು ಹಾಗೂ ಕಸುಬುದಾರರ ಕೈಯಲ್ಲಿ ಉಳಿಯುವುದು ಬೇಕಾಗಿಲ್ಲ. ಈಗಾಗಲೇ ಅವುಗಳು, ವ್ಯವಸಾಯವನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ವಹಿಸಿಕೊಡುವ ಕಂಪೆನಿ ಕೃಷಿಗೆ ಬೇಕಾದ ಕ್ರಮಗಳನ್ನು ಅನುಸರಿಸುತ್ತಿವೆ. ಈ ಕಾರಣಗಳಿಂದಾಗಿಯೇ, ಕೇಂದ್ರದಲ್ಲಿ ಇದುವರೆಗೆ ಯಾವುದೇ ಸರಕಾರ ಅಧಿಕಾರಕ್ಕೆ ಬಂದರೂ ಇದನ್ನು ಮಾತುಕತೆಯ ಮೂಲಕ ಇತ್ಯರ್ಥ ಪಡಿಸಲು ಪ್ರಯತ್ನಿಸುತ್ತಿಲ್ಲ." ಇದು ನೂರಕ್ಕೆ ನೂರು ನಿಜ.

ಆದ್ದರಿಂದ ಮಹದಾಯಿ ವಿವಾದದಂತಹ ಸಮಸ್ಯೆಗಳನ್ನು 'ಜೀವಂತ'ವಾಗಿಡುವ ಕಾಂಗ್ರೆಸ್–ಬಿಜೆಪಿ–ಜೆಡಿಎಸ್ ಗಳ ಈ 'ರಾಜಕೀಯ ಮುಖ'ವನ್ನು ಜನತೆಯ ಮಧ್ಯೆ ಪ್ರಚಾರಾಂದೋಲನದ ಮೂಲಕ ಬಯಲು ಮಾಡಬೇಕು. ವಿಪರೀತ ಹಿಂಸಾಚಾರ, ನೆರೆ ರಾಜ್ಯಗಳ ಬಗ್ಗೆ ದ್ವೇಷ/ಸೇಡು ಹೊತ್ತಿಸಬಲ್ಲ, ಅರಾಜಕತೆಗೆ ಎಡೆ ಮಾಡಿಕೊಡಬಲ್ಲ ಭಾವನಾತ್ಮಕ ಚಳುವಳಿಯನ್ನು ಈ ಪಕ್ಷಗಳ ನವ–ಉದಾರವಾದಿ ರಾಜಕೀಯದ ವಿರುದ್ಧ ತಿರುಗಿಸಬೇಕಾದ್ದು ಜನ–ಪರ ರಾಜಕೀಯ ಪಕ್ಷಗಳ, ರೈತ–ಕೃಷಿಕೂಲಿಕಾರರ ಸಂಘಗಳ, ಎಡ ಪಕ್ಷ/ಚಳುವಳಿಗಳ ಕರ್ತವ್ಯವಾಗಿದೆ. ■

## ಈ ವಾರ ಚರಿತ್ರೆಯಲ್ಲಿ

**25 ಜುಲೈ 2005**

### ಗುಡ್‌ಗಾಂವ್ ಹೊಂಡಾ ಕಾರ್ಮಿಕರ ಮೇಲೆ ಕ್ರೂರ ದಾಳಿ



ಒಬ್ಬ ಕಾರ್ಮಿಕನನ್ನು ಅಧಿಕಾರಿಯೊಬ್ಬ ಥಳಿಸಿದ್ದನ್ನು ಪ್ರತಿಭಟಿಸಿದ್ದ 50ಕ್ಕೂ ಹೆಚ್ಚು ಕಾರ್ಮಿಕರ ವಜಾ ವಿರುದ್ಧ ಮಿಂಚಿನ ಮುಷ್ಕರವನ್ನು ದಮನ ಮಾಡಲು ಪೋಲಿಸರು ನಡೆಸಿದ ಕ್ರೂರ ದಾಳಿಯಲ್ಲಿ 700 ಕಾರ್ಮಿಕರು ಗಾಯಗೊಂಡರು. ಗುಡಗಾಂವ್ ಅಂದು ರಣರಂಗವಾಗಿತ್ತು. ಇದು ಹೊಂಡಾ ಮ್ಯಾನೇಜ್ ಮೆಂಟ್, ಕಾಂಗ್ರೆಸಿನ ಹೂಡಾ ಸರಕಾರ ಯೋಜಿಸಿದ ಕ್ರೂರ ದಾಳಿಯಾಗಿತ್ತು. ಹಲವು ತಿಂಗಳುಗಳ ಕಾಲ ನಡೆದ ಮ್ಯಾನೇಜ್ ಮೆಂಟ್/ಸರಕಾರದ ದುಷ್ಟಕೂಟ ಮತ್ತು ಕಾರ್ಮಿಕರ ನಡುವೆ ತೀವ್ರ ಸಂಘರ್ಷ, ನವ–ಉದಾರವಾದಿ ದಾಳಿಯ ವಿರುದ್ಧ ಕೈಗಾರಿಕಾ ಕಾರ್ಮಿಕರ ಹೋರಾಟದ ಹೊಸ ಸಮರಶೀಲ ಅಧ್ಯಾಯದ ಆರಂಭವಾಗಿತ್ತು.

# ಉತ್ತರ ಕನ್ನಡ ಜಿಲ್ಲಾಧಿಕಾರಿ ಕಛೇರಿ ಸುತ್ತ ನಿಷೇಧಕ್ಕೆ ಹೈಕೋರ್ಟ್ ತಡೆ

ಉತ್ತರ ಕನ್ನಡ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳು 2015ರ ಅಗಸ್ಟ್ 14ರಿಂದ ಜಿಲ್ಲಾಧಿಕಾರಿ ಕಛೇರಿ ಸುತ್ತ 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಹೊರಡಿಸಿದ್ದರು. ಇವರ ಆದೇಶ ಸಮರ್ಥನೆಗಾಗಿ ಶೋಷಣೆಗೊಳಗಾದ, ಹಿಂದುಳಿದ, ರೈತ–ಕಾರ್ಮಿಕ, ಮಹಿಳೆಯರ, ವಿದ್ಯಾರ್ಥಿ–ಯುವಜನರ, ದಲಿತರ ಪರ ಹೋರಾಡುವ ಸಿಪಿಐ(ಎಂ) ಪಕ್ಷ ಮತ್ತು ದಲಿತ ಸಂಘರ್ಷ ಸಮಿತಿಯ ಹೆಸರನ್ನು ಉಲ್ಲೇಖಿಸಿ ಕಲಂ 35 ಜಾರಿ ಮಾಡಿರುವುದರ ಹಿನ್ನೆಲೆ ತೀರಾ ಅಪಮಾನಕಾರಿಯಾದುದಾಗಿತ್ತು. ಇವರ ಹೋರಾಟದಿಂದ ತಮ್ಮ ಕಛೇರಿ ಕೆಲಸಕ್ಕೆ ತೊಂದರೆ–ಯಾಗುತ್ತಿದ್ದು ಇದನ್ನು ಶಾಶ್ವತವಾಗಿ ನಿಯಂತ್ರಿಸಲು ಕರ್ನಾಟಕ ಪೋಲಿಸ್ ಕಾಯ್ದೆ ಕಲಂ 35 ಪ್ರಕಾರ ನಿಷೇಧಾಜ್ಞೆ ಹೊರಡಿಸಿರುವುದಾಗಿಯೂ, ಮನವಿ ಸಲ್ಲಿಸಲು ಕೇವಲ 5–10 ಜನ ತನ್ನ ಕಛೇರಿಗೆ ಬನ್ನಿ ಎಂದು ಹಿಂದಿನ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಗೆ ಆದೇಶಿಸಿದ್ದರು.

ಈ ಆದೇಶಕ್ಕೆ ಕಾನೂನು ರೀತ್ಯಾ ಕೇವಲ 15 ದಿನಗಳ ಅವಕಾಶವಿದ್ದರೂ ಕಳೆದ 11 ತಿಂಗಳಿಂದ ಜಿಲ್ಲಾ ಮಟ್ಟದಲ್ಲಿ ಯಾವುದೇ ವಿಭಾಗದ ಹೋರಾಟ ನಡೆದರೂ ಅದನ್ನು ಪ್ರಜಾಸತ್ತಾತ್ಮಕವಾಗಿ ನಡೆಯಲು ಬಿಡಲಿಲ್ಲ. ಜಿಲ್ಲೆಯ ಜನತೆಯು ತಮ್ಮ ಹಲವಾರು ಸಮಸ್ಯೆಗಳನ್ನು ಎತ್ತಿಕೊಂಡು ಜಿಲ್ಲಾಡಳಿತಕ್ಕೆ ಬಂದರೆ 200 ಮೀ. ಪ್ರದೇಶದಲ್ಲಿ ಎಲ್ಲಿಯೂ ಹೋಗಲು ಬಿಡುತ್ತಿರಲಿಲ್ಲ. ಜಿಲ್ಲಾ ಪಂಚಾಯತ್, ತಹಶಿಲ್ದಾರ ಕಛೇರಿ ಇನ್ನಿತರೇ ಪ್ರಮುಖ ಕಛೇರಿಗಳ ಮುಖ್ಯಸ್ಥರನ್ನು ಹೋರಾಟಗಾರರು ಸ್ಥಳಕ್ಕೆ ಕರೆಯಿಸಿಕೊಳ್ಳಲು ತುಂಬಾ ತೊಂದರೆ ಆಗಿತ್ತು.

ಈ ಆಜ್ಞೆ ಕೇವಲ ನಮ್ಮ ಪಕ್ಷಕ್ಕೆ ಮಾತ್ರವಲ್ಲ ಮುಂದೆ ಜನರ ಸಮಸ್ಯೆಗಳನ್ನಿಟ್ಟು ಹೋರಾಡುವ ಎಲ್ಲಾ ಪಕ್ಷಗಳಿಗೂ, ಸಂಘಟನೆಗಳಿಗೂ, ವ್ಯಕ್ತಿಗಳಿಗೂ ಅನ್ವಯವಾಗುತ್ತದೆ. ಹಾಗಾಗಿ ಈ ಕಾಯ್ದೆಯು ದಂಡಾಧಿಕಾರಿಗಳಿಗೆಕೊಡಮಾಡಿರುವಅಧಿಕಾರವನ್ನು, ಜನರ ಪ್ರಜಾಸತ್ತಾತ್ಮಕ ಹಕ್ಕು ಕಸಿಯಲು ಬಳಸುವುದಕ್ಕೆ ಪ್ರಜಾಪ್ರಭುತ್ವವಾದಿಗಳೆಲ್ಲರೂ ಸೇರಿ ವಿರೋಧಿಸಲು ಪಕ್ಷ ಕರೆಕೊಟ್ಟಿತ್ತು.

ಕಳೆದ ಒಂದುವರೆ ವರ್ಷದಿಂದ (ಮೊದಲ ಆಜ್ಞೆ 4–2–2015) ಜಿಲ್ಲಾಧಿಕಾರಿ ಕಛೇರಿ ಸುತ್ತಲಿನ ನಿಷೇಧಾಜ್ಞೆತೆರವುಗೊಳಿಸಬೇಕೆಂದು ಈ ಆಜ್ಞೆಗೆ ಶಾಶ್ವತ ಸ್ವರೂಪ ನೀಡುವ ಅಂಶ ಕಾನೂನಿನಲ್ಲಿಲ್ಲದಿದ್ದರೂ 11 ತಿಂಗಳಿಂದ ಹೇರುತ್ತ ಬಂದ ನಿಷೇದಾಜ್ಞೆಯನ್ನು ವಿರೋಧಿಸುತ್ತ ಬರಲಾಗಿತ್ತು.

ಕಾನೂನು ಬದ್ಧವಲ್ಲದ ಈ "ಶಾಶ್ವತ" ನಿಷೇಧಾಜ್ಞೆಗೆ ಕರ್ನಾಟಕ ಹೈಕೋರ್ಟ್ ಧಾರವಾಡ ಪೀಠ ದಿನಾಂಕ: 26–07–2016 ರಂದು ತಡೆಯಾಜ್ಞೆ ನೀಡಿದೆ. ರಿಟ್ ಪಿಟಿಶನ್ ಸಂಖ್ಯೆ 106100/2016 ನ್ನು ಕೈಗೆತ್ತಿಕೊಂಡ ಮಾನ್ಯ ಹೈಕೋರ್ಟ್‌ನ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಪಿ.ದಿನೇಶಕುಮಾರ ಇರುವ ಪೀಠವು ವಾಗ್ವಾದ ಆಲಿಸಿ ಪ್ರಜಾಪ್ರಭತ್ವ ಹಕ್ಕುಗಳನ್ನು ಎತ್ತಿಹಿಡಿಯಲು ಮುಂದಾಗಿ ತಡೆಯಾಜ್ಞೆ ನೀಡಿರುವುದು ದುಡಿಯುವ ಜನತೆಯ ಚಳುವಳಿಗೆ ಸಂತಸ ತಂದಿದೆ. ಸಂವಿಧಾನ ಬದ್ಧ ಪ್ರಜಾಸತ್ತಾತ್ಮಕ ಹಕ್ಕು ರಕ್ಷಣೆಗೆ ನಡೆಯುವ ಹೋರಾಟಕ್ಕೆ ಸ್ಫೂರ್ತಿಕೊಟ್ಟಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಉತ್ತರ ಕನ್ನಡ ಜಿಲ್ಲಾ ಸಮಿತಿ ತಿಳಿಸಿದೆ.

ಇನ್ನು ಮುಂದೆ ಪ್ರಜಾತಂತ್ರ ವ್ಯವಸ್ಥೆಗೆ ಅವಹೇಳನಕಾರಿಯಾಗುವ ಮತ್ತು ಜಿಲ್ಲೆಯ ಜನತೆಗೆ, ಎಲ್ಲಾ ವಿಭಾಗಗಳ ಜನ ಚಳುವಳಿಗೆ ಅಪಮಾನಕರವಾಗುವಂಥ ಇಂಥ ಆದೇಶವನ್ನು ಚಳುವಳಿಗಳ ಮೇಲೆ ಹೇರಬಾರದೆಂದು ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಒತ್ತಾಯಿಸುತ್ತೇವೆ. ಈಗಲಾದರೂ ಮಾನ್ಯ ಉಸ್ತುವಾರಿ ಸಚಿವರು ಹೋರಾಟದ ಹಕ್ಕು ರಕ್ಷಿಸಲು ಸರ್ಕಾರದಿಂದ ಸೂಕ್ತ ನಿರ್ದೇಶನ ನೀಡಬೇಕೆಂದು, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮತ್ತು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶಾಂತರಾಮ ನಾಯಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ಕಂದಾಯ ಮೀಸಲು ಸ್ಥಳದಲ್ಲಿ ಮನೆ ಕಟ್ಟಿದ ಜನತೆಗೆ ಹಕ್ಕು ಪತ್ರ ಕೊಡಲು ಆಗ್ರಹ



ಉಡುಪಿ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶದ ಸರಕಾರಿ ಜಾಗದಲ್ಲಿ ಮನೆ ನಿರ್ಮಿಸಿ ವಾಸಮಾಡುತ್ತಿರುವ ಜನತೆಗೆ ಹಕ್ಕು ಪತ್ರ ನೀಡಲು ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ವತಿಯಿಂದ ಸರ್ಕಾರವನ್ನು ಆಗ್ರಹಿಸಲಾಯಿತು.

ಜುಲೈ 26ರಂದು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸಭಾಭವನ, ಸೌಕೂರು ಗುಲ್ವಾಡಿಯಲ್ಲಿ – ಕರ್ಕುಂಜೆ, ಗುಲ್ವಾಡಿ ಹಾಗೂ ಕೆಂಚನೂರು ಗ್ರಾಮಗಳ 94ಸಿ ಅರ್ಜಿದಾರರ ಬೃಹತ್ ಸಮಾವೇಶ ನಡೆಸುವ ಮೂಲಕ ಒತ್ತಾಯಿಸಲಾಯಿತು. ಸಮಾವೇಶವನ್ನು ಎಐಎಡಬ್ಲ್ಯೂಯು ಉಡುಪಿ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿ ಉದ್ಘಾಟನೆ ಮಾಡಿದರು. ಕುಂದಾಪುರ ತಾಲೂಕು ಅ ಧ್ಯಕ್ಷ ರಾಜೀವ ಪಡುಕೋಣೆ, ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕಂದಾಯ ಇಲಾಖೆ ಮೀಸಲಿಟ್ಟ ಸ್ಥಳದಲ್ಲಿ ಮನೆ ಕಟ್ಟಿ ಕುಳಿತ ಫಲಾನುಭವಿಗಳಿಗೆ ಯಾವುದೇ ಕಾರಣಕ್ಕೂ 94 ಸಿ ಅರ್ಜಿಗಳನ್ನು ತಿರಸ್ಕರಿಸದೇ ಮಂಜೂರಾತಿ ನೀಡಬೇಕು. ಈ ಬಗ್ಗೆ ಆಗಸ್ಟ್ 2016ರಂದು ಕುಂದಾಪುರ ತಹಶೀಲ್ದಾರ್ ಕಛೇರಿ ಎದುರು ಜರುಗುವ ಬೃಹತ್ ಪ್ರತಿಭಟನಾ ಸತ್ಯಾಗ್ರಹವನ್ನು ಯಶಸ್ಸುಗೊಳಿಸಲು ಸಮಾವೇಶದಲ್ಲಿ ತೀರ್ಮಾನಿಸಲಾಯಿತು.



ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಗೋಪಾಲ ಮಾವಿನಕೆರೆ, ಅಣ್ಣಪ್ಪ ಅಬ್ಬಿಗುಡ್ಡೆ, ಸುಬ್ಬ ಡಿ. ಪಂಜು ಪೂಜಾರಿ, ನಾಗರತ್ನ ನಾಡ, ಜಿ.ಟಿ. ಮಹಮ್ಮದ್ ಗುಲ್ವಾಡಿ ಉಪಸ್ಥಿತರಿದ್ದರು. ಸಿಐಟಿಯು ಮುಖಂಡ ರಮೇಶ ಪೂಜಾರಿ ಸ್ವಾಗತಿಸಿದರು. ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಕಾರ್ಯಕ್ರಮವನ್ನು ನಿರೂಪಿಸಿದರು. ಈ ಸಂದರ್ಭದಲ್ಲಿ ಗುಲ್ವಾಡಿ ಹಾಗೂ ಕೆಂಚನೂರು ಗ್ರಾಮಗಳ 94ಸಿ ಅರ್ಜಿದಾರರ ಹೋರಾಟ ಸಮಿತಿಯನ್ನು ರಚಿಸಲಾಯಿತು.

ಗುಲ್ವಾಡಿ ಗ್ರಾಮ ವ್ಯಾಪ್ತಿಯ ಡಿ.ಸುಬ್ಬ, ಅಣ್ಣಪ್ಪ ಅಬ್ಬಿಗುಡ್ಡೆ, ಗೀತಾ, ಗಿರಿಜ, ಶಂಕರ ಪೂಜಾರಿ, ಶ್ಯಾಮಲ, ಕೆಂಚನೂರು ಗ್ರಾಮ ವ್ಯಾಪ್ತಿಯ ಶ್ರೀಲತಾ, ರಾಮ, ಸುಬ್ಬಯ್ಯ, ಕರ್ಕುಂಜೆ ಗ್ರಾಮ ವ್ಯಾಪ್ತಿಯ ಸಂತೋಷ, ಉದಯ ಗಾಣಿಗ, ಲೋಕೇಶ, ದುರ್ಗಿ, ಸೀತ, ಅಕ್ಕಮ್ಮ, ಗಿರಿಜ, ಶಾರದಾ ಮತ್ತು ಚಂದ್ರ ನಾರಾಯಣ ಪೂಜಾರಿ, ಇವರನ್ನು ಸಂಚಾಲಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಜುಲೈ 27ರಂದು ಗುಲ್ವಾಡಿ ಗಂಗೊಳ್ಳಿ, ತ್ರಾಸಿ ಹಾಗೂ ಹೊಸಾಡು ಗ್ರಾಮವಾಸಿಗಳ ಸಮಾವೇಶವು ಗುಜ್ಜಾಡಿ ನಾರಾಯಣಗುರು ಸಭಾಭವನದಲ್ಲಿ ನಡೆಸಲಾಯಿತು. 94 ಸಿ ಅರ್ಜದಾರರು ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ದಿನಾಂಕ: 4 ಮತ್ತು 6 ಆಗಸ್ಟ್ 2016 ರಂದು ಕ್ರಮವಾಗಿ ಬೈಂದೂರು ಮತ್ತು ಕುಂದಾಪುರ ತಹಶೀಲ್ದಾರ್ ಕಛೇರಿ ಮುತ್ತಿಗೆ ಹೋರಾಟ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆಕೊಟ್ಟರು. ಮುಖಂಡರಾದ ಶ್ರೀನಿವಾಸ ಪೂಜಾರಿ, ಚಿಕ್ಕಯ್ಯ ಮೊಗವೀರ ಗಂಗೊಳ್ಳಿ, ಮಹಾಬಲ ವಡೇರಹೋಬಳಿ, ನಾಗರತ್ನ ನಾಡ, ಶೀಲಾವತಿ ಪಡುಕೋಣೆ ಉಪಸ್ಥಿತರಿದ್ದರು.

ತಲ್ಲೂರು, ಹಟ್ಟಿಯಂಗಡಿ, ಕನ್ಯಾನ, ಕಟ್‌ಬೆಲ್ತೂರು, ದೇವಲ್ಕುಂದ, ಹೆಮ್ಮಾಡಿ, ನೂಜಾಡಿ, ಕುಂದಬಾರಂದಾಡಿ, ಹಕ್ಲಾಡಿ ಗ್ರಾಮಗಳ ಅರ್ಜಿದಾರರ ಬೃಹತ್ ಸಮಾವೇಶವು ಜುಲೈ 27ರಂದು ಹೆಮ್ಮಾಡಿ ಆದರ್ಶ ಯುವಕ ಮಂಡಲದ ಸಭಾಂಗಣದಲ್ಲಿ ಜರಗಿತು. ತಾಲೂಕು ಅ ಧ್ಯಕ್ಷ ಎಚ್. ವಿಠಲ ಪೂಜಾರಿ ಮಾತನಾಡಿದರು. ಮುಖಂಡರಾದ ಹೆಮ್ಮಾಡಿ ನರಸಿಂಹ, ಸುಂದರ ಎನ್. ಹಟ್ಟಿಯಂಗಡಿ, ನಾಗರತ್ನ ನಾಡ, ಶೀಲಾವತಿ ಉಪಸ್ಥಿತರಿದ್ದರು. ಅಶೋಕ ಹಟ್ಟಿಯಂಗಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಕುಂದಾಪುರ ತಾಲೂಕಿನ ಅಂಪಾರು, ಕಾವ್ರಾಡಿ, ಹಳ್ನಾಡು, ಗ್ರಾಮಸ್ಥರ ಬೃಹತ್ ಸಮಾವೇಶವು ಕಂಡ್ಲೂರಿನ ಭವಾನಿ ಕಲ್ಯಾಣ ಮಂಟಪದಲ್ಲಿ ಜುಲೈ 26ರಂದು ನಡೆಯಿತು. ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷ ಎಚ್. ನರಸಿಂಹರವರು ಸಮಾವೇಶ ಉದ್ಘಾಟಿಸಿದರು. ಮುಖಂಡರಾದ ಗೋಪಾಲ ಶೆಟ್ಟಿಗಾರ ಬಸ್ರೂರು, ರಮೇಶ ಪೂಜಾರಿ ಗುಲ್ವಾಡಿ, ನಾಗರತ್ನ ನಾಡ, ಕುಶಲ, ಪದ್ಮಾವತಿ ಶೆಟ್ಟಿ, ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಅಂಪಾರು, ಕಾವ್ರಾಡಿ, ಹಳ್ನಾಡು, ಗ್ರಾಮಗಳ ವ್ಯಾಪ್ತಿಯ 94ಸಿ ಅರ್ಜಿದಾರರ ಹೋರಾಟ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಅಂಪಾರು ಗ್ರಾಮ ವ್ಯಾಪ್ತಿಯ ಎಸ್. ದಿವಾಕರ ಶೆಟ್ಟಿ, ಶೇಖರ ಶೆಟ್ಟಿ, ಮಲ್ಲಪ್ಪ, ಸರೋಜ, ಶ್ರೀಮತಿ, ಅಣ್ಣಪ್ಪ, ರೇವತಿ, ಕಾವ್ರಾಡಿ ಗ್ರಾಮ ವ್ಯಾಪ್ತಿಯ ನೂರ್‌ಜಹಾನ್, ಎಸ್. ಮಹಮ್ಮದ್ ಹನೀಫ್, ಕೆ. ಶೇಖ್ ಉಮ್ಮರ್, ಶ್ಯಾಮಲ, ಜಯಂತಿ ಕೊಠಾರಿ, ನಾಗಪೂಜಾರಿ ಮುಂಭಾರ, ಗಣೇಶ ಮೊಗವೀರ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

# ಇಟಗಿಯಲ್ಲಿ ದಲಿತರ ಮೇಲೆ ಜಾತಿ ನಿಂದನೆ: ಎಸ್‌ಎಫ್‌ಐ ಖಂಡನೆ

ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕಿನ ಇಟಗಿ ಗ್ರಾಮದಲ್ಲಿ ದಲಿತರಿಗೆ ಕ್ಷೌರ ನಿರಾಕರಣೆ ಮಾಡಿ ಕ್ಷೌರ ಮಾಡಿಸಲು ಬಂದಿದ್ದ ದಲಿತ ವ್ಯಕ್ತಿಗೆ ಅರ್ಧ ಕ್ಷೌರ ಮಾಡಿ ಅಂಗಡಿಯಿಂದ ಹೊರ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸ್ ಇಲಾಖೆ ಐದು ಜನ ಕ್ಷೌರಿಕರ ಮೇಲೆ ಜುಲೈ 25ರಂದು ದೂರು ದಾಖಲಿಸಿ ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ದಲಿತರಿಗೆ ಕ್ಷೌರ ನಿರಾಕರಣೆ ಮಾಡಿ ಕ್ಷೌರಿಕರನ್ನು ಪ್ರಚೋದನೆ ಮಾಡಲಾಗುತ್ತಿದೆ. ಕೇವಲ ಕ್ಷೌರ ನಿರಾಕರಣೆ ಅಷ್ಟೆ ಅಲ್ಲದೆ ಈ ಘಟನೆ ನಂತರದಲ್ಲಿ ಇಟಗಿ ಗ್ರಾಮದಲ್ಲಿ ದಲಿತರಿಗೆ ಬಹಿಷ್ಕಾರ ಹಾಕಿರುವ ಪ್ರಕರಣ ಕೂಡಾ ಇದ್ದು, ದಲಿತರನ್ನು ಕೆಲಸಕ್ಕೆ ಕರೆದುಕೊಳ್ಳಬಾರದು, ಅವರ ವಾಹನ ಉಪಯೋಗಿಸಬಾರದು ಎಂದು ಬಹಿಷ್ಕಾರ ಹಾಕಿದವರನ್ನು ಕೂಡಲೆ ಪೋಲಿಸರು ಬಂಧಿಸಲು ಮುಂದಾಗಬೇಕು ಎಂದು ಎಸ್‌ಎಫ್‌ಐ ಹಾವೇರಿ ಜಿಲ್ಲಾ ಸಮಿತಿಯು ಆಗ್ರಹಿಸುತ್ತದೆ ಎಂದು ಜಿಲ್ಲಾಧ್ಯಕ್ಷರಾದ ರೇಣುಕಾ ಕಹಾರ ಹಾಗೂ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾ. ವಾಸುದೇವ ಪೆರಾಜೆ ಲಾಲ್ ಸಲಾಂ

ಹಿರಿಯ ಕಮ್ಯೂನಿಸ್ಟ್ ಚೇತನ ಶ್ರೀಯುತ ವಾಸುದೇವ ಪೆರಾಜೆ, ಬಳಂಜ ಅವರು ಜುಲೈ 26ರಂದು ನಿಧನರಾಗಿರುತ್ತಾರೆ. ಅವರ ನಿಧನಕ್ಕೆ ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ಶ್ರದ್ಧಾಂಜಲಿ ಅರ್ಪಿಸಿದೆ.

ಅವರು ಭೂಸುಧಾರಣಾ ಚಳವಳಿಯಲ್ಲಿ ಕಾಮ್ರೇಡ್ ಎಳ್ಚಿತ್ತಾಯರು, ಎಂ.ಎಚ್.ಕೃಷ್ಣಪ್ಪ ಮೊದಲಾದ ಕಮ್ಯೂನಿಸ್ಟ್ ನಾಯಕರ ಜೊತೆಗಿದ್ದು ಚಳವಳಿಯ ನೇತೃತ್ವವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ತಾಲೂಕಿನ ನಾಯಕರಾಗಿದ್ದು, ತಾಲೂಕಿನಲ್ಲಿ ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಗೆ ಕಾರಣಕರ್ತರಲ್ಲಿ ಒಬ್ಬರಾಗಿದ್ದರು. ಅವರ ತ್ಯಾಗಮಯ ಕ್ರಾಂತಿಕಾರಿ ಆದರ್ಶಗಳು ನಮಗೆ ಆದರ್ಶವಾಗಲಿ ಎಂದು ನಿರ್ಣಯ ಕೈಗೊಳ್ಳಲಾಯಿತು ಎಂದು ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ನ್ಯಾಯವಾದಿ ಬಿ.ಎಂ.ಭಟ್ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಪಕ್ಷದ ಪರವಾಗಿ ಬಿ.ಎಂ.ಭಟ್ ಹಾಗೂ ಪಕ್ಷದ ತಾಲೂಕು ಮುಖಂಡರಾದ ನೀಲೇಶ್ ಪೆರಿಂಜೆ ಮೃತರ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿ ಮೃತರಿಗೆ ಅಂತಿಮ ನಮನ ಸಲ್ಲಿಸಿ ಬಂದಿದ್ದಾರೆ.

ಪೆರಾಜೆ ಅವರು ಶೋಷಣೆಗೊಳಗಾದವರ ಪರ ಸ್ವರ ಎತ್ತುತ್ತಿದ್ದುದು ಮಾತ್ರವಲ್ಲ ಸಹಕಾರಿ ರಂಗದಲ್ಲೂ ಅವರು ದುಡಿದಿದ್ದಾರೆ. ಅಳದಂಗಡಿ ಸಹಕಾರಿ ಸಂಘದ ಅದ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕುಂಬಾರ ಸೇವಾ ಸಹಕಾರಿ ಸಂಘದ ಸ್ಥಾಪಕ ಅದ್ಯಕ್ಷರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿದ ಕೀರ್ತಿ ಅವರದ್ದು. ಅವರ ಜನಪರವಾದ ಕಾಳಜಿಯನ್ನು ನಾವು ಎಂದೂ ಮರೆಯಲು ಸಾದ್ಯವಿಲ್ಲ ಎಂದವರು ತಿಳಿಸಿದರು.

# ರಸ್ತೆ ಸಾರಿಗೆ ಕಾರ್ಮಿಕರ ಐತಿಹಾಸಿಕ ಮುಷ್ಕರ

**ಕೆ. ಪ್ರಕಾಶ್**

ಕರ್ನಾಟಕ ರಾಜ್ಯ ಸಾರ್ವಜನಿಕ ರಸ್ತೆ ಸಾರಿಗೆಗೆ ಒಳಪಟ್ಟ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಈಶಾನ್ಯ ಮತ್ತು ವಾಯುವ್ಯ ಸಾರಿಗೆ ನಾಲ್ಕು ನಿಗಮಗಳ ಕಾರ್ಮಿಕರು ಜುಲೈ 25 ರಿಂದ 27 ರವರೆಗೆ ಐತಿಹಾಸಿಕ ಮುಷ್ಕರವನ್ನು ನಡೆಸಿದರು. ಕರ್ನಾಟಕದ ಸಾರ್ವಜನಿಕ ಸಾರಿಗೆಯ ಇತಿಹಾಸದಲ್ಲಿ ಶೇ.100 ರಷ್ಟು ಮುಷ್ಕರ ಮೂರು ದಿನಗಳ ಕಾಲ ನಡೆದದ್ದು ಒಂದು ಮೈಲಿಗಲ್ಲಾಗಿದೆ. ಅಂತಿಮವಾಗಿ ಮುಷ್ಕರದ ಫಲವಾಗಿ ಶೇ.12.5 ರಷ್ಟು ಮೂಲ ವೇತನ ಹೆಚ್ಚಳ ಮತ್ತು ಇತರ ಬೇಡಿಕೆಗಳನ್ನು ಬಗೆಹರಿಸುವ ಭರವಸೆಯೊಂದಿಗೆ ಮುಕ್ತಾಯಗೊಂಡಿದೆ.

**ಹಿನ್ನೆಲೆ**

ಕರ್ನಾಟಕ ರಾಜ್ಯದ 4 ಸಾರಿಗೆ ನಿಗಮಗಳಲ್ಲಿ 1.25 ಲಕ್ಷ ಚಾಲಕ, ನಿರ್ವಾಹಕ, ಚಾಲಕ ಕಂ ನಿರ್ವಾಹಕ, ತಾಂತ್ರಿಕ, ಭದ್ರತಾ ಹಾಗೂ ಆಡಳಿತ ಸಿಬ್ಬಂದಿಗಳು ರಾಜ್ಯದ ಜನತೆಗೆ ಸಾರಿಗೆ ಸೌಕರ್ಯವನ್ನು ಒದಗಿಸಲು ಹಗಲು ರಾತ್ರಿ ದುಡಿಯುತ್ತಿದ್ದಾರೆ. ಈ ನೌಕರರ ವೇತನ ಪರಿಷ್ಕರಣೆ 4 ವರ್ಷಗಳಿಗೊಮ್ಮೆ ಕಾರ್ಮಿಕ ಸಂಘದೊಂದಿಗೆ ಚರ್ಚಿಸಿ ದ್ವಿಪಕ್ಷೀಯ ಒಪ್ಪಂದ ಮಾಡಿ ಜಾರಿಗೆ ತರುವ ವ್ಯವಸ್ಥೆ ಜಾರಿಯಲ್ಲಿತ್ತು. ಆದರೆ ಕಳೆದ ಇಪ್ಪತ್ತು ವರ್ಷಗಳಿಂದ ಕಾರ್ಮಿಕ ಸಂಘದೊಂದಿಗೆ ಚರ್ಚಿಸಿ ದ್ವಿಪಕ್ಷೀಯ ಒಪ್ಪಂದ ಮಾಡಿಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಎಲ್ಲಾ ರಾಜಕೀಯ ಪಕ್ಷಗಳು, ಸಾರಿಗೆ ನಿಗಮಗಳ ಆಡಳಿತ ವರ್ಗಗಳು ಏಕಪಕ್ಷೀಯವಾಗಿ ತಮಗೆ ತೋಚಿದಷ್ಟು ವೇತನ ಹೆಚ್ಚಳ ಮಾಡಿ ಜಾರಿ ಮಾಡುತ್ತಾ ಬರುತ್ತಿದ್ದಾರೆ. ಸರ್ಕಾರಗಳ ಮತ್ತು ಆಡಳಿತ ವರ್ಗದ ಕಾರ್ಮಿಕ ವಿರೋಧ ನೀತಿಗಳಿಂದ ಸಾರಿಗೆ ಕಾರ್ಮಿಕರು ತೀವ್ರವಾದ ಅನ್ಯಾಯಕ್ಕೆ ಒಳಗಾಗಿದ್ದಾರೆ. ನೌಕರರ ವೇತನವನ್ನು ಕಾಲ–ಕಾಲಕ್ಕೆ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಗೆ ಅನುಗುಣವಾಗಿ ಕಾರ್ಮಿಕ ಸಂಘದೊಂದಿಗೆ ಚರ್ಚಿಸಿ ದ್ವಿಪಕ್ಷೀಯ ಒಪ್ಪಂದ ಮಾಡದೇ ಇರುವುದರಿಂದ ಅತ್ಯಂತ ಕಡಿಮೆ ವೇತನ ಪಡೆಯುತ್ತಿದ್ದಾ–ರೆ.

2000 ರಲ್ಲಿ 4%, 2004 ರಲ್ಲಿ 5%, 2008 ರಲ್ಲಿ 6%, 2012 ರಲ್ಲಿ 10%, ಹೀಗೆ ಕಳೆದ 16 ವರ್ಷಗಳಲ್ಲಿ ಕೇವಲ ಶೇ.25 ರಷ್ಟು ವೇತನ ಹೆಚ್ಚಳ ಮಾಡಲಾಗಿತ್ತು. ಇದೇ ಅವಧಿಯಲ್ಲಿ ಜೀವನಾವಶ್ಯಕ ವಸ್ತುಗಳು, ಶಿಕ್ಷಣ, ವೈದ್ಯಕೀಯ, ವಸತಿ ಇತ್ಯಾದಿಗಳ ಬೆಲೆಗಳು ಶೇ. 100 ರಿಂದ ಶೇ. 500 ರಷ್ಟು ಹೆಚ್ಚಳವಾಗಿದೆ. ವೇತನ ಹೆಚ್ಚಳ ಮಾತ್ರವಲ್ಲದೇ, ನೌಕರರ ಭತ್ಯೆಗಳು, ಸೇವಾ ಸೌಲಭ್ಯಗಳು ಮತ್ತು ಕೆಲಸದ ಅವಧಿಯ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಸಿರುವುದಿಲ್ಲ. ಸಾರಿಗೆ ನಿಗಮಗಳಲ್ಲಿ ಕಾನೂನು ಬದ್ಧ ಆಡಳಿತವನ್ನು ಸಂಪೂರ್ಣ ತಿರಸ್ಕರಿಸಲಾಗಿದೆ.

ಇದರಿಂದ ನೌಕರರು ಅಕ್ರಮ ಶಿಕ್ಷೆಗಳು, ದೌರ್ಜನ್ಯದ ಆಡಳಿತ, ಅನ್ಯಾಯದ ದಂಡಗಳು, ಆಡಳಿತಾತ್ಮಕ ಹೆಸರಿನ ಕಿರುಕುಳದ ವರ್ಗಾವಣೆಗಳು, ಕರ್ತವ್ಯದ ವೇಳೆ ಆಗುವ ಪ್ರಕರಣಗಳಲ್ಲಿ ನೌಕರರ ತಪ್ಪಿಲ್ಲದಿದ್ದರೂ ಶಿಕ್ಷೆ ಅನುಭವಿಸುತ್ತಿದ್ದಾರೆ. ಕಾನೂನಿನ ಪ್ರಕಾರ ದಿನಕ್ಕೆ 8 ಗಂಟೆಗಳ ಕಾಲ ಕೆಲಸದ ಅವಧಿ ಇದ್ದರೂ ಸಾರಿಗೆ ನಿಗಮಗಳಲ್ಲಿ ದಿನವೊಂದಕ್ಕೆ 12 ರಿಂದ 18 ಗಂಟೆಗಳ ಕಾಲ ದುಡಿಸಲಾಗುತ್ತಿದೆ. ಬಾರ್ ಡ್ಯೂಟಿ ಹೆಸರಿನಲ್ಲಿ 36 ಗಂಟೆಗಳ ಕೆಲಸವನ್ನು ಮಾಡಿಸಲಾಗುತ್ತಿದೆ. ಈ ಅವಧಿಯನ್ನು ಕಾನೂನು ಪ್ರಕಾರ ದಾಖಲಿಸದೇ ದುಡಿಮೆಯ ಅವಧಿಗೆ ಕಾನೂನಿನ್ವಯ ನೀಡಬೇಕಾದ ವೇತನ ನೀಡುವುದಿಲ್ಲ. ನೌಕರರು ಮತ್ತು ಕುಟುಂಬದವರು ಖಾಯಿಲೆಗೆ ಒಳಗಾದಾಗ ಚಿಕಿತ್ಸೆ ಪಡೆಯಲು ಮರುಪಾವತಿ ವ್ಯವಸ್ಥೆ ಜಾರಿಯಲ್ಲಿದೆ. ಆದರೆ ಇದುವರೆಗೂ ಯಾರಿಗೂ ಸಹ ಪೂರ್ಣ ಹಣವನ್ನು ಪಾವತಿಸಿಲ್ಲ. ಇದರಿಂದ ಉತ್ತಮ ವೈದ್ಯಕೀಯ ಸೌಲಭ್ಯವಿಲ್ಲದಂತಾಗಿದೆ. ನೌಕರರಿಗೆ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಕ್ಯಾಂಟಿನ್ ವ್ಯವಸ್ಥೆ, ವಿಶ್ರಾಂತಿ ಕೊಠಡಿ, ಶುಭ್ರ ಶೌಚಾಲಯಗಳು ಮತ್ತು ರಾತ್ರಿ ತಂಗುವ ವಾಹನಗಳ ಚಾಲಕ – ನಿರ್ವಾಹಕರು ರಾತ್ರಿ ವೇಳೆ ವಿಶ್ರಾಂತಿ ಪಡೆಯಲು ಬಸ್ ನಿಲ್ದಾಣ ಮತ್ತು ಟರ್ಮಿನಲ್ಸ್‌ಗಳಲ್ಲಿ ವಿಶ್ರಾಂತಿ ಕೊಠಡಿಗಳು ಮುಂತಾದ ಕನಿಷ್ಟ ಸೌಲಭ್ಯಗಳೂ ಸಹ ಇಲ್ಲದಂತೆ ಕೆಲಸ ಮಾಡುವ ಅವಸ್ಥೆ ಸಾರಿಗೆ ನೌಕರರದು.

**ವೇತನ ಪರಿಷ್ಕರಣೆ – 2016**

ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ ಅವಧಿ 31.12.2015 ಕ್ಕೆ ಮುಕ್ತಾಯವಾಗಿದೆ. 01.01.2016 ರಿಂದ ಹೊಸ ವೇತನ ಒಪ್ಪಂದ ಜಾರಿಯಾಗಬೇಕಾಗಿದೆ. ಸಿಐಟಿಯು ಸಂಯೋಜಿತ 'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಶನ್' ದಿನಾಂಕ: 03.12.2015 ರಂದೇ ಸರ್ಕಾರ ಮತ್ತು ಆಡಳಿತ ವರ್ಗಕ್ಕೆ 52 ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿತು. ಶೇ.45 ರಷ್ಟು ವೇತನ ಹೆಚ್ಚಳ, ಬಾಟ ಮತ್ತಿತರೆ ಭತ್ಯೆಗಳನ್ನು ಇವತ್ತಿನ ಬೆಲೆ ಏರಿಕೆಯ ವಾಸ್ತವಿಕತೆಗೆ ಅನುಗುಣವಾಗಿ ಹೆಚ್ಚಳ, ಸೇವಾ ಸೌಲಭ್ಯ ಹಾಗೂ ನಿಯಮಾವಳಿಗಳು ಅಮೂಲಾಗ್ರವಾಗಿ ಕಾರ್ಮಿಕ ಸಂಘಗಳೊಂದಿಗೆ ಚರ್ಚಿಸಿ ಅನುಷ್ಠಾನಗೊಳಿಸುವುದು, ನಿಗಮದಿಂದ ನಿಗಮಕ್ಕೆ ನೌಕರರ ವರ್ಗಾವಣೆ ನೀತಿಯನ್ನು ಜಾರಿ, ನಿವೃತ್ತಿ ವೇತನ ಕನಿಷ್ಠ ರೂ. 10,000–00, 10 ಲಕ್ಷ ರೂಗಳ ವಿಮಾ ಯೋಜನೆ, ವಸತಿ ಯೋಜನೆ, ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಸೌಲಭ್ಯ, ತರಬೇತಿ ನೌಕರರಿಗೆ ಕನಿಷ್ಟ ರೂ.18,000 ವೇತನ, ಎನ್‌ಐಎನ್‌ಸಿ (ಪ್ರಯಾಣಿಕರ ತಪ್ಪಿಗೆ ನಿರ್ವಾಕರಿಗೆ ದಂಡ) ರದ್ಧತಿ, ಕಾರ್ಮಿಕ ಸಂಘಗಳ ಮಾನ್ಯತೆಗೆ ಚುನಾವಣೆ ನಡೆಸುವುದು, ಮುಂತಾದ ಬೇಡಿಕೆಗಳು ಇದರಲ್ಲಿದ್ದವು.





ಈ ಬಗ್ಗೆ ಆಡಳಿತ ವರ್ಗ ಯಾವುದೇ ಪ್ರತಿಕ್ರಿಯೆ ನೀಡದಿದ್ದಾಗ ಮಾತುಕತೆಗೆ ಒತ್ತಾಯಿಸಿ ಮಾರ್ಚ್ 23, 2016 ರಂದು ಸಾರಿಗೆ ಕೇಂದ್ರ ಕಛೇರಿ ಮುಂದೆ ಪ್ರತಿಭಟನೆ ನಡೆಸಿತು. ಆಡಳಿತ ವರ್ಗ ಏಪ್ರಿಲ್ 23, 2016 ರಂದು ಸಿಐಟಿಯು ಫೆಡರೇಶನನ್ನು ಚರ್ಚೆಗೆ ಆಹ್ವಾನಿಸಿ ಕಾರ್ಮಿಕರ ಬೇಡಿಕೆಗಳನ್ನು ಕೇಳಿಸಿಕೊಂಡಿತು. ಆಡಳಿತ ವರ್ಗ ಮತ್ತೆ ಯಾವುದೇ ಚರ್ಚೆ ನಡೆಸದಿದ್ದಾಗ ಮೇ ತಿಂಗಳಲ್ಲಿ ಕಾರ್ಮಿಕರಿಂದ ಸಹಿ ಸಂಗ್ರಹ ಆಂದೋಲನವನ್ನು ಸಿಐಟಿಯು ನಡೆಸಿ ಜೂನ್ 2, 2016 ರಂದು ಆಡಳಿತ ವರ್ಗಕ್ಕೆ ಸಲ್ಲಿಸಿತು.ಈ ನಡುವೆ ಮೇ 10, 2016 ಮತ್ತು ಜೂನ್ 10, 2016 ರಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮತ್ತು ಅಧಿಕಾರಿಗಳನ್ನು ಭೇಟಿ ಮಾಡಿ ಕಾರ್ಮಿಕ ಸಂಘಗಳೊಂದಿಗೆ ಚರ್ಚಿಸಿ ಒಮ್ಮತಕ್ಕೆ ಬರಲು ಮನವಿ ಮಾಡಲಾಯಿತು. ಹಿಂದಿನ ನಾಲ್ಕು ಬಾರಿಯೂ ಸರ್ಕಾರ ಬೇಡಿಕೆಗಳ ಕುರಿತು ಏಕಪಕ್ಷೀಯ ತೀರ್ಮಾನವನ್ನು ಮಾಡುತ್ತಾ ಬಂದಿದ್ದ ಹಿನ್ನೆಲೆಯಲ್ಲಿ ಮತ್ತೆ ಅದೇ ರೀತಿ ಮಾಡಬಾರದೆಂದು ಒತ್ತಾಯಿಸಲಾಗಿತ್ತು. ಇದಕ್ಕೆ ಮುಖ್ಯ ಕಾರಣ ಸರ್ಕಾರ ವೇತನವನ್ನು ತನಗೆ ತಿಳಿದ ರೀತಿಯಲ್ಲಿ ಘೋಷಿಸುತ್ತಿತ್ತು ಮತ್ತು ಉಳಿದ ಯಾವ ಬೇಡಿಕೆಗಳೂ ಪರಿಹಾರವಾಗುತ್ತಿರಲಿಲ್ಲ.

**ಒಗ್ಗಟ್ಟಿನ ಹೋರಾಟಕ್ಕೆ ಪ್ರಯತ್ನ**

ಸಾರಿಗೆ ನಿಗಮಗಳಲ್ಲಿ 6 ಕಾರ್ಮಿಕ ಸಂಘಟನೆಗಳಿವೆ. ಇವನ್ನೆಲ್ಲಾ ಒಂದೇ ಜಂಟಿ ವೇದಿಕೆಯಡಿ ತಂದು ಒಟ್ಟಾಗಿ ಹೋರಾಟ ಮಾಡಿದರೆ ಕಾರ್ಮಿಕರಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಪ್ರಯತ್ನ ನಡೆಸಲಾಯಿತು. ಆದರೆ ಒಂದು ಸಂಘಟನೆ ಸಿಐಟಿಯು ಇದ್ದರೆ ಜಂಟಿ ಸಮಿತಿಗೆ ಬರುವುದಿಲ್ಲ ಎಂದು ಹೇಳಿತು. (2012 ರಲ್ಲೂ ಇದೇ ರೀತಿ ಮಾಡಲಾಗಿತ್ತು). ಇದ–ರಿಂದಾಗಿ ಸಿಐಟಿಯು ಸ್ವತಂತ್ರವಾಗಿ ಹೋರಾಟಕ್ಕೆ ಮುಂದಾಯಿತು.

**ಮತ್ತೆ ಏಕಪಕ್ಷೀಯ ತೀರ್ಮಾನ**

ಹೀಗಿರುವಾಗ ಸರ್ಕಾರ ಇದ್ದಕ್ಕಿದ್ದಂತೆ ಜೂನ್ 29 ರಂದು ಏಕಪಕ್ಷೀಯವಾಗಿ ಶೇ.8 ರಷ್ಟು ವೇತನ ಹೆಚ್ಚಳ ಮಾಡಿ ಘೋಷಿಸಿತು. ಈ ಏಕಪಕ್ಷೀಯ ಮತ್ತು ಕಡಿಮೆ ವೇತನ ಹೆಚ್ಚಳದ ಘೋಷಣೆ ಮತ್ತು ಇದರ ವಿರುದ್ಧ ಸಿಐಟಿಯು ಫೆಡರೇಷನ್ ಸಭೆ ಸೇರಿ ಜುಲೈ 18 ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ತೀರ್ಮಾನಿಸಿತು. ನಮ್ಮೊಂದಿಗೆ ಜೊತೆ ಸೇರಿ ಹೋರಾಟ ಮಾಡಲು ಆಗುವುದಿಲ್ಲ ಎಂದ ಸಂಘಟನೆಯವರು ಇನ್ನೆರೆಡು ಸಂಘಟನೆಗಳನ್ನು ಸೇರಿಸಿಕೊಂಡು ಜುಲೈ 25 ರಿಂದ ಮುಷ್ಕರಕ್ಕೆ ಕರೆ ನೀಡಿತು. ಎರಡು ಮುಷ್ಕರ ದಿನಾಂಕಗಳ ಗೊಂದಲಕ್ಕೆ ಕಾರ್ಮಿಕರು ಒಳಗಾಗಬಾರದೆಂದು ಸಿಐಟಿಯು ರಾಜ್ಯ ಫೆಡರೇಷನ್ ಜುಲೈ 5 ರಂದು ಸಭೆ ಸೇರಿ ನಾವೂ ಸಹ ಜುಲೈ 25 ರಿಂದಲೇ ಮುಷ್ಕರಕ್ಕೆ ಕರೆ ನೀಡುವುದೆಂದು ತೀರ್ಮಾನಿಸಿದೆವು.

ಮುಷ್ಕರವನ್ನು ಯಶಸ್ವಿಗೊಳಿಸಲು ರಾಜ್ಯಾದ್ಯಂತ ಪ್ರವಾಸ ಮಾಡಲು ತಂಡಗಳನ್ನು ರಚಿಸಿಕೊಂಡು ಡಿಪೋಗಳ ಮುಂದೆ ದ್ವಾರ ಸಭೆಗಳು, ಬಸ್ ನಿಲ್ದಾಣಗಳಲ್ಲಿ ಪ್ರಚಾರ, ಕರಪತ್ರ ಹಂಚಿಕೆ, ಪೋಸ್ಟರ್‌ಗಳು, ಸ್ಟಿಕರ್‌ಗಳ ಮೂಲಕ ವ್ಯಾಪಕ ಸಿದ್ಧತಾ ಪ್ರಚಾರ ನಡೆಸಲಾಯಿತು. ನೂರಾರು ಸಿಐಟಿಯು ಕಾರ್ಯಕರ್ತರು ಹತ್ತಾರು ದಿನಗಳು ಕೆಲಸಗಳಿಗೆ ರಜೆ ಹಾಕಿ ಮುಷ್ಕರದ ಯಶಸ್ಸಿಗೆ ಹಗಲು ರಾತ್ರಿಯೆನ್ನದೆ ಕೆಲಸ ಮಾಡಿದರು. ಕೆಲವು ಸಂಗಾತಿಗಳು ಒಂದು ತಿಂಗಳು ರಜೆ ಹಾಕಿ ಕೆಲಸ ಮಾಡಿದರು.

**ಮುಖ್ಯಮಂತ್ರಿ ಸಭೆ : ಶೇ.8 ರಿಂದ ಶೇ. 10ಕ್ಕೆ ಹೆಚ್ಚಳ**

ಇದರ ಫಲವಾಗಿ ಸಾರಿಗೆ ಮಂತ್ರಿಗಳ ಜೊತೆ ಜುಲೈ 21 ರಂದು ಸಭೆ ನಡೆಯಿತು. ಜುಲೈ 22 ರಂದು ಮತ್ತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜೊತೆ ಎಲ್ಲಾ ಕಾರ್ಮಿಕ ಸಂಘಟನೆಗಳ ಜೊತೆ ಚರ್ಚೆ ನಡೆಯಿತು. ಎಲ್ಲರ ಅಭಿಪ್ರಾಯಗಳನ್ನು ಕೇಳಿದ ಮುಖ್ಯಮಂತ್ರಿಗಳು ವೇತನವನ್ನು ಶೇ. 8 ರಿಂದ ಶೇ. 10 ಕ್ಕೆ ಏರಿಕೆ ಮಾಡಿ ಅದನ್ನು ಒಪ್ಪಿಕೊಳ್ಳಬೇಕೆಂದು ಕೋರಿದರು. ಈ ಪ್ರಸ್ತಾಪವನ್ನು ಸಿಐಟಿಯು ಸೇರಿದಂತೆ ಎಲ್ಲಾ ಸಂಘಟನೆಗಳು ತಿರಸ್ಕರಿಸಿದವು. ಹೀಗಾಗಿ ಜುಲೈ 25 ರಿಂದ ಮುಷ್ಕರ ಅನಿವಾರ್ಯವಾಯಿತು.

**ಚಾರಿತ್ರಿಕ ದಾಖಲೆ ಬರೆದ ಮುಷ್ಕರ**

ಸಾರಿಗೆ ಸಂಸ್ಥೆಯ ಚರಿತ್ರೆಯಲ್ಲೇ ಅತ್ಯಂತ ಸಂಪೂರ್ಣವಾದ ಮತ್ತು ಯಶಸ್ವಿಯಾದ ಮುಷ್ಕರ ಜುಲೈ 25 ರಿಂದ ಕಾರ್ಮಿಕರು ನಡೆಸಿದರು. ಮೊದಲ ಎರಡು ದಿನಗಳು ತುಂಬಾ ಜೋರಾಗಿ ನಡೆದ ಹಿನ್ನೆಲೆಯಲ್ಲಿ ಆಡಳಿತ ವರ್ಗ ಮತ್ತು ಸರ್ಕಾರ ಹಲವಾರು ವಿಧಾನಗಳಿಂದ ಇದನ್ನು ಮುರಿಯಲು ವಿಫಲ ಯತ್ನ ನಡೆಸಿತು. ಬೆಂಗಳೂರಿನಲ್ಲಿ ಬಿಎಂಟಿಸಿಯ 6600 ಬಸ್‌ಗಳ ಪೈಕಿ ನಾಲ್ಕೈದು ಬಸ್‌ಗಳನ್ನು ನೌಕರರಲ್ಲದವರನ್ನು ಉಪಯೋಗಿಸಿ ಓಡಿಸಲು ಪ್ರಯತ್ನಿಸಿ ಮುಖಭಂಗ ಅನುಭವಿಸಿದರು. ಮುಷ್ಕರ ಮೂರನೇ ದಿನವೂ ಪೂರ್ಣ ಯಶಸ್ವಿಯಾಯಿತು.


ಜುಲೈ 27 ರಂದು ಮಾತುಕತೆಗೆ ಬರಬೇಕೆಂದು ಸರ್ಕಾರ ಸಂಘಟನೆಗಳನ್ನು ಆಹ್ವಾನಿಸಿತು. ಎಲ್ಲರನ್ನೂ ಒಟ್ಟಿಗೆ ಮಾತುಕತೆಗೆ ಕರೆಯಬೇಕೆಂದು ನಾವು ಒತ್ತಾಯ ಮಾಡಿದೆವು. ಆದರೆ ಆಡಳಿತ ವರ್ಗ ಬೇರೊಂದು ಸಂಘಟನೆಯವರು ಪ್ರತ್ಯೇಕ ಸಭೆಗಳನ್ನು ನಡೆಸಲು ಹೇಳಿದ್ದಾರೆಂದು, ಅದಕ್ಕಾಗಿ ಮೊದಲಿಗೆ ಪ್ರತ್ಯೇಕ ಸಭೆ ನಡೆಸಿ ನಂತರ ಒಟ್ಟಿಗೆ ಸಭೆ ನಡೆಸುವುದಾಗಿ ಹೇಳಿತು. ಸಾರಿಗೆ ಸಚಿವರು ಮತ್ತು ಅಧಿಕಾರಗಳ ತಂಡದೊಂದಿಗೆ ನಡೆದ ಮಾತುಕತೆಯಲ್ಲಿ ಸಿಐಟಿಯು ಆಂಧ್ರ ಮತ್ತು ತೆಲಂಗಾಣದ ಮಾದರಿಯಲ್ಲಿ ಆ ಮಟ್ಟಕ್ಕೆ ಇಲ್ಲಿನ ವೇತನಗಳನ್ನು ಸರಿದೂಗಿಸಲು ಶೇ. 23 ರಷ್ಟಾದರೂ ಹೆಚ್ಚಿಸಬೇಕೆಂದು ಒತ್ತಾಯಿಸಿದೆವು. ಉಳಿದ ಬಹುತೇಕ ಸಂಘಟನೆಗಳು ಶೇ. 18 ಕ್ಕೆ ಸಮ್ಮತಿ ಸೂಚಿಸಿದ್ದವು. ಎಲ್ಲರ ಅಭಿಪ್ರಾಯಗಳನ್ನು ಕೇಳಿದ ಸಚಿವರು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ನಂತರ ಸಭೆ ಕರೆಯುವುದಾಗಿ ಹೇಳಿದರು.

ಆದರೆ ಸಂಜೆಯಾಗುತ್ತಿದ್ದಂತೆ ಪರಿಸ್ಥಿತಿ ಸಂಪೂರ್ಣ ಬದಲಾಯಿತು. ಜಂಟಿ ಸಮಿತಿಗೆ ಸೇರಿದ ಎಐಟಿಯುಸಿ, ಮಹಾಮಂಡಲ ಮತ್ತು ಐಎನ್‌ಟಿಯುಸಿ ಮುಖಂಡರೊಂದಿಗೆ ಅಧಿಕಾರಿಗಳು ಪತ್ರಿಕಾಗೋಷ್ಠಿ ನಡೆಸಿ ಶೇ. 12.5 ಕ್ಕೆ ಒಪ್ಪಿಗೆಯಾಗಿದೆ, ಮುಷ್ಕರ ವಾಪಸ್ಸಾಗಿದೆ ಎಂದು ಘೋಷಿಸಿಬಿಟ್ಟರು. ನೂರಕ್ಕೆ ನೂರರಷ್ಟು ಮುಷ್ಕರದಲ್ಲಿ ತೊಡಗಿದ್ದ ಕಾರ್ಮಿಕರಿಗೆ ಆಘಾತವಾಗಿತ್ತು.

ಒಳ ಒಪ್ಪಂದದ ವೇತನ ಹೆಚ್ಚಳ : ವೇತನ ಹೆಚ್ಚಳ ಮೂಲವೇತನಕ್ಕೋ ಅಥವಾ ಒಟ್ಟಾರೆ ವೇತನಕ್ಕೋ?

ಜುಲೈ 25 ರಿಂದ ಅನಿರ್ದಿಷ್ಟ ಮುಷ್ಕರ ನಡೆಸಿದ ಕಾರ್ಮಿಕ ಸಂಘಟನೆಗಳ ನಡುವೆ ಭಿನ್ನತೆಯನ್ನು ಉಂಟು ಮಾಡಿ ಕೆಲ ಕಾರ್ಮಿಕ ಸಂಘಟನೆಗಳ ಜೊತೆ ಆಡಳಿತ ವರ್ಗ ಶೇ.12.5 ರಷ್ಟು ವೇತನ ಹೆಚ್ಚಳದ ತೀರ್ಮಾನವನ್ನು ಕಾರ್ಮಿಕರ ಮೇಲೆ

**ಪುಟ 15 ಕ್ಕೆ**




**2015ರ ಕರ್ನಾಟಕ ಸರಕಾರದ ಮಾನವ ಅಭಿವೃದ್ಧಿ ವರದಿಯಲ್ಲಿ ದಲಿತ ಮಾನವ ಅಭಿವೃದ್ಧಿ ಕೂಡ ಸೇರಿದೆ. ವರದಿಯಲ್ಲಿ ಇದನ್ನು ಸಮಗ್ರ ದಲಿತ ಅಭಿವೃದ್ಧಿ ಸೂಚಿಯೆಂದು ಹೆಸರಿಸಲಾಗಿದೆ. ಈ ಸೂಚಿಯನ್ನು ಮಾನವ ಅಭಿವೃದ್ಧಿ ವರದಿಯ ದಲಿತಬುಡಕಟ್ಟುಗಳ ಅಧ್ಯಾಯದಲ್ಲಿ ನೋಡಬಹುದು. ದೇಶದಲ್ಲೇ ಮೊದಲ ಬಾರಿಗೆ ಇಂತಹ ಪ್ರಯತ್ನ ನಡೆದಿದೆ. ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಹೇಗೆ ಅಳೆಯಲಾಗುತ್ತದೆ ಮತ್ತು ಅದರ ಹಿಂದಿರುವ ಪರಿಕಲ್ಪನೆ ಬಗ್ಗೆ ಅದರ ರೂವಾರಿಯಾದ ಡಾ. ಚಂದ್ರ ಪೂಜಾರಿ ಇಲ್ಲಿ ವಿವರಿಸಿದ್ದಾರೆ. ಈ ಲೇಖನದ ಎರಡನೇ ಭಾಗದಲ್ಲಿ 2015ರ ವರದಿಯಲ್ಲಿ ವಿವಿಧ ಜಿಲ್ಲೆಗಳ ಸಮಗ್ರ ದಲಿತ ಅಭಿವೃದ್ಧಿ ಸೂಚಿಯ ನಿರೂಪಣೆ ಮತ್ತು ಸ್ಥೂಲ ವಿಶ್ಲೇಷಣೆ ಇದೆ. ಈ ಬಗ್ಗೆ ಡಾ. ಚಂದ್ರ ಪೂಜಾರಿ ಇತ್ತೀಚೆಗೆ ಪ್ರಕಟವಾದ ಪುಸ್ತಕದಲ್ಲಿ (ಪ್ರಕಟಣೆ : ದಲಿತ ಹಕ್ಕುಗಳ ಸಮಿತಿ) ಇನ್ನಷ್ಟು ವಿವರವಾಗಿ ಬರೆದಿದ್ದಾರೆ.**

# ದಲಿತ ಮಾನವ ಅಭಿವೃದ್ಧಿ ಸೂಚಿ ಏನನ್ನು ಅಳೆಯುತ್ತದೆ? – ಡಾ. ಚಂದ್ರ ಪೂಜಾರಿ

ಮಾನವ ಅಭಿವೃದ್ಧಿ ಸೂಚಿ ನಾಲ್ಕು ಕೊರತೆಗಳನ್ನು ಅನುಭವಿಸುತ್ತಿದೆ. ಒಂದು, ಮಾನವ ಅಭಿವೃದ್ಧಿ ಸೂಚಿ ಒಂದು ಪ್ರದೇಶದ ಅಭಿವೃದ್ಧಿಯನ್ನು ಮಾಪನ ಮಾಡುತ್ತದೆ. ಆ ಪ್ರದೇಶದೊಳಗೆ ಬರುವ ವಿವಿಧ ಸಮುದಾಯಗಳ, ದಲಿತ, ಬುಡಕಟ್ಟುಗಳ, ಅಲ್ಪಸಂಖ್ಯಾತರ, ಮಹಿಳೆಯರ ಅಭಿವೃದ್ಧಿಯನ್ನು ಪ್ರತ್ಯೇಕವಾಗಿ ಮಾಪನ ಮಾಡುತ್ತಿಲ್ಲ. ಎರಡು, ಮಾನವ ಅಭಿವೃದ್ಧಿ ಸೂಚಿಯಲ್ಲಿರುವ ಆರೋಗ್ಯ, ಶಿಕ್ಷಣಗಳನ್ನು ಅಭಿವೃದ್ಧಿಯ ಸಾಮಾಜಿಕ ಆಯಾಮಗಳನ್ನು ಗುರುತಿಸುವ ಮಾನದಂಡಗಳೆಂದು ತಿಳಿಯಲಾಗಿದೆ. ಆದರೆ ಇವು ವಾಸ್ತವದಲ್ಲಿ ಆದಾಯದ ಮತ್ತೊಂದು ರೂಪವೇ ಆಗಿದೆ. ಮೂರು, ಜಾತಿ, ಧರ್ಮ, ಲಿಂಗಗಳು ನಮ್ಮಲ್ಲಿ ನಿಜವಾದ ಸಾಮಾಜಿಕ ಸೂಚಕಗಳು. ಇವನ್ನು ಮಾನವ ಅಭಿವೃದ್ಧಿ ಸೂಚಿ ಸಾಮಾಜಿಕ ಸೂಚಕಗಳೆಂದು ಪರಿಗಣಿಸಿಲ್ಲ. ನಾಲ್ಕು, ಅಸ್ಪೃಶ್ಯತೆ ಮತ್ತು ಅಭಿವೃದ್ಧಿ ನಡುವೆ, ಜಾತಿ ಮತ್ತು ಅಭಿವೃದ್ಧಿ ನಡುವೆ ಇರುವ ಸಂಬಂಧಕ್ಕಿಂತಲೂ ಹೆಚ್ಚಿನ ಸಂಬಂಧ ಇದೆ. ಆದರೆ ಇದನ್ನೂ ಮಾನವ ಅಭಿವೃದ್ಧಿ ಸೂಚಿ ಪರಿಗಣಿಸಿಲ್ಲ. ಅದನ್ನು ಯಥಾರೂಪದಲ್ಲಿ ಅಥವಾ ಈಗ ಇರುವ ರೂಪದಲ್ಲಿ ಬಳಸಿದರೆ ದಲಿತರ ಅಥವಾ ಸಾಮಾಜಿಕ ಪಿರಮಿಡ್ ಬುಡದಲ್ಲಿರುವವರ ಅಭಿವೃದ್ಧಿಯನ್ನು ಮಾಪನ ಮಾಡಲು ಸಾಧ್ಯವಿಲ್ಲ. ಆದುದರಿಂದ ದಲಿತರ ಅಭಿವೃದ್ಧಿಯನ್ನು ಮಾಪನ ಮಾಡಲು ಪ್ರತ್ಯೇಕ ಸೂಚಿಯನ್ನು ಕಟ್ಟುವ ಅನಿವಾರ್ಯತೆ ಇದೆಯೆನ್ನುವುದು ನನ್ನ ವಾದ. ದಲಿತರ ಅಭಿವೃದ್ಧಿಯನ್ನು ಮಾಪನ ಮಾಡುವ ಸೂಚಿ ಮಾನವ ಅಭಿವೃದ್ಧಿ ಸೂಚಿಯಲ್ಲಿರುವ ಕೊರತೆಗಳನ್ನು ತುಂಬುವ ಜೊತೆಗೆ ರಾಜಕೀಯ ಅಂಶವನ್ನು ಒಳಗೊಂಡರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ದಲಿತ ಮಾನವ ಅಭಿವೃದ್ಧಿ ಸೂಚಿಯನ್ನು ಕಟ್ಟಲಾಗಿದೆ.



ತವರಲ್ಲಿ ಮಹಾದಾಯಿ ಕುರಿತು ಅನ್ನದಾತನ
ಕೂಗು
ನಮ್ಮ ಇಬ್ಬರು ಪುರೋಹಿತರು ಮಂತ್ರಾಲಯ
ಪುರೋಹಿತರೊಂದಿಗೆ ಪುರೊಹಿತರ ಪ್ರಧಾನ
ಸೇವಕ (ಗುಲಾಮ)ನೊಂದಿಗೆ ದೆಹಲಿಯಲ್ಲಿ

*– ಶೇಖ್ ಶಾ ಖಾದ್ರಿ*

(ಮಂತ್ರಾಲಯ ಸ್ವಾಮಿಜಿ ಪ್ರಹ್ಲಾದ ಜೋಶಿ ಮತ್ತು ಅನಂತಕುಮಾರ್ ಅವರೊಂದಿಗೆ ಮೋದಿ ಭೇಟಿ ವರದಿ ಬಗ್ಗೆ)

ದಲಿತ ಮಾನವ ಅಭಿವೃದ್ಧಿ ಸೂಚಿ ಹತ್ತು ಸೂಚಿಗಳನ್ನು ಒಳಗೊಂಡ ಒಂದು ಸಮಗ್ರ ಅಭಿವೃದ್ಧಿ ಸೂಚಿ. ಈ ಹತ್ತು ಸೂಚಿಗಳ ವಿವರಗಳು ಇಂತಿವೆ:

**1. ಸಾಂಸ್ಥಿಕ ಒಳಗೊಳ್ಳುವಿಕೆಯ ಸೂಚಿ:**

ಪಂಚಾಯತ್, ಶಾಲಾ ಉಸ್ತುವಾರಿ ಸಮಿತಿ, ಅರಣ್ಯ ನಿರ್ವಹಣ ಸಮಿತಿ, ನೀರಿನ ಸೊಸೈಟಿ, ಹಣಕಾಸು ಸೊಸೈಟಿ, ಆರೋಗ್ಯ ಹಾಗು ನೈರ್ಮಲ್ಯ ಸಮಿತಿ ಹೀಗೆ ಹಲವು ಅಭಿವೃದ್ಧಿ ಆಡಳಿತ ಸಮಿತಿಗಳು ತಳಸ್ತರದ ಜನರ ಪಾಲುಗೊಳ್ಳುವಿಕೆಗೆ ಸೃಷ್ಟಿಯಾಗಿವೆ. ಈ ಸಂಸ್ಥೆಗಳಲ್ಲಿ ದಲಿತರ ಜನಸಂಖ್ಯೆಗೆ ಅನುಗುಣವಾಗಿ ನಿರ್ದಿಷ್ಟ ಸಂಖ್ಯೆಯ ಸೀಟುಗಳನ್ನು ಅವರಿಗೆ ಮೀಸಲಾರಿಸಲಾಗಿದೆ. ಮೀಸಲಿಟ್ಟ ಸೀಟುಗಳನ್ನು ತುಂಬದಿದ್ದರೆ ಕಾನೂನಿಗೆ ವಿರೋಧವಾಗುತ್ತದೆ ಎನ್ನುವ ಕಾರಣದಿಂದ ಎಲ್ಲ ಮೀಸಲಿಟ್ಟ ಸೀಟುಗಳನ್ನು ತುಂಬಲಾಗುತ್ತದೆ. ಆದುದರಿಂದ ಮೀಸಲಿಟ್ಟ ಸೀಟುಗಳಿಗಿಂತ ಹೆಚ್ಚು ದಲಿತ ಪ್ರತಿನಿಧಿಗಳು ಈ ಸಂಸ್ಥೆಗಳಲ್ಲಿ ಪಾಲುಗೊಂಡರೆ ಅಭಿವೃದ್ಧಿಯೆಂದು ಪರಿಗಣಿಸಲಾಗಿದೆ.

**2. ಸಾಮಾಜಿಕ ಒಳಗೊಳ್ಳುವಿಕೆಯ ಸೂಚಿ:**

ಅಸ್ಪೃಶ್ಯತೆ ವಿವಿಧ ರೂಪಗಳಲ್ಲಿ ಇಂದು ಕೂಡ ಆಚರಣೆಯಲ್ಲಿದೆ. ಸಾಮಾಜಿಕ ಒಳಗೊಳ್ಳುವಿಕೆಯನ್ನು ಅಥವಾ ಅಸ್ಪೃಶ್ಯತೆಯ ಮಟ್ಟವನ್ನು ಮಾಪನ ಮಾಡಲು ಈ ಸೂಚಿಯನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರೊಳಗೆ ಒಟ್ಟು ಐದು ಅಂಶಗಳನ್ನು ಅಥವಾ ಸೂಚ್ಯಂಕಗಳನ್ನು ಪರಿಗಣಿಸಲಾಗಿದೆ. ದಲಿತೇತರರ ಮನೆಗೆ ಪ್ರವೇಶ, ಗೌರವಯುತವಾಗಿ ಸಂಬೋಧಿಸಲ್ಪಡುವುದು, ಊರ ಜಾತ್ರೆಗಳಲ್ಲಿ ದಲಿತೇತರರಂತೆ ಪಾಲುಗೊಳ್ಳುವ ಸಾಧ್ಯತೆ, ದಲಿತೇತರರಂತೆ ಊರ ದೇವಸ್ಥಾನಗಳಲ್ಲಿ ಪ್ರವೇಶ ಇರುವುದು ಮತ್ತು ಊರ ಹೊಟೇಲುಗಳಲ್ಲಿ ದಲಿತೇತರರಂತೆ ಪ್ರವೇಶ ಇರುವುದು. ದಲಿತರು ದಲಿತೇತರರಂತೆ ಎಲ್ಲ ಕಡೆ ಒಳಗೊಳ್ಳಲ್ಪಟ್ಟರೆ ಅಸ್ಪೃಶ್ಯತೆ ಕಡಿಮೆಯಾಗಿದೆ ಎನ್ನುವ ತೀರ್ಮಾನಕ್ಕೆ ಬರಲಾಗುವುದು.

**3. ತಾರತಮ್ಯದ ಅನುಭವದ ಸೂಚಿ:**

ವಿವಿಧ ಅಭಿವೃದ್ಧಿ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ದಲಿತರು ತಾರತಮ್ಯಗಳನ್ನು ಎದುರಿಸುವ ಸಾಧ್ಯತೆಗಳಿವೆ. ತಾರತಮ್ಯಗಳು ಕಡಿಮೆಯಾದಷ್ಟು ದಲಿತ ಅಭಿವೃದ್ಧಿ ಸಾಧ್ಯತೆಗಳು ಹೆಚ್ಚಾಗುತ್ತದೆ ಎನ್ನುವ ಗ್ರಹಿಕೆ ಈ ಸೂಚಿಯಲ್ಲಿದೆ. ಶಾಲೆಯಲ್ಲಿ ದಲಿತ ಮಕ್ಕಳು ಎದುರಿಸುವ ತಾರತಮ್ಯಗಳು, ಆರೋಗ್ಯ ಸವಲತ್ತುಗಳನ್ನು ಪಡೆಯುವಾಗ ಎದುರಿಸುವ ತಾರತಮ್ಯಗಳು, ಕುಡಿಯುವ ನೀರಿನ ವಿತರಣೆಯಲ್ಲಿ ತಾರತಮ್ಯ, ಊರಲ್ಲಿ ಸೃಷ್ಟಿಯಾಗುವ ಉದ್ಯೋಗಗಳನ್ನು ಪಡೆಯುವಲ್ಲಿನ ತಾರತಮ್ಯಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಎದುರಿಸುವ ತಾರತಮ್ಯಗಳು – ಹೀಗೆ ಒಟ್ಟು ಐದು ಅಂಶಗಳನ್ನು ಅಥವಾ ಸೂಚ್ಯಂಕಗಳನ್ನು ಪರಿಗಣಿಸಲಾಗಿದೆ.

**4. ತಾರತಮ್ಯದ ವಿರುದ್ಧ ಪ್ರತಿಭಟನೆಯ ಸೂಚಿ:**

ತಾರತಮ್ಯ ಕಡಿಮೆ ಇದ್ದರೆ ದಲಿತ ಅಭಿವೃದ್ಧಿ ಸಾಧ್ಯತೆ ಹೆಚ್ಚಾದಂತೆ ಒಂದು ವೇಳೆ ಮೇಲಿನ ಕ್ಷೇತ್ರಗಳಲ್ಲಿ (ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ಉದ್ಯೋಗಗಳಲ್ಲಿ) ತಾರತಮ್ಯ ಇದ್ದಾಗ ಅದನ್ನು ಪ್ರತಿಭಟಿಸುವ ಸಾಧ್ಯತೆ ಹೆಚ್ಚಾದಂತೆ ದಲಿತ ಅಭಿವೃದ್ಧಿ ಹೆಚ್ಚಾಗುತ್ತದೆಯೆಂದು ಗ್ರಹಿಸಲಾಗಿದೆ. ಏಕೆಂದರೆ ಪ್ರತಿಭಟಿಸಬೇಕಾದರೆ ಎರಡು ಸಂಗತಿಗಳ ಇರುವಿಕೆ ಮುಖ್ಯ. ಒಂದು, ಮೇಲ್ಜಾತಿಗಳ ನಿರ್ದಿಷ್ಟ ನಡವಳಿಕೆ ಸರಿಯಲ್ಲ ಎನ್ನುವ ಗ್ರಹಿಕೆ. ಇದು ಸಾಧ್ಯವಾಗುವುದು ಸಮಾನತೆಯ ಪ್ರಜ್ಞೆ ಬಲಗೊಂಡ ಸಂದರ್ಭದಲ್ಲಿ. ಅಂದರೆ ದಲಿತರಲ್ಲಿ ತಾವು ದಲಿತೇತರರಿಗೆ ಸಮಾನರು ಎನ್ನುವ ಪ್ರಜ್ಞೆ ಜಾಗ್ರತೆ–ಗೊಂಡ ಸಂದರ್ಭದಲ್ಲಿ. ಎರಡು, ಪ್ರತಿಭಟನೆಯ ಪರಿಣಾಮ ಎದುರಿಸುವ ಶಕ್ತಿ ಕೂಡ ಇಲ್ಲಿ ಮುಖ್ಯ. ಪ್ರತಿಭಟನೆಯ ಪರಿಣಾಮ ಸೋಲಿರಬಹುದು ಅಥವಾ ಗೆಲುವಿರಬಹುದು. ಗೆದ್ದರೆ ಸಮಸ್ಯೆಯಿಲ್ಲ. ಆದರೆ ಸೋತಾಗ ಏನು ಮಾಡಬಹುದೆನ್ನುವುದರ ಬಗ್ಗೆ ಖಚಿತತೆ ಇರುವವರು ಮಾತ್ರ ಪ್ರತಿಭಟಿಸಲು ಸಾಧ್ಯ. ಅಂದರೆ ಸೋತಾಗ ಕಳೆದುಕೊಳ್ಳುವ ಸ್ಥಳಿಯ ಆರ್ಥಿಕ ಅವಕಾಶಗಳ ಬದಲು ಬೇರೆ ಅವಕಾಶಗಳ ಸಾಧ್ಯತೆಯ ಭರವಸೆ ಇದ್ದಾಗ ಪ್ರತಿಭಟಿಸುವ ಸಾಧ್ಯತೆಗಳು ಹೆಚ್ಚು.

**5. ಸಂಘರ್ಷ ಪರಿಹಾರ ಸೂಚಿ:**

ಮೇಲಿನ ಕ್ಷೇತ್ರಗಳಲ್ಲಿ ತಾರತಮ್ಯ ಇತ್ತು ಮತ್ತು ಅದನ್ನು ದಲಿತರು ಪ್ರತಿಭಟಿಸಿದ್ದಾರೆ. ಪ್ರತಿಭಟನೆಯ ಪರಿಣಾಮ ಅಥವಾ ಸಮಸ್ಯೆಯ ಪರಿಹಾರ ಹೇಗಾಗಿದೆ ಎನ್ನುವುದನ್ನು ಈ ಸೂಚಿ ಮಾಪನ ಮಾಡುತ್ತದೆ. ಸಮಸ್ಯೆಗಳು ಹಲವು ರೀತಿಯಲ್ಲಿ ಪರಿಹಾರಗೊಳ್ಳಬಹುದು. ಒಂದು, ಸಮಸ್ಯೆಗಳನ್ನು ಪರಿಹಾರ ಮಾಡದೆ ಮುಂದೂಡುವುದು, ಎರಡು, ಮೇಲ್ಜಾತಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಪರಿಹರಿಸುವುದು, ಮೂರು, ದಲಿತರಿಗೆ ಅನುಕೂಲವಾಗುವ ರೀತಿಯಲ್ಲಿ ಪರಿಹರಿಸುವುದು ಮತ್ತು ನಾಲ್ಕು, ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಪರಿಹರಿಸುವುದು. ಇಲ್ಲಿ ಮೇಲಿನ ಸಮಸ್ಯೆಗಳನ್ನು ದಲಿತರಿಗೆ ಸಮಧಾನ ತರುವ ರೀತಿಯಲ್ಲಿ ಪರಿಹರಿಸಲಾಗಿದೆಯೇ ಎನ್ನುವ ಅಂಶವನ್ನು ಪರಿಗಣಿಸಲಾಗಿದೆ.

**6. ಸ್ವಾತಂತ್ರ್ಯದ ಅನುಭವದ ಸೂಚಿ:**

ನಲ್ವತ್ತೇಳರಲ್ಲಿ ದೇಶ ಸ್ವಾತಂತ್ರ್ಯಗೊಂಡಿದೆ–ಯೆಂದು ನಾವು ಸಂಭ್ರಮಿಸುತ್ತಿದ್ದೇವೆ. ನಲ್ವತ್ತೇಳರ ಸ್ವಾತಂತ್ರ್ಯವನ್ನು ಎಲ್ಲರೂ ಅದರಲ್ಲೂ ಪಿರಮಿಡ್‌ನ ಬುಡದಲ್ಲಿರುವವರು ಅನುಭವಿಸುತ್ತಿದ್ದಾರೆಯೇ ಎನ್ನುವುದನ್ನು ಈ ಸೂಚಿ ಮಾಪನ ಮಾಡುತ್ತದೆ. ಜೊತೆಗೆ ಬಹುತೇಕ ಸಂದರ್ಭದಲ್ಲಿ ನಮ್ಮ ಇಡೀ ಸ್ವಾತಂತ್ರ್ಯದ ಚರ್ಚೆ ವಾಕ್, ಅಭಿವ್ಯಕ್ತಿ ಹಾಗು ಸಾಂಸ್ಕೃತಿಕ ಸ್ವಾತಂತ್ರ್ಯದ ಸುತ್ತಲಿವೆ. ಇವೆಲ್ಲವೂ ಮುಖ್ಯವೇ. ಆದರೆ ತಳಸ್ತರದಲ್ಲಿ ವ್ಯಕ್ತಿ ಮಾನಸಮ್ಮಾನದಿಂದ ಬದುಕಲು ಇವಿಷ್ಟು ಸಾಲದು. ಸ್ವಾತಂತ್ರ್ಯದ ಚರ್ಚೆಯನ್ನು ವಿಸ್ತರಿಸಿ ತಳಸ್ತರದ ವ್ಯಕ್ತಿಗಳ ದಿನನಿತ್ಯದ ಬದುಕಿನ ಪ್ರಶ್ನೆಯೊಂದಿಗೆ ನೇರ ಸಂಬಂಧ ಇರುವ ಸಂಗತಿಗಳೊಂದಿಗೆ ಜೋಡಿಸುವ ಅಗತ್ಯವಿದೆ. ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಈ ಸೂಚಿಯನ್ನು ಕಟ್ಟಲು ಐದು ಅಂಶಗಳನ್ನು ಅಥವಾ ಸೂಚ್ಯಂಕಗಳನ್ನು ಬಳಸಲಾಗಿದೆ. ತಮಗಾಗುವ ಎಲ್ಲ ಅನ್ಯಾಯಗಳನ್ನು ಪ್ರಶ್ನಿಸುವ ಸ್ವಾತಂತ್ರ್ಯ ದಲಿತರಿಗಿದೆಯೇ? ತಮಗಾಗುವ ಎಲ್ಲ ತಾರತಮ್ಯಗಳನ್ನು ಪ್ರಶ್ನಿಸುವ ಸ್ವಾತಂತ್ರ್ಯ ದಲಿತರಿಗಿದೆಯೇ? ದಲಿತೇತರರು ಓಡಾಡುವ ಎಲ್ಲ ಪ್ರದೇಶಗಳಲ್ಲೂ ಓಡಾಡುವ ಸ್ವಾತಂತ್ರ್ಯ ದಲಿತರಿಗಿದೆಯೇ? ದಲಿತೇತರರಿಗೆ ಲಭ್ಯವಾಗುವ ಎಲ್ಲ ಉದ್ಯೋಗದ ಅವಕಾಶಗಳನ್ನು ಪಡೆಯುವ ಸ್ವಾತಂತ್ರ್ಯ ದಲಿತರಿಗಿದೆಯೇ? ದಲಿತೇತರರಂತೆ ಊರಿನ ಎಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುವ ಸ್ವಾತಂತ್ರ್ಯ ದಲಿತರಿಗಿದೆಯೇ? ಇತ್ಯಾದಿ ಅಂಶಗಳನ್ನು ಈ ಸೂಚಿ ಒಳಗೊಂಡಿದೆ.

**7. ಬದುಕಿನ ಮಟ್ಟದ ಸೂಚಿ**

ಮೇಲಿನ ಆರು ಸೂಚಿಗಳು ದಲಿತರ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಟ್ಟರೆ ಈ ಸೂಚಿ ಮತ್ತು ಮುಂದಿನ ಕೆಲವು ಸೂಚಿಗಳು ದಲಿತರ ಅರ್ಥಿಕ ಅಭಿವೃದ್ಧಿಯನ್ನು ಕಟ್ಟಿಕೊಡುತ್ತಿವೆ. ದಲಿತರ ಆರ್ಥಿಕಾಭಿವೃದ್ಧಿಯನ್ನು ಮಾಪನ ಮಾಡಲು ಈ ಕೆಳಗಿನ ಸೂಚ್ಯಂಕಗಳನ್ನು ಬಳಸಲಾಗಿದೆ. ಪಕ್ಕಾ ಮನೆಗಳು, ಭೂಹಿಡುವಳಿ, ಕೃಷಿಯೇತರ ಚಟುವಟಿಕೆಗಳು, ಕರೆಂಟ್ ಕನೆಕ್ಷನ್, ಮೋಟರ್ ಬೈಕ್/ಸ್ಕೂಟರ್ ಹೊಂದಿರುವುದು. ಇವೆಲ್ಲವನ್ನು ಊರಲ್ಲಿರುವ ದಲಿತ ಹಾಗು ದಲಿತೇತರ ಕುಟುಂಬಗಳ ಅನುಪಾತಕ್ಕೆ ಹೋಲಿಸಿ ಮಾಪನ ಮಾಡಲಾಗಿದೆ. ಊರಲ್ಲಿ ದಲಿತೇತರ ಮತ್ತು ದಲಿತ ಕುಟುಂಬಗಳು 70:30 ಅನುಪಾತದಲ್ಲಿದ್ದಾಗ ಮೇಲಿನ ಎಲ್ಲ ಸವಲತ್ತುಗಳು 70:30 ಅನುಪಾತದಲ್ಲಿರಬೇಕು. ದಲಿತರ ಆಸ್ತಿಪಾಸ್ತಿಗಳು ಈ ಅನುಪಾತಕ್ಕಿಂತ ಕಡಿಮೆ ಇದ್ದರೆ ದಲಿತರ ಬದುಕಿನ ಮಟ್ಟದ ಸೂಚಿ ಕಡಿಮೆ ಇದೆ–ಯೆಂದು ಪರಿಗಣಿಸಲಾಗುವುದು.

**8. ಲಿಂಗ ಆಯಾಮ ಸೂಚಿ:**

ದಲಿತ ಮಹಿಳೆಯರ ಪುನರುತ್ಪಾದನೆ ಆರೋಗ್ಯಕ್ಕೆ ಸಂಬಂಧಿಸಿದ ಐದು ಅಂಶಗಳನ್ನು ಬಳಸಿಕೊಂಡು ಈ ಸೂಚಿಯನ್ನು ಕಟ್ಟಲಾಗಿದೆ. ಹೆರಿಗೆಯ ನಂತರ ಮಹಿಳೆಗೆ ಕನಿಷ್ಠ ಮೂರು ತಿಂಗಳ ವಿಶ್ರಾಂತಿ ಬೇಕೆನ್ನುವುದರ ಬಗ್ಗೆ ಖಚಿತತೆ ಇದೆ. ಆದರೆ ಹೆರಿಗೆ ಮುನ್ನ ಎಷ್ಟು ದಿನಗಳ ವಿಶ್ರಾಂತಿ ಬೇಕೆನ್ನುವುದರ ಬಗ್ಗೆ ಖಚಿತತೆ ಇಲ್ಲ. ಹೆರಿಗೆಗೆ ಮುನ್ನ ಗರ್ಭಿಣಿ ಮಹಿಳೆ ಕೆಲವೊಂದು ಜಾಗ್ರತೆಗಳನ್ನು ವಹಿಸಬೇಕೆಂದು ವೈದ್ಯರು ಸೂಚಿಸುತ್ತಾರೆ. ಕಠಿಣ ದುಡಿಮೆ ಮಾಡಬಾರದು, ಭಾರ ಎತ್ತಬಾರದು, ಜೋರಾಗಿ ಓಡಬಾರದು ಇತ್ಯಾದಿ ಸಲಹೆಗಳನ್ನು ವೈದ್ಯರು ಗರ್ಭಿಣಿಯರಿಗೆ ನೀಡುತ್ತಾರೆ. ಈ ಎಲ್ಲದರ ಹಿನ್ನೆಲೆಯಲ್ಲಿ ಹೆರಿಗೆಗೆ ಮುನ್ನ ಮೂರು ತಿಂಗಳು ಮತ್ತು ಹೆರಿಗೆ ನಂತರ ಮೂರು ತಿಂಗಳು ವಿಶ್ರಾಂತಿ ಅಗತ್ಯ ಎನ್ನುವ ತೀರ್ಮಾನಕ್ಕೆ ಬರಲಾಗಿದೆ. ಆಸ್ಪತ್ರೆಯಲ್ಲಿ ಹೆರಿಗೆಯಾಗುವುದು ಸುರಕ್ಷಿತ ಎಂದಾಗಿದೆ. ತಳಸ್ತರದಲ್ಲಿರುವ ಗರ್ಭಿಣಿ ಹೆಂಗಸರು ಕಬ್ಬಿಣದ ಅಂಶ ಮತ್ತು ಇತರ ಪೌಷ್ಠಿಕಾಂಶಗಳ ಕೊರತೆ ಅನುಭವಿಸುತ್ತಿದ್ದಾರೆ. ಈ ಕೊರತೆಯನ್ನು ಭರಿಸಲು ಸರಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಸವಲತ್ತುಗಳು ಎಷ್ಟರ ಮಟ್ಟಿಗೆ ದಲಿತ ಮಹಿಳೆಯರಿಗೆ ತಲುಪಿದೆ ಎನ್ನುವ ಅಂಶವನ್ನು ಪರಿಗಣಿಸಲಾಗಿದೆ.

**9. ಮೂಲಸೌಕರ್ಯ ನಿಲುಕುವಿಕೆಯ ಸೂಚಿ :**

ಪುಟ 10 ಕ್ಕೆ

# ಮಕ್ಕಳ ಹಕ್ಕುಗಳಿಗೆ ವಿಶ್ವಾಸಘಾತ





ಬಾಲದುಡಿಮೆಯನ್ನು ಕಾನೂನುಬದ್ಧಗೊಳಿಸುವ, ಮಕ್ಕಳ ಶಿಕ್ಷಣಕ್ಕೆ ವಿರುದ್ಧವಾಗಿ ನಿಲ್ಲುವ ಮತ್ತು ಜಾತಿ ಅಸಮಾನತೆಗಳನ್ನು ಶಾಶ್ವತಗೊಳಿಸುವ ಒಂದು ಕೆಟ್ಟ ಕಾನೂನನ್ನು ಅಂಗೀಕರಿಸಲಾಗಿದೆ. ಇದು ದುಡಿಮೆಯನ್ನು ಅನೌಪಚಾರಿಕಗೊಳಿಸುವ ನವ-ಉದಾರವಾದಿ ಪಥ್ಯಕ್ಕೆ ಅನುಗುಣವಾಗಿದೆ. ಎಷ್ಟು ಬೇಗನೇ ಸಾಧ್ಯವೋ ಅಷ್ಟು ಬೇಗನೇ ಸಂಸತ್ತು ಇದರತ್ತ ಮರುನೋಟ ಹಾಕಬೇಕು ಮತ್ತು ಅಗತ್ಯ ಸರಿಪಡಿಕೆಗಳನ್ನು ಮಾಡಬೇಕು.



**ಪ್ರಕಾಶ ಕಾರಟ್**

ಸಂಸತ್ತು ಅಂಗೀಕರಿಸಿರುವ 14 ವರ್ಷದ ವರೆಗಿನ ಮಕ್ಕಳನ್ನು ದುಡಿಸಿಕೊಳ್ಳುವುದನ್ನು ನಿಷೇಧಿಸುವ ಮಸೂದೆ ವಾಸ್ತವವಾಗಿ ತದ್ವಿರುದ್ಧವಾದುದನ್ನೇ ಮಾಡುತ್ತದೆ. ಅದು ದೊಡ್ಡ ಪ್ರಮಾಣದಲ್ಲಿ ಬಾಲದುಡಿಮೆಯನ್ನು ಕಾನೂನುಬದ್ಧಗೊಳಿಸಿದೆ.

ಸಂಸದ್ ಸದಸ್ಯರು ಹಲವಾರು ಆಕ್ಷೇಪಗಳನ್ನು ಎತ್ತಿದರೂ ಅದರ ನಡುವೆಯೂ ಅಂಗೀಕರಿಸಿರುವ ಬಾಲದುಡಿಮೆ(ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ ಒಂದು ಪ್ರತಿಗಾಮಿ ಕಾಯ್ದೆ. ಇದು ಎಲ್ಲ ಸ್ವರೂಪಗಳ ದುಡಿಮೆಗಳಲ್ಲಿ ಮಕ್ಕಳನ್ನು ಬಳಸುವುದನ್ನು ನಿಷೇಧಿಸಿದರೂ, ಕುಟುಂಬ-ಆಧಾರಿತ ಉದ್ದಿಮೆಗಳಲ್ಲಿ ದುಡಿಸಿಕೊಳ್ಳಲು ಮತ್ತು 'ಮನೆ-ಆಧಾರಿತ ಕೆಲಸ'ದಲ್ಲಿ, ಉದಾಹರಣೆಗೆ ಗದ್ದೆಗಳು, ಕಾಡುಗಳಲ್ಲಿ ಮಾಡುವ ಕೆಲಸಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳಲು ಅನುಮತಿ ನೀಡಿದೆ. ಕುಟುಂಬ ಎಂಬುದರ ನಿರೂಪಣೆ ಕೇವಲ ತಂದೆ-ತಾಯಿ-ಮಕ್ಕಳು ಎಂಬುದಕ್ಕೇ ಸೀಮಿತಗೊಂಡಿಲ್ಲ. ಅದರಲ್ಲಿ ತಂದೆ ಮತ್ತು ತಾಯಿಯ ಸೋದರರು ಮತ್ತು ಸೋದರಿಯರನ್ನು ಕೂಡ ಸೇರಿಸಲಾಗಿದೆ. ಮಕ್ಕಳು ಶಾಲಾ ಗಂಟೆಗಳ ನಂತರ ಮತ್ತು ರಜಾದಿನಗಳಲ್ಲಿ ಕುಟುಂಬಕ್ಕೆ 'ಸಹಾಯ' ಮಾಡಲು ಅನುಮತಿ ನೀಡಲಾಗಿದೆ.

'ಕುಟುಂಬದ ಉದ್ದಿಮೆ'ಗಳಲ್ಲಿ ಮಕ್ಕಳು ಕೆಲಸ ಮಾಡಲು ಬಿಡುವ ಮೂಲಕ ಈಗ ಕಾನೂನುಬಾಹಿರವಾಗಿರುವ ಬಾಲದುಡಿಮೆಗಳಲ್ಲಿ ಕನಿಷ್ಟ ಮುಕ್ಕಾಲು ಭಾಗ ಇನ್ನು ಕಾನೂನುಬದ್ಧಗೊಳ್ಳುತ್ತವೆ. ಈಗ ಹಲವಾರು ಸಂಘಟಿತ ವಲಯದ ಉದ್ದಿಮೆಗಳಲ್ಲಿ ಕೆಲಸಗಳನ್ನು ಹೊರಗುತ್ತಿಗೆ ನೀಡಲಾಗುತ್ತಿದೆ, ಆ ಗುತ್ತಿಗೆದಾರರು ಅವನ್ನು ಕುಟುಂಬಗಳಿಗೆ ಕೊಟ್ಟು ಶೋಷಣಾತ್ಮಕ ಕೂಲಿಗಳಲ್ಲಿ ಮಾಡಿಸಿಕೊಳ್ಳುವ ಪ್ರವೃತ್ತಿ ಕಾಣಬರುತ್ತಿದೆ. ಇಂತಹ ಮನೆ-ಆಧಾರಿತ ಕೆಲಸಗಳಲ್ಲಿ ಮಕ್ಕಳ ಬಳಕೆ ಈಗ ಕಾನೂನುಬದ್ಧವಾಗುತ್ತದೆ. ಇದು ಮಕ್ಕಳು ಶಾಲೆ ತಪ್ಪಿಸಿಕೊಳ್ಳಲು ಕುಮ್ಮಕ್ಕು ನೀಡುತ್ತದೆ. ಅಲ್ಲದೆ, ಮಕ್ಕಳನ್ನು ಶಾಲಾ ಗಂಟೆಗಳ ನಂತರ ದುಡಿಸಿಕೊಂಡರೆ ಅದು ಅವರನ್ನು ವಿರಾಮ ಮತ್ತು ಮನರಂಜನೆಯಿಂದ ವಂಚಿಸಿ ಅವರ ಆರೋಗ್ಯ ಮತ್ತು ಬೆಳವಣಿಗೆಯ ಮೇಲೂ ದುಷ್ಪರಿಣಾಮ ಬೀರುತ್ತದೆ.

ಈ ತಿದ್ದುಪಡಿ ಕೊಟ್ಟಿರುವ ಇನ್ನೊಂದು ವಿನಾಯ್ತಿ ಎಂದರೆ ವಾಕ್-ದೃಶ್ಯ(ಆಡಿಯೋ-ವಿಶುವಲ್) ಮನರಂಜನಾ ಉದ್ದಿಮೆಯಲ್ಲಿ ಮಕ್ಕಳು ಕೆಲಸ ಮಾಡಬಹುದು ಎಂದಿರುವುದು. ಇಲ್ಲಿಯೂ ದೀರ್ಘ ಅವಧಿಯ ವರೆಗೆ ಕೆಲಸ ಶಾಲೆ ತಪ್ಪಿಸಿಕೊಳ್ಳಲು ಒಂದು ಉತ್ತೇಜನೆಯಾಗುತ್ತದೆ. ಇನ್ನೂ ಅಪಾಯಕಾರಿಯೆಂದರೆ ಇದು ಅವರ ಲೈಂಗಿಕ ಶೋಷಣೆಗೂ ಅವಕಾಶ ಮಾಡಿಕೊಡುತ್ತದೆ.

ಈ ಕಾನೂನಿಗೆ ಬಲಿಯಾಗುವವರು ಬಡವರ ಮಕ್ಕಳು, ಅಪೌಷ್ಟಿಕತೆಗೆ ಒಳಗಾದವರು ಮತ್ತು ಶಾಲೆಯಲ್ಲಿ ಮುಂದುವರಿಯುವುದು ಕಷ್ಟ ಎಂದಿರುವವರು. ಅಷ್ಟೇ ಅಲ್ಲ, ಈ ಕಾನೂನು ಜಾತಿ-ಆಧಾರಿತ ವೃತ್ತಿಗಳನ್ನು ಶಾಶ್ವತಗೊಳಿಸುತ್ತದೆ.

ಹಾನಿಕಾರಕ ಉದ್ದಿಮೆಗಳು ಯಾವ್ಯಾವವು ಎಂದು ಪಟ್ಟಿ ಮಾಡುವಲ್ಲಿ 1986ರ ಮೂಲ ಕಾಯ್ದೆಯನ್ನು ಪ್ರತಿಗಾಮಿ ರೀತಿಯಲ್ಲಿ ತಿದ್ದುಪಡಿ ಮಾಡಲಾಗಿದೆ. 1986 ರ ಕಾಯ್ದೆಯಲ್ಲಿ 16 ವೃತ್ತಿಗಳು ಮತ್ತು 65 ಕ್ರಿಯೆಗಳನ್ನು ಹಾನಿಕಾರಕ ಎಂದು ಪಟ್ಟಿ ಮಾಡಲಾಗಿದೆ. ತಿದ್ದುಪಡಿಯಾಗಿರುವ ಕಾನೂನು ಅದನ್ನು ಫ್ಯಾಕ್ಟರಿ ಕಾಯ್ದೆಯಲ್ಲಿ ಪಟ್ಟಿಯಾಗಿರುವವುಗಳಲ್ಲಿ ಕೇವಲ ಮೂರು ವೃತ್ತಿಗಳಿಗೆ (ಗಣಿಗಾರಿಕೆ, ಜ್ವಲನಶೀಲ ಸಾಮಗ್ರಿಗಳು ಮತ್ತು ಸ್ಫೋಟಕಗಳು) ಮತ್ತು 29 ಕ್ರಿಯೆಗಳಿಗೆ ಇಳಿಸಿದೆ. ಈ ಫ್ಯಾಕ್ಟರಿ ಕಾಯ್ದೆ ಕೇವಲ ಸಂಘಟಿತ ವಲಯಕ್ಕೆ ಅನ್ವಯವಾಗುವಂತದ್ದು. ಹೀಗೆ ಚರ್ಮ ಹದಮಾಡುವುದು, ಝರಿ ಕೆಲಸ, ಬಳೆ ತಯಾರಿ, ಜಮಖಾನೆ ತಯಾರಿ ಮುಂತಾದವುಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳಬಹುದು. ಇವನ್ನು ಇದುವರೆಗೆ ಹಾನಿಕಾರಕ ಕೆಲಸಗಳು ಎಂದು ಪರಿಗಣಿಸಲಾಗಿದೆ.

ತಿದ್ದುಪಡಿಯಾಗಿರುವ ಕಾಯ್ದೆಯ ಮತ್ತೊಂದು ಲಕ್ಷಣವೆಂದರೆ ಇದು 14ರಿಂದ 18 ವರ್ಷಗಳ ವರೆಗಿನ ಮಕ್ಕಳನ್ನು 'ಹರೆಯದವರು' ಎಂದು ನಿರೂಪಿಸುತ್ತದೆ, ಅವರನ್ನು ಹಾನಿಕಾರಕ ಎಂದು ಪಟ್ಟಿಯಾದವುಗಳಲ್ಲಿ ಬಿಟ್ಟು ಬೇರೆಲ್ಲ ವೃತ್ತಿಗಳಲ್ಲಿ ದುಡಿಸಿಕೊಳ್ಳಬಹುದು. ಹಾನಿಕಾರಕ ವೃತ್ತಿಗಳನ್ನು ಕೇವಲ ಮೂರಕ್ಕೆ ಇಳಿಸಿ ಹರೆಯದ ಮಕ್ಕಳನ್ನು ಬಳೆ ತಯಾರಿ, ಝರಿ-ತಯಾರಿ, ಕಟ್ಟಡ ಕೆಲಸ ಮುಂತಾದವುಗಳಲ್ಲಿಯೂ ದುಡಿಸಿಕೊಳ್ಳಲು ಅವಕಾಶವಾಗಿದೆ. ಇವನ್ನೆಲ್ಲ ಇದುವರೆಗೆ ಹಾನಿಕಾರಕ ಎಂದು ನಿರೂಪಿಸಲಾಗಿತ್ತು.

ತಮ್ಮ ಮಕ್ಕಳನ್ನು ದುಡಿಮೆಗೆ ಕಳಿಸುವ ತಂದೆ-ತಾಯಿರನ್ನು ಶಿಕ್ಷಿಸುವ ಒಂದುಅಂಶವನ್ನು ಈ ತಿದ್ದುಪಡಿಯಲ್ಲಿ ಸೇರಿಸಲಾಗಿದೆ. ಈ ಪಾಲಕರು ಬಾಲದುಡಿಮೆಯನ್ನು ಶಾಶ್ವತಗೊಳಿಸಬಯಸುವವರಲ್ಲ, ಅವರು ಸ್ವತಃ ಪರಿಸ್ಥಿತಿಗಳಿಗೆ ಬಲಿಯಾಗಿರುವವರು. ಈ ಅಂಶವನ್ನು ಮನಬಂದಂತೆ ಬಳಸುವ ಮತ್ತು ಭ್ರಷ್ಟಾಚಾರದ ಒಂದು ಮೂಲವಾಗಿಸುವ ಸಾಧ್ಯತೆ ಇದೆ.

ದುಡಿಮೆಯನ್ನು ಅನೌಪಚಾರಿಕಗೊಳಿಸುವ ನವ-ಉದಾರವಾದಿ ಪಥ್ಯಕ್ಕೆ ಅನುಗುಣವಾಗಿ ಈ ಕಾಯ್ದೆ ಈಗ ಅನಿಯಂತ್ರಿತ ಅನೌಪಚಾರಿಕ ವಲಯದಲ್ಲಿ ಮಕ್ಕಳನ್ನು ಬಳಸಿಕೊಳ್ಳಲು ಅನುಮತಿ ಕೊಡುತ್ತದೆ. ಇದು ಭಾರತವನ್ನು ನಿಪುಣಗೊಳಿಸುವ, 'ಭಾರತದಲ್ಲಿ ತಯಾರಿಸಿ' ಉದ್ಯೋಗ ನಿರ್ಮಿಸುವ ಘೋಷಣೆಗಳೊಂದಿಗೆ ಹೇಗೆ ಸೇರಿಕೊಳ್ಳುತ್ತದೋ ಕೇವಲ ಮೋದಿ ಸರಕಾರವೇ ವಿವರಿಸಬೇಕು.

ಬಾಲದುಡಿಮೆಯನ್ನು ಕಾನೂನುಬದ್ಧಗೊಳಿಸುವ, ಮಕ್ಕಳ ಶಿಕ್ಷಣಕ್ಕೆ ವಿರುದ್ಧವಾಗಿ ನಿಲ್ಲುವ ಮತ್ತು ಜಾತಿ ಅಸಮಾನತೆಗಳನ್ನು ಶಾಶ್ವತಗೊಳಿಸುವ ಒಂದು ಕೆಟ್ಟ ಕಾನೂನನ್ನು ಅಂಗೀಕರಿಸಲಾಗಿದೆ. ಎಷ್ಟು ಬೇಗನೇ ಸಾಧ್ಯವೋ ಅಷ್ಟು ಬೇಗನೇ ಸಂಸತ್ತು ಇದರತ್ತ ಮರುನೋಟ ಹಾಕಬೇಕು ಮತ್ತು ಅಗತ್ಯ ಸರಿಪಡಿಕೆಗಳನ್ನು ಮಾಡಬೇಕು.


### ಮಹಿಳಾ ಸಂಘಟನೆಗಳ ಮನವಿಯೂ 'ಒಳ್ಳೆಯ ದಿನ'ಗಳ ಸಂಸದರ ಮನ ತಟ್ಟಲಿಲ್ಲ

ಜುಲೈ 19ರಂದು ರಾಜ್ಯಸಭೆಯಲ್ಲಿ ಬಾಲದುಡಿಮೆ ತಿದ್ದುಪಡಿ ಮಸೂದೆ ಪಾಸಾದುದನ್ನು ಕಂಡ ಮಹಿಳಾ ಸಂಘಟನೆಗಳ ಮುಖಂಡರು, ಪ್ರೊ. ಮಾಲಿನಿ ಭಟ್ಟಾಚಾರ್ಯ, ಕೀರ್ತಿ ಸಿಂಗ್, ಎಐಡಬ್ಲ್ಯುಸಿಯ ಚಿತ್ರಾ ಸರ್ಕಾರ್, ರುಚಿರ ಗುಪ್ತ ಮತ್ತಿತರ ಪ್ರತಿಷ್ಠಿತರು ಲೋಕಸಭಾ ಸದಸ್ಯರಿಗೆ ಒಂದು ಪತ್ರ ಬರೆದು ಅದು ಕಾನೂನಾದರೆ ಎಂತಹ ಅನಾಹುತಗಳಾಗುತ್ತವೆ ಎಂಬ ಬಗ್ಗೆ ಐದು ಮುಖ್ಯ ಅಂಶಗಳನ್ನು ಅವರ ಗಮನಕ್ಕೆ ತರುತ್ತ, ಇದನ್ನು ವಿರೋಧಿಸಬೇಕು ಎಂದು ಮನವಿ ಮಾಡಿಕೊಂಡರು. ಆದರೆ ಪ್ರತಿತಿಂಗಳು 'ಮನದ ಮಾತು' ಹೇಳುವವರ, ಅವರ ಹಿಂಬಾಲಕರ ಮನಗಳಿಗೆ ಈ ಕೋರಿಕೆ ತಟ್ಟಲೇ ಇಲ್ಲ.



* 'ಎಲ್ಲ ಸ್ವರೂಪಗಳ' ದುಡಿಮೆಗಳಲ್ಲೂ ಮಕ್ಕಳನ್ನು ಬಳಸುವುದಕ್ಕೆ ನಿಷೇಧ,
  ಆದರೆ, 'ಕುಟುಂಬ ಆಧಾರಿತ ಉದ್ದಿಮೆ'ಗಳಲ್ಲಿ ಮತ್ತು 'ಮನೆ-ಆಧಾರಿತ ಕೆಲಸ'ದಲ್ಲಿ, ಮಕ್ಕಳನ್ನು ಬಳಸಿಕೊಳ್ಳಲು ಅನುಮತಿ!
* ಈ ಮೂಲಕ ಇದುವರೆಗೆ ಕಾನೂನುಬಾಹಿರವಾಗಿರುವ ಬಾಲದುಡಿಮೆಗಳಲ್ಲಿ ಕನಿಷ್ಟ ಮುಕ್ಕಾಲುಪಾಲು ಕಾನೂನುಬದ್ಧವಾಗುತ್ತವೆ!
* 'ಹಾನಿಕಾರಕ ವೃತ್ತಿಗಳ ಸಂಖ್ಯೆ 16ರಿಂದ 3ಕ್ಕೆ ಇಳಿದಿದೆ!
* ಹಾನಿಕಾರಕ ಕ್ರಿಯೆಗಳ ಸಂಖ್ಯೆ 65ರಿಂದ 29ಕ್ಕೆ ಇಳಿದಿದೆ!
* 14ರಿಂದ 18 ವರ್ಷದ ವರೆಗಿನವರು 'ಮಕ್ಕಳು ಅಲ್ಲ, 'ಹರೆಯ'ದವರು. ಅವರನ್ನು ಮೂರು ಹಾನಿಕಾರಕ ವೃತ್ತಿಗಳಲ್ಲಿ ಬಿಟ್ಟು ಬೇರೆಲ್ಲ ಕಡೆಗಳಲ್ಲಿ ದುಡಿಸಿಕೊಳ್ಳಬಹುದು!






* **ಇದು ಭಾರತವನ್ನು ನಿಪುಣಗೊಳಿಸುವ, 'ಭಾರತದಲ್ಲಿ ತಯಾರಿಸಿ' ಉದ್ಯೋಗ ನಿರ್ಮಿಸುವ ಘೋಷಣೆಗಳೊಂದಿಗೆ ಹೇಗೆ ಸೇರಿಕೊಳ್ಳುತ್ತದೋ ಕೇವಲ ಮೋದಿ ಸರಕಾರವೇ ವಿವರಿಸಬೇಕು.**

'ಬಚ್‌ಪನ್ ಬಚಾವೋ ಆಂದೋಲನ್' (ಬಾಲ್ಯ ಉಳಿಸಿ ಆಂದೋಲನ) ಮೂಲಕ ಈ ಕ್ಷೇತ್ರದಲ್ಲಿ ದುಡಿದಿರುವ, ನೊಬೆಲ್ ಪ್ರಶಸ್ತಿ ವಿಜೇತ ಕೈಲಾಶ್ ಸತ್ಯಾರ್ಥಿ ಈ ತಿದ್ದುಪಡಿ ಮಸೂದೆಯ ಅಂಗೀಕಾರ ಭಾರತಕ್ಕೆ 'ಕಳೆದುಕೊಂಡ ಅವಕಾಶ' ಎಂದು ಬೇಸರ ವ್ಯಕ್ತಪಡಿಸುತ್ತ ಈಗ ಮಕ್ಕಳನ್ನು ಇಟ್ಟಿಗೆ ಗೂಡುಗಳಲ್ಲಿ, ಚರ್ಮ ಉದ್ಯಮಗಳಲ್ಲಿ, ಕಸಾಯಿ ಖಾನೆಗಳಲ್ಲಿ ಕುಟುಂಬದ ಸದಸ್ಯರ ವೇಷದಲ್ಲಿ ಕಾನೂನು ಬದ್ಧವಾಗಿ ದುಡಿಸಿಕೊಳ್ಳಬಹುದು! ಎಂದು ಉದ್ಗರಿಸಿದ್ದಾರೆ. ಅವರ ಆಂದೋಲನ ನಡೆಸಿದ ಒಂದು ಸರ್ವೆಯ ಪ್ರಕಾರ ಅವರು ದಿಲ್ಲಿಯಲ್ಲಿ ಬಾಲದುಡಿಮೆಯಿಂದ ರಕ್ಷಿಸಿದ ಮಕ್ಕಳಲ್ಲಿ 21ಶೇ. ದಷ್ಟು ತಮ್ಮ 'ಕುಟುಂಬ'ದವರೊಂದಿಗೆ ಕೆಲಸ ಮಾಡುತ್ತಿದ್ದರು! "ಯಜಮಾನರುಗಳು ದುಡಿಯುತ್ತಿದ್ದ ಮಕ್ಕಳ ಪಾಲಕರೆಂದೋ, ಅಥವ ಸಂಬಂಧಿಕರೆಂದೋ ಹೇಳಿರುವ ನೂರಾರು ಪ್ರಕರಣಗಳನ್ನು ನೋಡಿದ್ದೇನೆ" ಎನ್ನುತ್ತಾರೆ ಕೈಲಾಶ್ ಸತ್ಯಾರ್ಥಿ.

ಭಾರತ ವಿಶ್ವಸಂಸ್ಥೆಯ 'ತಾಳಿಕೆಯ ಅಭಿವೃದ್ಧಿಯ ಗುರಿಗಳು' ಎಂಬುದನ್ನು ಬೆಂಬಲಿಸಿದೆ. ಬಾಲದುಡಿಮೆಯ ನಿರ್ಮೂಲನೆ, ಎಲ್ಲ ಮಕ್ಕಳಿಗೆ ಗುಣಮಟ್ಟದ, ಸಮತ್ವದ ಶಿಕ್ಷಣ ಲಭ್ಯಗೊಳಿಸುವುದು ಆ ಗುರಿಗಳಲ್ಲಿ ಸೇರಿದೆ. ಆದರೆ ಈಗ ಆ ಸಮಯಮಿತಿಯ ಗುರಿಗಳು ಈಡೇರುವ ಬಗ್ಗೆ ತನಗೆ ಗಂಭೀರ ಸಂದೇಹಗಳಿವೆ ಎಂದು ಅವರು ಹೇಳುತ್ತಾರೆ.

# ಕಾಂಗ್ರೆಸ್‌ನೊಂದಿಗೆ ರಾಜಕೀಯ ಮೈತ್ರಿ ಏಕೆ ಸಾಧ್ಯವಿಲ್ಲ?

## ಸಿಪಿಐ(ಎಂ)ನ ರಾಜಕೀಯ ಧೋರಣೆಯ ವಿಮರ್ಶಕರಿಗೆ ಒಂದು ಉತ್ತರ

ಪ್ರಕಾಶ ಕಾರಟ್

ಕೋಮುವಾದದ ಅಪಾಯ ಮತ್ತು ಕೇಂದ್ರದಲ್ಲಿ ಅಧಿಕಾರ ನಡೆಸುವ ಬಿಜೆಪಿಯ ಪ್ರತಿಗಾಮಿ ಲಕ್ಷಣವೇ ಎಡ-ಕಾಂಗ್ರೆಸ್ ಮೈತ್ರಿಯ ಅಗತ್ಯಕ್ಕೆ ಕಾರಣವಾಗಿವೆ ಎಂಬ ಅಭಿಪ್ರಾಯವನ್ನು ಸಿಪಿಐ(ಎಂ)ನ ಹಿರಿಯ ಮುಖಂಡರಾದ **ಪ್ರಕಾಶ ಕಾರಟ್** ಈ ದೀರ್ಘ ಲೇಖನದಲ್ಲಿ ಪರಿಶೀಲಿಸಿದ್ದಾರೆ.

ಇದು ಆಳುವ ವರ್ಗಗಳ ಈ ಎರಡು ಪ್ರಮುಖ ಪಕ್ಷಗಳಂದ ಸಮಾನ ಅಂತರ ಕಾಯ್ದುಕೊಳ್ಳುವ ಒಂದು ಪ್ರಶ್ನೆಯಲ್ಲ. ಬಿಜೆಪಿಯನ್ನು ಜನರಿಂದ ಪ್ರತ್ಯೇಕಿಸುವುದು ಮತ್ತು ಅದನ್ನು ಸೋಲಿಸುವುದು ಪ್ರಸಕ್ತ ಕಾಲಘಟ್ಟದ ತನ್ನ ಪ್ರಧಾನ ಕಾರ್ಯಭಾರ ಎಂದು ಸಿಪಿಐ(ಎಂ) ಕೂಡ ನಿರ್ಧರಿಸಿದೆ. ಆದರೆ ಇದನ್ನು ನವ-ಉದಾರವಾದಿ ನೀತಿಗಳನ್ನು ಆರಂಭಿಸಿರುವ ಕಾಂಗ್ರೆಸ್‌ನೊಂದಿಗೆ ಸೇರಿಕೊಂಡು ಸಾಧಿಸಲು ಆಗುವುದಿಲ್ಲ ಎಂಬುದು ಸಿಪಿಐ(ಎಂ)ನ ಸ್ಪಷ್ಟ ನಿಲುವು ಎನ್ನುತ್ತಾರೆ ಪ್ರಕಾಶ ಕಾರಟ್ ಇಲ್ಲಿ ಪ್ರಕಟವಾಗಿರುವ ಈ ಲೇಖನದ ಮೊದಲ ಭಾಗದಲ್ಲಿ ಪ್ರಕಾಶ ಕಾರಟ್.

ಈ ಲೇಖನದ ಉಳಿದ ಭಾಗದ ಅನುವಾದ ಮುಂದಿನ ವಾರ ಪ್ರಕಟವಾಗುತ್ತದೆ.

ಸಿಪಿಐ (ಎಂ) ಕೇಂದ್ರ ಸಮಿತಿಯು ಕಳೆದ ತನ್ನ ಸಭೆಯಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷದ ನಿರ್ವಹಣೆ ಕುರಿತು ಪರಾಮರ್ಶೆ ನಡೆಸಿತು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡ ಚುನಾವಣೆ ತಂತ್ರವು ಪಕ್ಷದ ರಾಜಕೀಯ-ತಂತ್ರಾತ್ಮಕ ಧೋರಣೆಗೆ ಹೊರತಾಗಿದ್ದು ಈ ಧೋರಣೆಯನ್ನು ಸರಿಪಡಿಸಿಕೊಳ್ಳಬೇಕೆಂದು ಈ ಸಭೆ ನಿರ್ಧರಿಸಿತು. ಪಕ್ಷದ ಈ ನಿರ್ಧಾರ ರಾಜಕೀಯ ವಲಯಗಳಲ್ಲಿ ಕೆಲವು ಚರ್ಚೆಗಳನ್ನು ಹುಟ್ಟು ಹಾಕಿದೆ. ಕಾಂಗ್ರೆಸ್‌ನೊಂದಿಗೆ ಯಾವುದೇ ಹೊಂದಾಣಿಕೆ ಅಥವಾ ಚುನಾವಣೆ ಮೈತ್ರಿ ಮಾಡಿಕೊಳ್ಳಬಾರದೆಂಬ ಪಕ್ಷದ ಧೋರಣೆ ಕುರಿತು ಕೆಲವು ಎಡ ಹಾಗೂ ಉದಾರವಾದಿ ಬುದ್ಧಿಜೀವಿಗಳು ಅಸಮ್ಮತಿ ವ್ಯಕ್ತಪಡಿಸಿದ್ದಾರೆ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ಇತರೆ ಎಲ್ಲಾ ಜಾತ್ಯತೀತ ಪಕ್ಷಗಳೊಂದಿಗೆ ಸಿಪಿಐ (ಎಂ) ಮತ್ತು ಎಡಪಕ್ಷಗಳು ವಿಶಾಲವಾದ ರಾಜಕೀಯ ಮೈತ್ರಿಯನ್ನು ಮಾಡಿಕೊಳ್ಳುವುದು ಅಗತ್ಯ, ಇವುಗಳಲ್ಲಿ ಕಾಂಗ್ರೆಸ್ ಅತ್ಯಂತ ದೊಡ್ಡ ಜಾತ್ಯತೀತ ಪಕ್ಷ ಎಂದು ವಾದಿಸುವ ಕೆಲವು ಲೇಖನಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಹಾಗೆ ಮಾಡದಿದ್ದರೆ ಅದರಿಂದ ಕೇಂದ್ರದಲ್ಲಿನ ಆಳುವ ಪಕ್ಷವಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಬಿಜೆಪಿಗೆ ಅನುಕೂಲವಾಗುವುದು ಮಾತ್ರವೇ ಅಲ್ಲದೆ ಅದು ದೇಶಾದ್ಯಂತ ಬಿಜೆಪಿಯನ್ನು ಬಲಪಡಿಸುತ್ತದೆ ಕೂಡ ಎಂಬುದು ಆ ಲೇಖನಗಳ ವಾದವಾಗಿದೆ.

ಸಿಪಿಐ (ಎಂ)ನ ರಾಜಕೀಯ ಧೋರಣೆಯ ಈ ವಿಮರ್ಶಕರ ಪ್ರಕಾರ ತೃಣಮೂಲ ಸರಕಾರ ಹರಿಯಬಿಟ್ಟ ವ್ಯಾಪಕ ಹಿಂಸೆ ಹಾಗೂ ದಬ್ಬಾಳಿಕೆಯಿಂದಾಗಿ ಅಸಾಮಾನ್ಯ ಪರಿಸ್ಥಿತಿಯಿರುವ ಪಶ್ಚಿಮ ಬಂಗಾಳಕ್ಕೆ ಮಾತ್ರ ಈ ವಿಚಾರ ಸೀಮಿತವಲ್ಲ. ಕೇಂದ್ರದ ಬಿಜೆಪಿ ಸರಕಾರದ ನೆರವಿನೊಂದಿಗೆ ಬೆಳೆಯುತ್ತಿರುವ ಹಿಂದುತ್ವ ಕೋಮುವಾದಿ ಶಕ್ತಿಗಳಿಂದ ಉದ್ಭವಿಸಿರುವ ಅಪಾಯಕಾರಿ ಪರಿಸ್ಥಿತಿಯಿಂದಾಗಿ ಈ ವಿಚಾರವು ಅಖಿಲ ಭಾರತ ಮಟ್ಟದಲ್ಲಿಯೂ ಮಹತ್ವದ್ದಾಗಿದೆ ಎನ್ನುವುದು ಅವರ ಅಂಬೋಣ. ಕೋಮುವಾದದ ಈ ಅಪಾಯ ಮತ್ತು ಬಿಜೆಪಿಯ ಪ್ರತಿಗಾಮಿ ಲಕ್ಷಣವೇ ಇಂಥದ್ದೊಂದು ಎಡ-ಕಾಂಗ್ರೆಸ್ ಮೈತ್ರಿಯ ಅಗತ್ಯಕ್ಕೆ ಕಾರಣವಾಗಿವೆ ಎಂದವರು ವಾದಿಸುತ್ತಾರೆ. ಚುನಾವಣೆ ರಂಗದಲ್ಲಿ ಎಡಪಕ್ಷಗಳು ಏಕಾಂಗಿಯಾಗಿ ಬಿಜೆಪಿಯನ್ನು ಸೋಲಿಸಲಾರವು; ಹಾಗಾಗಿ ಈ ಗುರಿಯನ್ನು ಸಾಧಿಸಲು ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲಾ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಬೇಕು ಎನ್ನುವುದು ಅವರ ವಾದ.

ಈ ಅಭಿಪ್ರಾಯವನ್ನು ಒಪ್ಪದಿರುವುದಕ್ಕೆ 'ಪಂಥವಾದ' ಮತ್ತು 'ಸೈದ್ಧಾಂತಿಕ ಪರಿಶುದ್ಧತೆ' ಕುರಿತ ವೃಥಾ ಒತ್ತು ಎಂದು ಹಣೆಪಟ್ಟಿ ಹಚ್ಚಲಾಗುತ್ತದೆ. ಮೋದಿ ಸರಕಾರ ಅಧಿಕಾರದಲ್ಲಿರುವುರೊಂದಿಗೆ ದೇಶದಲ್ಲಿ ಕೋಮುವಾದಿ ಶಕ್ತಿಗಳು ಒಡ್ಡಿರುವ ಅಪಾಯವನ್ನು ಸಿಪಿಐ (ಎಂ) ನಾಯಕತ್ವ ಸರಿಯಾಗಿ ಅಂದಾಜು ಮಾಡುತ್ತಿಲ್ಲ ಎಂಬ ಪರೋಕ್ಷ ಟೀಕೆಗಳನ್ನೂ ಮಾಡಲಾಗುತ್ತಿದೆ.

1964ರಲ್ಲಿ ಪಕ್ಷ ರಚನೆಯಾದಾಗಿನಿಂದಲೂ ಸಿಪಿಐ (ಎಂ) ಕಾಂಗ್ರೆಸ್‌ನೊಂದಿಗೆ ಮೈತ್ರಿಯ ಈ ಧೋರಣೆಯನ್ನು ತಿರಸ್ಕರಿಸುತ್ತಲೇ ಬಂದಿದೆ. ಕಾಂಗ್ರೆಸ್ ಪಕ್ಷದ ವರ್ಗ ಲಕ್ಷಣದ ಕರಿತು ಪಕ್ಷದ ವಿಶ್ಲೇಷಣೆ ಮತ್ತು ಬಲಪಂಥೀಯ ಬಿಜೆಪಿ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೇಗೆ ಹೋರಾಟ ನಡೆಸಬೇಕು ಎಂಬ ಪಕ್ಷದ ತಿಳಿವಳಿಕೆಯೇ ಇದಕ್ಕೆ ಕಾರಣವಾಗಿದೆ.

ಕಾಂಗ್ರೆಸ್ ಪಕ್ಷವು ಆಳುವ ವರ್ಗಗಳ- ಭಾರತದಲ್ಲಿ ಬಂಡವಾಳಶಾಹಿಗಳು ಮತ್ತು ಭೂಮಾಲಿಕರ- ಪ್ರಧಾನ ಪಕ್ಷವಾಗಿದೆ. ವರ್ಗ ಸ್ವಭಾವದ ಕುರಿತು ಹೇಳುವುದಾದರೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಉಭಯ ಪಕ್ಷಗಳೂ ಆಳುವ ವರ್ಗಗಳ ಹಿತಗಳನ್ನು ಪ್ರತಿನಿಧಿಸುತ್ತವೆ. ಈ ಕಾರಣದಿಂದಾಗಿಯೇ ಕಾಂಗ್ರೆಸ್‌ನೊಂದಿಗೆ ರಾಜಕೀಯ ಮೈತ್ರಿ ಮಾಡಿಕೊಳ್ಳುವುದನ್ನು ಸಿಪಿಐ (ಎಂ) ಬಯಸುವುದಿಲ್ಲ. ಹಾಗೆ ಮೈತ್ರಿ ಮಾಡಿಕೊಳ್ಳುವುದೆಂದರೆ ಸಿಪಿಐ (ಎಂ) ಪ್ರತಿನಿಧಿಸುವ ದುಡಿಯುವ ವರ್ಗದ ಹಿತಗಳೊಂದಿಗೆ ರಾಜಿ ಮಾಡಿಕೊಳ್ಳುವುದು ಎಂದು ಅರ್ಥವಾಗುತ್ತದೆ. ಹಾಗೂ ವರ್ಗ ಶಾಮೀಲು ಮಾಡಿಕೊಂಡಂತೆ ಆಗುತ್ತದೆ ಮತ್ತು ದುಡಿಯುವ ಜನರ ಹಿತಗಳನ್ನು ರಕ್ಷಿಸುವ ಕಮ್ಯೂನಿಸ್ಟ್ ಪಕ್ಷದ ಸ್ವತಂತ್ರ ಪಾತ್ರವನ್ನು ಮಸಕುಗೊಳಿಸಿದಂತಾಗುತ್ತದೆ.

ಆದರೂ, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಸಿಪಿಐ (ಎಂ) ರಾಜಕೀಯ ವ್ಯತ್ಯಾಸವನ್ನು ಗುರುತಿಸುತ್ತದೆ. ಬಿಜೆಪಿಯು ಆರ್‌ಎಸ್‌ಎಸ್‌ನಿಂದ ನಿಯಂತ್ರಿತವಾಗಿದ್ದು ಅದು ಹಿಂದುತ್ವ ಸಿದ್ಧಾಂತದ ಮೇಲೆ ನಿಂತಿದೆ. ಕಾಂಗ್ರೆಸ್ ಒಂದು ಜಾತ್ಯತೀತ ಪಕ್ಷ. ಆದರೆ ಅದರ ಬಂಡವಾಳಶಾಹಿ ಗುಣ ಅದು ಕೋಮುವಾದಕ್ಕೆ ಸಂಬಂಧಿಸಿದಂತೆ ರಾಜಿ ಹಾಗೂ ಚಂಚಲ ಧೋರಣೆಯನ್ನು ತಳೆಯುವಂತೆ ಮಾಡುತ್ತದೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿರುವುದರಿಂದ ಬಿಜೆಪಿಯನ್ನು ಸೋಲಿಸುವುದು ಮತ್ತು ಕೋಮುವಾದಿ ಶಕ್ತಿಗಳನ್ನು ಪ್ರತ್ಯೇಕಗೊಳಿಸುವುದು ಸಿಪಿಐ (ಎಂ)ನ ಮುಖ್ಯ ಗುರಿಯಾಗಿದೆ.

ಕೋಮುವಾದದ, ಅದರಲ್ಲೂ ಮುಖ್ಯವಾಗಿ ಹಿಂದುತ್ವ ಬಗೆಯ ಕೋಮುವಾದದ ತಲೆಯೆತ್ತಿರುವುದನ್ನು ಶೂನ್ಯದಲ್ಲಿ ಪರಿಭಾವಿಸಲಾಗದು. 1990ರ ದಶಕದ ತಿರುವಿನಲ್ಲಿ ಅದರ ಗಣನೀಯ ಬೆಳವಣಿಗೆ ಆರಂಭವಾಯಿತು. ಇದು ನಿಖರವಾಗಿ, ಆಳುವ ವರ್ಗಗಳು ಉದಾರೀಕರಣಕ್ಕೆ ಅಡಿಯಿಟ್ಟ ಮತ್ತು ನವ-ಉದಾರವಾದಿ ನೀತಿಗಳನ್ನು ಅಳವಡಿಸಿಕೊಂಡ ಕಾಲಾವಧಿಯೇ ಆಗಿದೆ. ಈ ರೀತಿಯಾಗಿ, ನವ-ಉದಾರವಾದಿ ಅಜೆಂಡಾವನ್ನು ಮುಂದಕ್ಕೊಯ್ಯಲು ಆಳುವ ವರ್ಗಗಳು ಕೋಮುವಾದವನ್ನು ಒಂದು ಊರುಗೋಲನ್ನಾಗಿ ಬಳಸಿಕೊಂಡವು. ಅತ್ತ ನವ-ಉದಾರವಾದಿ ಮುಕ್ತ ಮಾರುಕಟ್ಟೆ ಬಂಡವಾಳ ಕೋಮುವಾದ ಮತ್ತು ಇತರೆ ವಿಭಜನಕಾರಿ ಶಕ್ತಿಗಳ ಬೆಳವಣಿಗೆಯನ್ನು ಸ್ಫುರಿಸಿದೆ.

ಮೋದಿ ಸರಕಾರ ಮೂಡಿ ಬಂದದ್ದು ಕೋಮುವಾದಿ ಅಜೆಂಡಾದ ಅಧಿಕೃತ ಪ್ರಾಯೋಜಕತ್ವದೊಂದಿಗೆ ನವ-ಉದಾರವಾದಿ ನೀತಿಗಳೊಂದು ಹೆಚ್ಚು ಉಗ್ರವಾದ ಅನುಸರಣೆಯನ್ನು ಪ್ರತಿನಿಧಿಸುತ್ತದೆ. ಈ ಎರಡು ಶಕ್ತಿಗಳೇ ನಮ್ಮ ದೇಶದಲ್ಲಿ ಬಲಪಂಥೀಯ ಆಕ್ರಮಣವನ್ನು ಅನಾವರಣ ಗೊಳ್ಳುವುದಕ್ಕೆ ತುಪ್ಪ ಸುರಿದಿವೆ.



ಕೋಮುವಾದದ ವಿರುದ್ಧದ ಸೆಣಸಾಟದಲ್ಲಿ ವಿಶಾಲ ರೀತಿಯಲ್ಲಿ ಜನರನ್ನು ಅಣಿನೆರೆಯಿಸಬೇಕು ಹಾಗೂ ಸಂಯುಕ್ತ ವೇದಿಕೆ ರೂಪು ಗೊಳ್ಳಬೇಕು-ಅದರಲ್ಲಿ ಎಲ್ಲಾ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಯಿಸಬೇಕು. ಎಲ್ಲಾ ಪಕ್ಷಗಳ ಜಾತ್ಯತೀತ ಶಕ್ತಿಗಳು ಕೋಮುವಾದದ ವಿರುದ್ಧದ ಈ ವಿಶಾಲ ವೇದಿಕೆಯ ಭಾಗವಾಗಬಹುದು. ಆದರೆ ಇದು ಎಡ ಮತ್ತು ಕಾಂಗ್ರೆಸ್ ನಡುವಣ ಒಂದು ರಾಜಕೀಯ ಮೈತ್ರಿಯಾಗಿ ಪರಿವರ್ತನೆ ಆಗಲಾರದು.

ನವ-ಉದಾರೀಕರಣ ನೀತಿಗಳ ವಿರುದ್ಧದ ಹೋರಾಟವನ್ನು ಹಿಂದುತ್ವ ಮತ್ತು ಕೋಮುವಾದದ ಇತರ ಸ್ವರೂಪಗಳ ವಿರುದ್ಧದ ಹೋರಾಟದೊಂದಿಗೆ ಏಕಕಾಲದಲ್ಲಿ ನಡೆಸಬೇಕು ಎಂಬುದು ಸಿಪಿಐ (ಎಂ)ನ ಸ್ಪಷ್ಟ ತಿಳಿವಳಿಕೆಯಾಗಿದೆ. ಈ ಹೋರಾಟಗಳನ್ನು ಏಕೀಭವಿಸಿದರೆ ಮಾತ್ರವೇ ಜನರಿಂದ ಬಿಜೆಪಿಯನ್ನು ಪ್ರತ್ಯೇಕಿಸಬಹುದು ಮತ್ತು ಸೋಲಿಸಬಹುದು. ಆಳುವ ವರ್ಗಗಳ ಪಕ್ಷವಾಗಿರುವುದರಿಂದ ಮೋದಿ ಸರಕಾರದ ಆರ್ಥಿಕ ನೀತಿಗಳು ಜನರ ಜೀವನೋಪಾಯ ಮತ್ತು ಹಕ್ಕುಗಳ ಮೇಲೆ ಆಕ್ರಮಣ ಮಾಡುತ್ತಿವೆ. ಈ ದಾಳಿಗಳ ವಿರುದ್ಧ ದೃಢವಾದ ಹೋರಾಟಗಳನ್ನು ನಡೆಸುವುದರಿಂದ ಬಿಜೆಪಿ - ಆರ್‌ಎಸ್‌ಎಸ್ ಕೂಟದ ಛಿದ್ರಕಾರಿ ಕೋಮುವಾದಿ ಅಜೆಂಡಾದ ವಿರುದ್ಧವೂ ಜನರನ್ನು ಅಣಿನೆರೆಯಿಸಬಹುದಾಗಿದೆ.

ಕಾಂಗ್ರೆಸ್‌ನೊಂದಿಗೆ ಮೈತ್ರಿಮಾಡಿಕೊಂಡರೆ ಎಡ ಪಕ್ಷಗಳು ಈ ಕಾರ್ಯಭಾರವನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲ. ಯಾಕೆಂದರೆ ಕಾಂಗ್ರೆಸ್ ಪಕ್ಷವು ಈ ನವ-ಉದಾರವಾದಿ ನೀತಿಗಳ ಪ್ರತಿಪಾದಕನಾಗಿದ್ದು ಅವನ್ನು ಆರಂಭಿಸಿದ್ದು ಈ ಪಕ್ಷವೇ ಆಗಿದೆ. ಜನರ ಜೀವನೋಪಾಯ ಮತ್ತು ಆರ್ಥಿಕ ಒಳಿತನ್ನು ಬಾಧಿಸುವ ಎಲ್ಲಾ ಪ್ರಮುಖ ಪ್ರಶ್ನೆಗಳಲ್ಲಿ ಬಿಜೆಪಿ ಸರಕಾರದ ನೀತಿಗಳು ಕೂಡ ಹಿಂದಿನ ಕಾಂಗ್ರೆಸ್ ಸರಕಾರ ಅನುಸರಿಸಿದ ನೀತಿಗಳಂತೆಯೇ ಇವೆ. ಆರ್ಥಿಕತೆಯ ವಿವಿಧ ರಂಗಗಳಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ), ಖಾಸಗೀಕರಣ, ದೊಡ್ಡ ಉದ್ಯಮಿಗಳಿಗೆ ವಿನಾಯಿತಿಗಳು, ಕಾರ್ಪೊರೇಟ್ ಮತ್ತು ಗ್ರಾಮೀಣ ಸಿರಿವಂತರಿಗೆ ಅನುಕೂಲವಾದ ಕೃಷಿ ನೀತಿಗಳು ಮತ್ತು ಅಮೆರಿಕದೊಂದಿಗೆ ನಿಕಟವಾದ ಮಿಲಿಟರಿ ಹಾಗೂ ವ್ಯೂಹಾತ್ಮಕ ಸಂಬಂಧಗಳನ್ನು ಬೆಸೆಯುವುದು - ಇವೆಲ್ಲವೂ ಬಿಜೆಪಿ ಕೈಗೆತ್ತಿಕೊಳ್ಳುವ ಮುನ್ನ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಅನುಸರಿಸಿದ ನೀತಿಗಳೇ ಆಗಿವೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ ಭ್ರಷ್ಟ ದುರಾಡಳಿತ ಮತ್ತು ನವ-ಉದಾರವಾದಿ ನೀತಿಗಳು ವ್ಯಾಪಕ ಅಸಂತೃಪ್ತಿಯನ್ನು ಹುಟ್ಟುಹಾಕಿದವು ಮತ್ತು ಬಿಜೆಪಿ ಹಾಗೂ ಕೋಮುವಾದಿ ಶಕ್ತಿಗಳು ಲೋಕಸಭೆ ಚುನಾವಣೆಯಲ್ಲಿ ಅದರ ಲಾಭವನ್ನು ಪಡೆಯಲು ಅವಕಾಶ ನೀಡಿದವು ಎನ್ನುವುದನ್ನು ಮರೆಯಬಾರದು. ಅದೇ ರೀತಿ ಅಸ್ಸಾಮ್‌ನಂಥ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ದಾಖಲೆಯ ದುರಾಡಳಿತ ಮತ್ತು ಭ್ರಷ್ಟಾಚಾರ ಅಲ್ಲಿನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತದರ ಮಿತ್ರ ಪಕ್ಷಗಳು ಗೆಲ್ಲಲು ನೆರವಾದವು.

ಮೋದಿ ಸರಕಾರದ ಆರ್ಥಿಕ ನೀತಿಗಳು ಮತ್ತು ಆರ್‌ಎಸ್‌ಎಸ್/ಬಿಜೆಪಿ ಕೋಮುವಾದಿ ಕಾರ್ಯಸೂಚಿ ವಿರುದ್ಧ ಪ್ರಬಲವಾದ ಆಂದೋಲನವನ್ನು ರೂಪಿಸುವ ಮೂಲಕವಷ್ಟೇ ಒಂದು ಎಡ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಲು ಸಾಧ್ಯ. ಕಾಂಗ್ರೆಸ್‌ನ ಮೂಲ ನೀತಿಗಳನ್ನು ಪರಿಗಣಿಸಿದಾಗ ಆ ಪಕ್ಷ ಇಂಥದ್ದೊಂದು ಮೈತ್ರಿಕೂಟದ ಭಾಗವಾಗಿರಲು ಸಾಧ್ಯವಿಲ್ಲ.

ಎಡ ಮತ್ತು ಕಾಂಗ್ರೆಸ್‌ನ ಮೈತ್ರಿಯನ್ನು ಪ್ರತಿಪಾದಿಸುವವರು ಬಲಪಂಥೀಯ ದಾಳಿಯ ವಿರುದ್ಧಥ ಹೋರಾಟವನ್ನು ಕೇವಲ ಸಂಸದೀಯ-ಚುನಾವಣಾ ಚೌಕಟ್ಟಿಗಷ್ಟೆ ಸೀಮಿತಗೊಳಿಸಿ ನೋಡುತ್ತಾರೆ. ಬಲಪಂಥೀಯ ಕೋಮುವಾದದ ವಿರುದ್ಧದ ಹೋರಾಟವನ್ನು ಅವರು ಕೇವಲ ಚುನಾವಣಾ ಹೋರಾಟಗಳಿಗೆ ಇಳಿಸುತ್ತಾರೆ. ಬಲಪಂಥೀಯ ಶಕ್ತಿಗಳ ವಿರುದ್ಧ ರಾಜಕೀಯ ಮತ್ತು ಸೈದ್ಧಾಂತಿಕ ಹೋರಾಟಗಳನ್ನು ನಡೆಸುವುದು ಮಹತ್ವದ್ದಾಗಿದೆ. ಈ ಹೋರಾಟವನ್ನು ನವ-ಉದಾರವಾದಿ ನೀತಿಗಳ ವಿರುದ್ಧದ ಹೋರಾಟಗಳಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಎಡಪಕ್ಷಗಳು ಈ ಹೋರಾಟದ ಬಗ್ಗೆ ಯಾವುದೇ ಪಂಥವಾದಿ ಧೋರಣೆಯನ್ನು ಹೊಂದಿಲ್ಲ. ನವ-ಉದಾರವಾದಿ ನೀತಿಗಳು ಮತ್ತು ಕೋಮುವಾದದ ವಿರುದ್ಧದ ಸಂಘರ್ಷದಲ್ಲಿ, ಜನತೆಯ ಸಾಧ್ಯವಾದಷ್ಟೂ ವಿಶಾಲ ಚಳವಳಿಗಳು ಮತ್ತು ಹೋರಾಟಗಳನ್ನು ರೂಪಿಸಲು ಸಿಪಿಐ (ಎಂ) ಮತ್ತು ಎಡ ಪಕ್ಷಗಳು ಶ್ರಮಿಸಬೇಕು.

ಕೋಮುವಾದದ ವಿರುದ್ಧದ ಸೆಣಸಾಟದಲ್ಲಿ ವಿಶಾಲ ರೀತಿಯಲ್ಲಿ ಜನರನ್ನು ಅಣಿನೆರೆಯಿಸಬೇಕು ಹಾಗೂ ಸಂಯುಕ್ತ ವೇದಿಕೆ ರೂಪುಗೊಳ್ಳಬೇಕು- ಅದರಲ್ಲಿ ಎಲ್ಲಾ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಯಿಸಬೇಕು. ಎಲ್ಲಾ ಪಕ್ಷಗಳ ಜಾತ್ಯತೀತ ಶಕ್ತಿಗಳು ಕೋಮುವಾದದ ವಿರುದ್ಧದ ಈ ವಿಶಾಲ ವೇದಿಕೆಯ ಭಾಗವಾಗಬಹುದು. ಆದರೆ ಇದು ಎಡ ಮತ್ತು ಕಾಂಗ್ರೆಸ್ ನಡುವಣ ಒಂದು ರಾಜಕೀಯ ಮೈತ್ರಿಯಾಗಿ ಪರಿವರ್ತನೆ ಆಗಲಾರದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಬಿಜೆಪಿಯನ್ನು ಜನರಿಂದ ಪ್ರತ್ಯೇಕಿಸುವುದು ಮತ್ತು ಅದನ್ನು ಸೋಲಿಸುವುದನ್ನು ಪ್ರಸಕ್ತ ಕಾಲಘಟ್ಟದಲ್ಲಿ ತನ್ನ ಪ್ರಧಾನ ಕಾರ್ಯಭಾರ ಎಂದು ಸಿಪಿಐ (ಎಂ) ಪರಿಗಣಿಸುತ್ತದೆ. ಆದರೆ ಕಾಂಗ್ರೆಸ್‌ನೊಂದಿಗೆ ಸೇರಿಕೊಂಡು ಅದನ್ನು ಸಾಧಿಸಲು ಆಗುವುದಿಲ್ಲ. ವಿಮರ್ಶಕರು ವಾದಿಸಿರುವಂತೆ ಇದು ಸಮಾನ ಅಂತರ ಕಾಯ್ದುಕೊಳ್ಳುವ ಒಂದು ಧೋರಣೆಯಲ್ಲ.

(ಮುಂದುವರಿಯುವುದು)

ಅನು:ವಿಶ್ವ




# ಹಾಸನ : ಅರ್ಥಪೂರ್ಣ 125ನೇ ಅಂಬೇಡ್ಕರ್ ದಿನಾಚರಣೆ

**ಡಾ. ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವರ್ಷಾಚರಣೆ ಪ್ರಯುಕ್ತ ಅಸ್ಪೃಶ್ಯತಾ ಆಚರಣೆ, ಜಾತಿ ತಾರತಮ್ಮ ತೊಡೆದು ಹಾಕಲು ಹಾಗೂ ದಲಿತರ ಸಂವಿಧಾನ ಬದ್ಧ ಹಕ್ಕುಗಳ ಕುರಿತಂತೆ, ರಾಷ್ಟ್ರಮಟ್ಟದ ವಿಚಾರ ಸಂಕಿರಣ ಮತ್ತು ರಾಷ್ಟ್ರ ಮಟ್ಟದ ಶಾಲೆಯನ್ನು ಕರ್ನಾಟಕ ರಾಜ್ಯದ ದಲಿತ ಹಕ್ಕುಗಳ ಸಮಿತಿ(ಡಿಹೆಚ್‌ಎಸ್) ಹಾಗೂ 'ದಲಿತ ಶೋಷಣ್ ಮುಕ್ತಿ ಮಂಚ್(ಡಿಎಸ್‌ಎಂಎಂ), ನವದೆಹಲಿ ಆಶ್ರಯದಲ್ಲಿ 2016ರ ಜುಲೈ 23 ರಿಂದ 25, ರವರೆಗೆ ಮೂರು ದಿನಗಳ ಕಾಲ ಹಾಸನ ನಗರದ ಡಾ॥ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು.**

**ವರದಿ: ಎನ್. ನಾಗರಾಜ**

### ಅಧ್ಯಯನ ಶಾಲೆ ಉದ್ಘಾಟನೆ

## 'ಒಂದೆಡೆ ದಲಿತರ ಮೇಲೆ ಗೋರಕ್ಷಣೆ ದಾಳಿ, ಇನ್ನೊಂದೆಡೆ ಅಂಬೇಡ್ಕರ್ ಜಪ': ರಾಘವುಲು

ಮೊದಲನೆ ದಿನ ಜುಲೈ 23ರಂದು 'ದಲಿತ್ ಶೋಷಣ್ ಮುಕ್ತಿ ಮಂಚ್'ನ ಅಖಿಲ ಭಾರತ ಮುಖಂಡರಾದ ಶ್ರೀಯುತ ಬಿ.ವಿ.ರಾಘವಲು ಅಧ್ಯಯನ ಶಾಲೆಯನ್ನು ಉದ್ಘಾಟಿಸಿ ಮಾತನಾಡುತ್ತಾ "ಇಡೀ ದೇಶದಲ್ಲಿ ಕಳೆದ ಒಂದು ವರ್ಷದಿಂದ 'ಸಂವಿಧಾನ ಶಿಲ್ಪಿ' ಡಾ.ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವರ್ಷಾಚಾರಣೆಯನ್ನು ಎಲ್ಲಾ ರಾಜಕೀಯ ಪಕ್ಷಗಳು ಅವರವರ ಭಾವಕ್ಕೆ ಅನುಗುಣವಾಗಿ, ಆಚರಿಸಿಕೊಂಡು ಬರುತ್ತಿದ್ದಾರೆ, ಹಾಗೆಯೇ ಇಷ್ಟು ವರ್ಷಗಳ ಕಾಲ ಸುಮ್ಮನೆ ಇದ್ದ ಬಿಜೆಪಿ ಹಾಗೂ ಸಂಘ ಪರಿವಾರದವರು ಕೂಡ ಆಚರಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಮನುವಾದಿಗಳು ಕೂಡ ಅಂಬೇಡ್ಕರ್ ಕುರಿತು ಗುಣಗಾನ ಮಾಡುತ್ತಿದ್ದಾರೆ. ಎಲ್ಲಾ ಕಡೆಗಳಲ್ಲಿ ಅಂಬೇಡ್ಕರ್‌ರವರ ಪ್ರತಿಮೆಗಳನ್ನೂ ನಿರ್ಮಿಸಲಾಗುತ್ತಿದೆ. ಇವರ ಬೂಟಾಟಿಕೆ ಕೊಳಕು ಮನಸ್ಸಿನ ಜಾತಿವಾದಿಗಳ ಈ ದೊಂಬರಾಟ ದಲಿತ ಸಮುದಾಯದವರ 'ಓಟ್ ಬ್ಯಾಂಕ್'ಗಾಗಿ ಎಂಬ ವಾಸ್ತವವನ್ನು ಬಯಲಿಗೆಳೆಯಬೇಕಾಗಿದೆ. ಎಂದು ರಾಘವಲುರವರು ಸಂಘಪರಿವಾರ ಹಾಗೂ ಬಿಜೆಪಿಯ ಬಣ್ಣವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

"ಭಾರತ್ ಮಾತಾ ಕಿ ಜೈ" ಎಂದು ಘೋಷಣೆ ಕೂಗದವರು ದೇಶಪ್ರೇಮಿಗಳಲ್ಲ; ಎನ್ನುವ ಇವರು "ಭಾರತ ಪಿತಾಕಿ ಜೈ" ಎಂದು ಘೋಷಣೆ ಕೊಟ್ಟರೆ ಯಾವ ಪ್ರಮಾದವಾಗುತ್ತದೆ ಎಂದು, ಬಿಜೆಪಿ ಮತ್ತು ಸಂಘ ಪರಿವಾರದವರನ್ನು ಪ್ರಶ್ನಿಸಿದರು.

ಇತ್ತಿಚಿಗೆ ಅಂದರೆ ಕಳೆದ ನವೆಂಬರ್ 26 ಮತ್ತು 27, 2015ರಂದು ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ 'ಎರಡು ದಿನಗಳ ಕಾಲ ನಡೆಸಿದ ಪಾರ್ಲಿಮೆಂಟ್ ಅಧಿವೇಶನದಲ್ಲಿ 'ಅಂಬೇಡ್ಕರ್' ಕುರಿತಂತೆ ಚರ್ಚಿಸಲು ಸೇರಿತ್ತು. ಆದರೆ, ದಲಿತರ ಸ್ಥಿತಿಗತಿಗಳನ್ನು ಚರ್ಚಿಸುವ ಬದಲು, 'ತನ್ನ ಡೊಂಗಿ ಜಾತ್ಯಾತೀತೆಯ' ಕುರಿತಂತೆ ಎರಡು ದಿನಗಳನ್ನೂ ವ್ಯರ್ಥಮಾಡಿತು. ಪ್ರಧಾನಿ ನರೇಂದ್ರಮೋದಿ

**ಪುಟ 11 ಕ್ಕೆ**

## ಸಿಗರನಹಳ್ಳಿಗೆ ಸೀತಾರಾಂ ಯೆಚೂರಿ ಬೇಟಿ



ಈ ಮಧ್ಯ ಹಾಸನಕ್ಕೆ ಹೋಗುವ ಹಾದಿಯಲ್ಲಿ; ಹೊಳೆನರಸೀಪುರ ತಾಲ್ಲೂಕ್‌ನ ಸಿಗರನಹಳ್ಳಿಗೆ ಕಾ. ಯೆಚೂರಿಯವರು ಬೇಟಿ-ಕೊಟ್ಟರು. ಈ ಹಳ್ಳಿಯ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ, ಹಾಸನ ಲೋಕಸಭಾ ಕ್ಷೇತ್ರದ ವ್ಯಾಪ್ತಿಯೊಳಗಿದೆ, ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿದೆ. ಈ ಕ್ಷೇತ್ರವನ್ನು ದೇವೆಗೌಡರ ಮಗ ಶ್ರೀ ರೇವಣ್ಣನವರು ಪ್ರತಿನಿಧಿಸುತ್ತಿದ್ದಾರೆ. ಈ ಗ್ರಾಮದೊಳಗೆ ಇರುವ ದೇವಾಲಯೊಂದರಲ್ಲಿ ದಲಿತರಿಗೆ ಪ್ರವೇಶವನ್ನು ನಿಷೇದಿಸಲಾಗಿತ್ತು. ಅಲ್ಲಿ ಒಮ್ಮೆ ಒಬ್ಬ ದಲಿತ ಮಹಿಳೆ ದೇವರಿಗೆ ಅರ್ಚನೆ ಸಲ್ಲಿಸಲು, ತನ್ನ ಸಹೋದ್ಯೋಗಿಗಳೊಂದಿಗೆ ದೇವಸ್ಥಾನದ ಒಳಗೆ ಬಂದಿದ್ದರು. ಈ ಮಹಿಳೆಯರು ಸ್ತ್ರೀಶಕ್ತಿ ಗುಂಪಿಗೆ ಸೇರಿದವರು. ಅರ್ಚನೆ ಸಲ್ಲಿಸಲು ಬಂದಿದ್ದ ದಲಿತ ಮಹಿಳೆಯನ್ನೂ, ಅಸ್ಪೃಶ್ಯಳೆಂದು ಅವಮಾನಿಸಿ, ದೇವಸ್ಥಾನದಿಂದ ಹೊರಗೆ ದಬ್ಬಿದ್ದರು. ಇದನ್ನು ಪ್ರತಿಭಟಿಸಿ, ಊರಿನ ದಲಿತರು ಹಾಸನದ ದಲಿತ ಹಕ್ಕುಗಳ ಸಮಿತಿ, ಹಾಗೂ ಸಿಪಿಐ(ಎಂ) ಕಾರ್ಯಕರ್ತರೊಡನೆ ಹೋರಾಟ ನಡೆಸಿದ್ದರು. ಈ ಕಾರಣದಿಂದಾಗಿ ಊರಿನಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿತ್ತು. ಆ ನಂತರ ದಲಿತರು ಈ ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟ ಮುಂದುವರೆಸಿದರು, ಜಿಲ್ಲಾ ಆಡಳಿತ ಮಂಡಳಿ ಮಧ್ಯ ಪ್ರವೇಶಿಸಿ, ವಿಚಾರಣೆ ನಡೆಸಿದ ನಂತರ ದಲಿತರಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ಕಲ್ಪಿಸಿಕೊಟ್ಟರು. ಇದನ್ನೂ ಸಹಿಸಲಾಗದ ಮೇಲು ಜಾತಿಯ ಸವರ್ಣಿಯರು, ದೇವಸ್ಥಾನಕ್ಕೆ ಬೀಗ ಹಾಕಿದ್ದರು, ಊರಿನ ವಾತಾವರಣ ಮತ್ತಷ್ಟು ಪ್ರಕ್ಷುಬ್ಧತೆಗೆ ಕಾರಣವಾಗಿತ್ತು.

ಆ ನಂತರ, ಊರಿನ ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನವನ್ನೂ ಮತ್ತೆ ದಲಿತರಿಗೆ ತೆರೆಯಲಾಗಿತ್ತು. ಅಂದಿನಿಂದ, ದಲಿತರು ಆ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುತ್ತಿದ್ದಾರೆ. ಇದು ದಲಿತರು ತಮ್ಮ ಹಕ್ಕುಗಳಿಗಾಗಿ ನಡೆಸಿದ ಹೋರಾಟಕ್ಕೆ ಸಿಕ್ಕ ಪ್ರತಿಫಲವಾಗಿತ್ತು. ಇದನ್ನೂ ವಿರೋಧಿಸಿ ಮೇಲು ಜಾತಿಯ ಜನರು ಪ್ರತಿಭಟನೆ, ಧರಣಿಯಂತಹ ಹಲವು ಕಾರ್ಯಕ್ರಮಗಳನ್ನು ನಡೆಸಿದ್ದರು.

ಇದೀಗ ಹೊಸದೊಂದು, ಸಮಸ್ಯೆ ಸೃಷ್ಠಿಯಾಗಿತ್ತು. ದಲಿತರಿಗೆ ಪ್ರವೇಶ ಸಿಕ್ಕಿದ, ಈ ದೇವಸ್ತಾನಕ್ಕೆ ಮೇಲು ಜಾತಿಯವರು ಪ್ರವೇಶ ಮಾಡದೆ, ಬಹಿಷ್ಕಾರ

**ಪುಟ 11 ಕ್ಕೆ**

## "ದಲಿತರ ಸ್ಥಿತಿ ಗತಿ ಮತ್ತು ಸವಾಲುಗಳು" ವಿಚಾರ ಸಂಕಿರಣ

'ದಲಿತ್ ಶೋಷಣ್ ಮುಕ್ತಿ ಮಂಚ್' (ಡಿ.ಎಸ್.ಎಂ.ಎಂ.)ನ ಅಖಿಲ ಭಾರತ ಅಧ್ಯಯನ ಶಾಲೆ"ಯ ಭಾಗವಾಗಿ, ಹಾಸನ ನಗರದಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಿದ್ದ 'ಸ್ವಾತಂತ್ರ್ಯೋತ್ತರ ಭಾರತದಲ್ಲಿ ದಲಿತರ ಸ್ಥಿತಿ ಗತಿ ಮತ್ತು ಸವಾಲುಗಳು" ಕುರಿತ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡಿದ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯಸಭಾ ಸದಸ್ಯರಾದ ಸೀತಾರಾಂ ಯೆಚೂರಿಯವರು ಗೋವಿನ ರಕ್ಷಣೆ ಹೆಸರಿನಲ್ಲಿ ದಲಿತರ ಮೇಲೆ ಇಡೀ ದೇಶದಾದ್ಯಂತ ದೌರ್ಜನ್ಯಗಳು ಹೆಚ್ಚಾಗಿರುವುದರ ವಿರುದ್ಧ ಹಾಗೂ ಇದಕ್ಕೆ ಪೂರಕವಾಗಿ ಬೆಂಬಲ ಕೊಡುತ್ತಿರುವ ಸಂಘಪರಿವಾರ ಮತ್ತು ಕೇಂದ್ರದ ನರೇಂದ್ರ ಮೋದಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.



ನರೇಂದ್ರಮೋದಿ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಪಡೆದ ಈ ಎರಡು ವರ್ಷಗಳಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಸಂಖ್ಯೆ ಅಧಿಕವಾಗಿರುವುದನ್ನು ರಾಷ್ಟ್ರೀಯ ಅಪರಾಧ ವರದಿ ಬ್ಯೂರೋ (ಎನ್‌ಸಿಆರ್‌ಬಿ) ಯ ಅಧಿಕೃತ ಅಂಕಿ-ಅಂಶಗಳನ್ನು ವಿಚಾರ ಸಂಕಿರಣದಲ್ಲಿ ಭಾಗವಾಗಿದ್ದ ದೇಶದ ದೇಶದ ಮೂಲೆ-ಮೂಲೆಗಳಿಂದ ಆಗಮಿಸಿದ್ದ, ಪ್ರತಿನಿಧಿಗಳು ಹಾಗೂ ಹಾಸನದ ಸಾರ್ವಜನಿಕರಿಗೆ ತಿಳಿಸಿಕೊಟ್ಟರು. ಕಳೆದ ಎರಡು ವರ್ಷಗಳಲ್ಲಿ 1,27,341 ದೌರ್ಜನ್ಯ ಪ್ರಕರಣಗಳು ದಾಖಲಾಗಿರುವುದು. ಸ್ವತಂತ್ರ ಭಾರತದಲ್ಲಿ ಯಾವುದೇ ಸರ್ಕಾರದ ಆಡಳಿತದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳು ದಾಖಲಾಗಿರಲಿಲ್ಲ ಎಂದರು. ಇವುಗಳ ಪೈಕಿ ಕೇವಲ 5,100 ಪ್ರಕರಣಗಳು ಮಾತ್ರ ಶಿಕ್ಷೆಯಾಗಿವೆ ಅಂದರೆ ಶೇ.5 ಕ್ಕಿಂತ ಕಡಿಮೆ ಪ್ರಮಾಣದಲ್ಲಿದೆ. ಹಾಗೆಯೇ ವಿಚಾರಣೆ ನಡೆಯುತ್ತಿರುವ ಪ್ರಕರಣಗಳ ಸಂಖ್ಯೆಯು ತುಂಬ ಕಡಿಮೆ ಇದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸ್ವತಂತ್ರ ಭಾರತದಲ್ಲಿ ಎಲ್ಲರಿಗೂ ಶಿಕ್ಷಣ, ಉದ್ಯೋಗ, ಆರೋಗ್ಯ ನೀಡುವ ಸಂವಿಧಾನದ ಆಶಯಗಳನ್ನು ಮೋದಿ ಸರ್ಕಾರ ಮರೆತಿದೆ ಮಾತ್ರವಲ್ಲ ಕಡೆಗಣಿಸಿದೆ. 1000 ಕ್ಕೆ ಕೇವಲ 85 ದಲಿತ ಉದ್ಯೋಗಿಗಳಿದ್ದಾರೆ, ಒಟ್ಟಾರೆಯ ಉದ್ಯೋಗಗಳಲ್ಲಿ ಗ್ರಾಮೀಣ ದಲಿತರಿಗೆ ಶೇ. 3.96 ರಷ್ಟು ಮಾತ್ರ ಎಂಬ ವಾಸ್ತಾವಾಂಶದ ಅಧಿಕೃತ ಅಂಕಿ-ಅಂಶಗಳು ದಲಿತರ ಶೋಚನೀಯ ಸ್ಥಿತಿಯನ್ನು ತೋರಿಸುತ್ತದೆ. ಈ ಉದ್ಯೋಗಗಳು ಕೂಡ ಹೆಚ್ಚಿನವುಗಳು ಕೇವಲ ಕೆಳ ಹಂತದ ಅಥವಾ ಅರೆ ಖಾಯಂ, ಅಥವಾ ದಿನಗೂಲಿ ಸಫಾಯಿ ಕರ್ಮಚಾರಿ ಉದ್ಯೋಗಳಾಗಿವೆ ಎಂದರು.

ಇನ್ನು ಶಿಕ್ಷಣಕ್ಕೆ ಸಂಬಂಧಪಟ್ಟ ದಾಖಲೆಗಳು, ದಲಿತರಿಗೆ ಆಗಿರುವ ವಂಚನೆಯನ್ನು ಪ್ರತಿಬಿಂಬಿಸುತ್ತದೆ. 2014ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ಒಟ್ಟಾರೆ ಜನಸಂಖ್ಯೆಗೆ ದಲಿತರು ಶೇ. 12.5ರಷ್ಟು ವಿದ್ಯಾವಂತರು ಪ್ರೌಢಶಾಲೆ ಮುಗಿಸಿದ್ದಾರೆ. ಶೇ. 6.9 ರಷ್ಟು ಶಿಕ್ಷಕರಿದ್ದಾರೆ, ಪದವೀಧರರು ಕೇವಲ ಶೇ.2.9 ರಷ್ಟು ಮಾತ್ರ.

ಸ್ವಾತಂತ್ರ್ಯ ಬಂದ ನಂತರ ನಾವು ಕೊಟ್ಟ ಭರವಸೆಗಳು ಹುಸಿಗೊಂಡಿವೆ. ಬಡತನದ ರೇಖೆಯ ಕೆಳಗಿನವರ ಸಂಖ್ಯೆ ಅಖಿಲ ಭಾರತ ಮಟ್ಟದಲ್ಲಿ ಶೇ. 24ರಷ್ಟು ಇದ್ದರೆ, ದಲಿತರ ನಡುವೆ ಶೇ. 34ರಷ್ಟು ಬಡತನ-ಹಸಿವಿನಿಂದ ಬಳಲುತ್ತಿದ್ದಾರೆ, ಇದು ಸ್ವಾತಂತ್ರ್ಯೋತ್ತರ ಭಾರತದ ಚಿತ್ರಣವಾಗಿದೆ. ಇವೆಲ್ಲಾ ಸರ್ಕಾರದ ಅಧಿಕೃತ ಅಂಕಿ-ಅಂಶಗಳಾಗಿವೆ. ವಾಸ್ತವತೆ ಇದಕ್ಕಿಂತ ಬೀಕರವಾಗಿದೆ.

### 'ಗೋರಕ್ಷಣೆ', ದಲಿತರ ಮೇಲೆ ದಾಳಿ

ಪ್ರಧಾನಿ ಮೋದಿಯವರ ಈ ಎರಡು ವರ್ಷಗಳು ದಲಿತರ ಪಾಲಿಗೆ ಘೋರ ಪರಿಣಾಮ ಬೀರಿದೆ. ದೌರ್ಜನ್ಯಗಳು ಹೆಚ್ಚಾಗಿದೆ, ಜೊತೆಗೆ ಸಂವಿಧಾನದ ಹಕ್ಕುಗಳು ದಲಿತರಿಗೆ ತಲುಪಲಾಗದಂತ ಸ್ಥಿತಿ ನಿರ್ಮಾಣವಾಗಿದೆ.

ಬಿಜೆಪಿ ಪಕ್ಷವು ಆರ್.ಎಸ್.ಎಸ್. ಸಂಘಟನೆಯ ರಾಜಕೀಯ ಪಡೆಯಾಗಿದೆ. ಆರ್.ಎಸ್.ಎಸ್. ಸಿದ್ಧಾಂತವನ್ನ ಚಾಚು ತಪ್ಪದೆ ನೆರವೇರಿಸಬೇಕಾದ ಕರ್ತವ್ಯದಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ತೊಡಗಿರುವುದರಿಂದ, ಡಾ॥ಬಿ.ಆರ್.ಅಂಬೇಡ್ಕರ್ ರವರ ಸಂವಿಧಾನ ಆಶಯಗಳು ದಲಿತರಿಗೆ ತಲುಪುತ್ತಿಲ್ಲ. ಮೂಢನಂಬಿಕೆಯ ಹೆಸರಿನಲ್ಲಿ, ಗೋ ರಕ್ಷಣೆ ಹೆಸರಿನಲ್ಲಿ ದಲಿತರ ಮೇಲೆ, ಅಂದರೆ ಜೀವಂತ ಮಾನವರ ಮೇಲೆ ಆಕ್ರಮಣಗಳು ನಡೆಯುತ್ತಿವೆ.

ಇತ್ತೀಚಿಗೆ ಗುಜರಾತ್‌ನ ಉನಾ ಗ್ರಾಮದಲ್ಲಿ ದಲಿತರು ಹಸುವಿನ ಚರ್ಮವನ್ನು ತೆಗೆಯುತ್ತಿದ್ದಾಗ ಸಂಘಪರಿವಾರದವರು ಮಾನವರ ಮೇಲೆ ಅಂದರೆ ದಲಿತರ ಮೇಲೆ ದೌರ್ಜನ್ಯವೆಸಗಿದ್ದಾರೆ: ಆ ಹಸುವಿನ ಯಜಮಾನ 'ಅವರದ್ದೇನು ತಪ್ಪಿಲ್ಲ; ಆ ದನವನ್ನು ನಾನೇ ಅವರಿಗೆ ಕೊಟ್ಟದ್ದು' ಎಂದು ಪೊಲೀಸರಿಗೆ ದೂರು ಕೊಟ್ಟರೂ ಸಹ, ದಲಿತರನ್ನೂ ಬಂಧಿಸಿ ಅವರನ್ನು ಪೊಲೀಸರು ಥಳಿಸಿದ್ದಾರೆ, ಅದೇ ರೀತಿ ನಿಮ್ಮ ರಾಜ್ಯದ ಚಿಕ್ಕಮಗಳೂರಿನಲ್ಲಿಯೂ ಇಂತಹ ಮತ್ತೊಂದು ಘಟನೆ ನಡೆದಿರುವುದು ನನ್ನ ಗಮನಕ್ಕೆ ಬಂದಿದೆ ಎಂದು, ಆರ್.ಎಸ್.ಎಸ್.ನವರು ಹಸುವನ್ನು ದೇವತೆ ಎಂದು, ತಾಯಿಯೆಂದು ಜನರ ನಂಬಿಕೆಗಳನ್ನು ಅವರ ಸಿದ್ಧಾಂತದ ದಾಳವನ್ನಾಗಿ ಮಾಡಿಕೊಂಡು, ದಲಿತರ ಮೇಲೆ ಅಮಾನವೀಯವಾಗಿ ದೌರ್ಜನ್ಯ ವೆಸಗುತ್ತಿದ್ದಾರೆ ಎಂದು ಯೆಚೂರಿಯವರು ಆಕ್ರೋಶ ವ್ಯಕ್ತಪಡಿಸಿದರು.

**ಪುಟ 10 ಕ್ಕೆ**

## ದಲಿತರ ಸ್ಥಿತಿ ಗತಿ ಮತ್ತು ಸವಾಲುಗಳು....... ಪುಟ 9 ರಿಂದ

ಜನ್ಮ ಪುನರ್ ಜನ್ಮದ ಹೆಸರನ್ನೂ, ಮೂಢ ನಂಬಿಕೆಯನ್ನು ಬಳಸಿಕೊಂಡು ಸಮಾಜವನ್ನು ತಪ್ಪುದಾರಿಗೆ ಕೊಂಡೊಯ್ಯುತ್ತಿದ್ದಾರೆ, ಹಿಂದೂ ಸಮಾಜ ಚಾರ್ತುರ್ವರ್ಣಗಳ ಹಂತಗಳ ಮೇಲೆ ಆಧಾರಿತವಾಗಿದೆ, 5ನೇಯದು ಅಸ್ಪೃಶ್ಯತೆಯಾಗಿದೆ, ಹಿಂದಿನ ಜನ್ಮದಲ್ಲಿ ಅವರು ಮಾಡಿದ ಕರ್ಮದಿಂದಾಗಿ, ಅಸ್ಪೃಶ್ಯರಾಗಿ ಜನ್ಮವೆತ್ತಿದ್ದಾರೆ, ಮುಂದಿನ ಜನ್ಮದಲ್ಲಿ ಉತ್ತಮ ಜಾತಿಯಲ್ಲಿ ಜನ್ಮ ತಾಳಬೇಕೆಂದರೆ, ಗೋ ರಕ್ಷಣೆ ಮಾಡಬೇಕೆಂಬ ಕಂದಾಚಾರ ಹಾಗೂ ಅವರ ಸೈದ್ಧಾಂತಿಕತೆಯನ್ನೂ ದೊಡ್ಡ ಪ್ರಮಾಣದಲ್ಲಿ ಸಮಾಜದಲ್ಲಿ ಹರಿಯ ಬಿಡುತ್ತಿದ್ದಾರೆ ಎಂದು ಆರ್.ಎಸ್.ಎಸ್.ನವರ ತಾತ್ವಿಕತೆಯನ್ನು ಎಳೆ ಎಳೆಯಾಗಿ ಬಿಚ್ಚಿ ಹೇಳಿದರು.

ಪ್ರಧಾನಿ ಮೋದಿಯವರು ಸಫಾಯಿ ಕರ್ಮಚಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಇದೊಂದು ದೇವತಾ ಕಾರ್ಯವಾಗಿದೆ, ದಲಿತರು ತಲಾ–ತಲಾಂತರದಿಂದ ಚರಂಡಿ, ಒಳ ಚರಂಡಿ, ಕಸ ತೆಗೆಯುವುದು, ಮಲ ಹೊರುವುದು, ಒಟ್ಟಾರೆಯಾಗಿ ಸಮಾಜವನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ, ಅದು ಅವರು ಮಾಡುವ 'ದೇವರ ಕಾರ್ಯವಾಗಿದೆ, ಅದು ಅವರು ದೇವರಿಗೆ ಸಲ್ಲಿಸುವ ಕರ್ತವ್ಯದ ದುಡಿಮೆಯಾಗಿದೆ' ಎಂದು ಪ್ರತಿಪಾದಿಸಿಕೊಂಡಿರುವುದನ್ನೂ ಸೀತಾರಾಂ ಯೆಚೂರಿಯವರು ಕಠಿಣವಾಗಿ ಟೀಕಿಸಿದರು. ಇಂತಹ ಆರ್.ಎಸ್.ಎಸ್. ಸಿದ್ಧಾಂತಕ್ಕೆ ಪ್ರಧಾನಿಯವರು 'ಸಮಾಜದ ಸ್ವಚ್ಛತೆ' ಎಂದು ಸ್ಪಷ್ಟತೆ ನೀಡುತಿದ್ದಾರೆ.

**ದಲಿತ ಉಪಯೋಜನೆ**

ಡಾ. ಅಂಬೇಡ್ಕರ್ ರವರ 125ನೇ ಜನ್ಮ ವರ್ಷಾಚರಣೆ ಆಚರಿಸುತ್ತಿರುವ ಸರ್ಕಾರಗಳು, ದಲಿತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಯಾವುದೇ ಸೂಕ್ತಕ್ರಮ ಕೈಗೊಳ್ಳುವಲ್ಲಿ ವಿಫಲ ವಾಗಿವೆ, ಪ್ರಸ್ತುತವಿರುವ ಪರಿಶಿಷ್ಟ ಜಾತಿ ಉಪಯೋಜನೆಯ ಅಡಿಯಲ್ಲಿ ಹಂಚುವ ಹಣವನ್ನು ಕಡಿತಗೊಳಿಸದ್ದಾರೆ.

ಇನ್ನೂ ನಮ್ಮ ಸಾಮಾಜಿಕ ವಿಚಾರಗಳಲ್ಲಿ : ನಾವು ಎಷ್ಟೇ ವಿದ್ಯಾವಂತರಾಗಿದ್ದರೂ ಸಹ, ಉದಾಹಣೆಗೆ ಮದುವೆಯ ಸಂಬಂಧ ಹುಡುಕುವಾಗ, ಅಮೇರಿಕಾದಲ್ಲಿ ವಾಸ ಮಾಡುತ್ತಿರುವ, ಅನಿವಾಸಿ ಭಾರತೀಯ ವರನು ಕೂಡ, ಮೇಟ್ರೀಮೋನಿಯಲ್ ಮೂಲಕ ವಧು ಹುಡುಕುವಾಗ ಜಾತಿ, ಉಪ ಜಾತಿ, ಒಳ ಜಾತಿಗಳೆಂಬ ಕುರುಡು ಮೂಢನಂಬಿಕೆಗಳಿಗೆ ಕಟ್ಟು ಬಿದ್ದಿರುವುದನ್ನು ವಾಸ್ತವವಾಗಿ ನಾವು ಇಂದಿಗೂ ಕಾಣುತ್ತಿದ್ದೇವೆ. ಆದರೆ ಈ ಸಂಪ್ರದಾಯ ಮೀರಿ ಅಂತರ್ ಜಾತಿ ವಿವಾಹವಾದರೆ ಪಂಚಾಯತ್‌ಗಳ ಮೂಲಕವೇ ಮರ್ಯಾದೆ ಹತ್ಯೆಗೈಯುತ್ತವೆ. ಇಂತಹ ಸಾಮಾಜಿಕ ಸಮಸ್ಯೆಗಳು ಸ್ವತಂತ್ರ ಬಂದು 69 ವರ್ಷಗಳು ಕಳೆದರು ನಮ್ಮ ಸಮಾಜದಲ್ಲಿ ಬೇರು ಬಿಟ್ಟಿರುವುದನ್ನು ಕಾಣುತ್ತೇವೆ ಎಂದರು. ಆದ್ದರಿಮದ ಇಂತಹ ಸಾಮಾಜಿ–ಅನಿಷ್ಠತೆಗಳ ವಿರುದ್ಧ ಜಾತಿ ತಾರತಮ್ಯದ ವಿರುದ್ಧ ವಿಸ್ತಾರವಾದ ವೇದಿಕೆಯಡಿಯಲ್ಲಿ ಹೋರಾಟಬೇಕೆಂದರು.

ಅಂಬೇಡ್ಕರ್ ರವರ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ ದಲಿತರ ಸಬಲೀಕರಣದ ಬಗ್ಗೆ ಎಸ್.ಸಿ.ಎಸ್.ಪಿ. ಯೋಜನೆಯ ಅಡಿಯಲ್ಲಿ ಸೂಕ್ತ ಕ್ರಮಕೈಗೊಳ್ಳುವ ಬದಲು – ಇದು ಕೇಂದ್ರದ ಜವಾಬ್ಧಾರಿಯಲ್ಲ, ಇನ್ನು ಮುಂದೆ ರಾಜ್ಯಗಳೇ ಈ ಯೋಜನೆ ನಿರ್ವಹಿಸಬೇಕೆಂದು, 'ನೀತಿ' ಆಯೋಗದಲ್ಲಿ ತೀರ್ಮಾನ ಕೈಗೊಂಡಿದ್ದಾರೆ. 2014–15 ಮತ್ತು 2015–16ರ ಬಜೆಟ್‌ನಲ್ಲಿ ಶೇ.38 ರಷ್ಟು ಹಣವನ್ನು ಎಸ್.ಸಿ.ಎಸ್.ಪಿ. ಯೋಜನೆಯ ಅಡಿಯಲ್ಲಿ ಕಡಿತಗೊಳಿಸಲಾಗಿದೆ ಎಂದರು. ಯೋಜನಾ ಆಯೋಗವನ್ನೇ ರದ್ದುಗೊಳಿಸಲಾಗಿದೆ.

ಇನ್ನೂ ಕೇಂದ್ರ ಸರ್ಕಾರದ ಸ್ಟಾರ್ಟ್ ಆಪ್ ಮತ್ತು ಸ್ಟಾಂಡ್ ಅಪ್ ಇಂಡಿಯಾ ಕಾರ್ಯಕ್ರಮಗಳ ಮೂಲಕ ದಲಿತರಿಗೆ ಅನ್ಯಾಯವೆಸಗುವುದು ಪ್ರಾರಂಭವಾಗಿದೆ. ಈ ಯೋಜನೆಯ ಮೂಲಕ ದಲಿತರ ಸಬಲೀಕರಣ ಎನ್ನುವ ಕೇಂದ್ರ ಸರ್ಕಾರ ಇದಕ್ಕಾಗಿ ಕೇವಲ ರೂ. 102 ಕೋಟಿ ಎತ್ತಿಟ್ಟಿದೆ. ಆದರೆ ಇದುವರೆವಿಗೂ ಕೇವಲ ರೂ.0.01 ಕೋಟಿ ಮಾತ್ರ ಬಿಡುಗಡೆಗೊಳಿಸಿದೆ ಎಂದು ಪಾರ್ಲಿಮೆಂಟಿನ ಅಂಕಿ–ಅಂಶಗಳನ್ನೂ ತೆರೆದರು.

ಕಾಂ.ಸೀತಾರಾಂ ಯೆಚೂರಿಯವರು ಕೊನೆಯದಾಗಿ ದೇಶದಲ್ಲಿ ತುರ್ತಾಗಿ ಆಗಬೇಕಾಗಿರುವ ಕೆಲಸವಾದ, ಗರಿಷ್ಠ ಹಾಗೂ ವಿಶಾಲವಾದ ಐಕ್ಯತೆಯ ಬಗ್ಗೆ ಹೇಳಿದರು. 'ಸಮಾನತೆ'ಯ ಬಗ್ಗೆ ಮಾತನಾಡುವ, ಹೋರಾಡುತ್ತಿರುವ ಎಲ್ಲರೂ, ಒಂದಾಗಬೇಕು ಒಗ್ಗಟ್ಟು ಪ್ರದರ್ಶಿಸಬೇಕೆಂದರು.

**ನೀಲಿ ಬಾನಿನಲ್ಲಿ ಕೆಂಪು ಸೂರ್ಯ**

ನಮ್ಮ ದೇಶದಲ್ಲಿ ಈ ಜಾತಿ ಪದ್ಧತಿ ಮತ್ತು ಜಾರಿ ತಾರತಮ್ಯ ತೊಡೆದು ಹಾಕುವ ಬಹು ದೊಡ್ಡ ಚಳುವಳಿಗಳು ನಡೆದಿರುವ ಉದಾಹಣೆಗಳಿವೆ. ಮಹಾನ್ ವ್ಯಕ್ತಿಗಳಾದ, ಜ್ಯೋತಿಬಾ ಫುಲೆಯವರು ದಲಿತರಿಗೆ ಶಿಕ್ಷಣದಲ್ಲಿ ಮೀಸಲಾತಿ ಒದಗಿಸಬೇಕೆಂಬ ಬಹು ದೊಡ್ಡ ಚಳುವಳಿ ನಡೆಸಿದ್ದಾರೆ ಸಾಹು ಮಹಾರಾಜರೊಂದಿಗೆ ಹೋರಾಡಿದ್ದಾರೆ. ದಕ್ಷಿಣ ಭಾರತದಲ್ಲಿ ಪೆರಿಯಾರ್ ರಾಮಸ್ವಾಮಿ ಜಾತಿ ಪದ್ಧತಿ ವಿರುದ್ಧ ಯುದ್ಧವನ್ನೇ ಸಾರಿದ್ದರು. ಇಂದಿಗೂ ಬ್ರಾಹ್ಮಣವಾದ ವಿರುದ್ಧ ಪ್ರಭಾವ ತಮಿಳುನಾಡಿನಲ್ಲಿದೆ. ಶೇ. 70ರಷ್ಟು ಎಐಎಡಿಎಂಕೆ ಡಿಎಂಕೆ, ಮತ್ತು ಇತರ ದ್ರಾವಿಡ ಪಕ್ಷಗಳ ಜೊತೆಯಲ್ಲಿದ್ದಾರೆ.

ಇದಾದ ನಂತರ ಡಾ. ಅಂಬೇಡ್ಕರ್‌ರವರು ಅಸ್ಪೃಶ್ಯತಾ ಆಚರಣೆಗಳ ವಿರುದ್ಧ ಘೋರ ಸಮರ ಸಾರಿದವರು, ದಲಿತರಿಗೆ ಒಂದು ಶಕ್ತಿಯಾಗಿ ಪ್ರಭಾವಿತ ಕಾರ್ಯನಿರ್ವಹಿದ್ದಾರೆ.

ಮಹಾತ್ಮ ಗಾಂಧೀಜಿಯವರು ದಲಿತರನ್ನು ಹರಿಜನರೆಂದು ನಾಮಕರಣ ಮಾಡಿ, ದೇವರಿಗೆ ಹೋಲಿದ್ದಾರೆ, ಅಸ್ಪೃಶ್ಯತೆಯ ವಿರುದ್ಧ ಜಾಗೃತಿ ಮೂಡಿದ್ದಾರೆ.

ಇಷ್ಟೆಲ್ಲಾ ಬಾರೀ ಸಾಮಾಜಿಕ ಹೋರಾಟಗಳು ನಮ್ಮ ದೇಶದಲ್ಲಿ ನಡೆದಿದ್ದರೂ ಸಹ, ಇಂದಿಗೂ ಈ ಅಸ್ಪೃಶ್ಯತೆಯನ್ನು ಬೇರು ಸಮೇತ ನಿರ್ಮೂಲನೆ ಗೊಳಿಸಲು ಸಾಧ್ಯವಾಗಿಲ್ಲವೆಂದು ವಿಷಾದ ವ್ಯಕ್ತ ಪಡಿಸುತ್ತಾ, ದಲಿತರನ್ನು ಆರ್ಥಿಕವಾಗಿ–ಶೈಕ್ಷಣಿಕವಾಗಿ ಸಬಲೀಕರಣಗೊಳಿಸದಿದ್ದರೆ ಸಾಮಾಜಿಕ ದಮನಗಳನ್ನೂ ತಡೆ ಹಿಡಿಯಲು ಅಸಾಧ್ಯ, ಆದ್ದರಿಂದ ಈಗಿನ ಪ್ರಧಾನ ಪ್ರಶ್ನೆ 'ಭೂಮಿ ಹಂಚಿಕೆ'ಯು ಪ್ರಮುಖವಾಗಿ ಸುಧಾರಣೆ ಯಾಗಬೇಕಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲಾ ಒಂದಾಗಿ ಆಲೋಚನೆ ಮಾಡ ಬೇಕಾಗಿದೆ. ಕೇವಲ ಸಬಲೀಕರಣವಾಗಬೇಕೆಂಬ ಮನವಿ ಮಾಡಿಕೊಂಡರೆ ಸಾಲದು, ಬದಲಿಗೆ ದಲಿತರ ಸಬಲೀಕರಣಕ್ಕಾಗಿ ಒಗ್ಗಾಟ್ಟಾಗಿ ಹೋರಾಡಬೇಕಾಗಿದೆ ಎಂದು ಅವರು ಇತ್ತೀಚಿಗೆ ಮುಂಬಯಿ ನಗರದಲ್ಲಿ ನಡೆದ ಬೃಹತ್ ಮೆರವಣಿಗೆಯಲ್ಲಿ ಲಕ್ಷಾಂತರ ಕಾರ್ಯಕರ್ತರು ನೀಲಿ ಮತ್ತು ಕೆಂಪು–ಹಣೆ ಪಟ್ಟಿ ಕಟ್ಟಿಕೊಂಡಿದ್ದರು. ಆಕಾಶದಲ್ಲಿನ 'ಕಾಮನ ಬಿಲ್ಲು'ವಿನ ಮೇಲ್ಭಾಗದ ನೇರಳೆ ಹಾಗೂ ನೀಲಿ ಬಣ್ಣ ಕೆಳ ಭಾಗದಲ್ಲಿ ಕೆಂಪು ಬಣ್ಣ – ಕಾಮನ ಬಿಲ್ಲು' ಪ್ರಧಾನ ಬಣ್ಣಗಳಾಗಿವೆ.

ಹಾಗೆಯೇ; ಆಕಾಶದ ನೀಲಿ ಬಣ್ಣದೊಳಗಿನ ಕೆಂಪು ಸೂರ್ಯ' ಅಂದರೆ ನೀಲಿ ಬಾಲಿನಲ್ಲಿ ಕೆಂಪು ಸೂರ್ಯ' ಮಾತ್ರ ದಲಿತರ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನದ ನಿರ್ಮೂಲನೆ ಸಾಧ್ಯವೆಂಬ ವಾಸ್ತಾವಾಂಶವನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ಅದರ ಅರ್ಥ, ಜೈ ಭೀಮ್ –ನೀಲಿ, ಲಾಲ್ ಸಲಾಂ–ಕೆಂಪು ಇವೆರೆಡು ಮಿಶ್ರಿತ – ಇಂಕ್ವಿಲಾಬ್ ಜಿಂದಾಬಾಬ್ ಎಂದು ಸೀತಾರಾಂ ಹೇಳಿದಾಗ ನೆರೆದಿದ್ದ ಎಲ್ಲಾ ಸಭಿಕರು ಒಕ್ಕೊರಲಿನಿಂದ ಚಪ್ಪಾಳೆ ತಟ್ಟುವ ಮೂಲಕ ಸಹಮತ ವ್ಯಕ್ತಪಡಿಸಿದರು.

**'ದಲಿತ ಮಾನವ ಅಭಿವೃದ್ಧಿ' ಅತ್ಯಂತ ಕಡಿಮೆ**

ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಹಂಪಿ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ. ಚಂದ್ರಪೂಜಾರಿಯವರು, ತಾವೇ ಬರೆದಿದ್ದ ಪುಸ್ತಕ 'ದಲಿತ ಮಾನವ ಅಭಿವೃದ್ಧಿ' ಬಿಡುಗಡೆ ಮಾಡುತ್ತಾ ಸ್ವಾತಂತ್ರ್ಯ ಬಂದ ನಂತರ ದೇಶದಲ್ಲಿ ದಲಿತರ ಅಭಿವೃದ್ಧಿ ಆಗೆ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಸ್ವಲ್ಪ ಅಭಿವೃದ್ಧಿಯಾಗಿದೆ ನಿಜ, ಆದರೆ, ದಲಿತರು ಮತ್ತು ದಲಿತೇತರಿಗೆ ಹೋಲಿಸಿ ನೋಡಿದಾಗ 'ದಲಿತ ಮಾನವ ಅಭಿವೃದ್ಧಿ' ಬೇರೆ ಎಲ್ಲರಿಗಿಂತಲೂ ಕೆಳ ಹಂತದಲ್ಲಿದೆ.

ಕರ್ನಾಟಕದಲ್ಲಿ ಶೇ. 65 ರಷ್ಟು ದಲಿತರು ಅಕ್ಷರಸ್ತರಿದ್ದಾರೆ, ಶೇ. 17ರಷ್ಟು ದಲಿತರು ಸ್ವಲ್ಪ ಒಂದು ಅಥವಾ ಎರಡು ಎಕರೆ ಭೂಮಿ ಹೊಂದಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಶೇ. 1 ರಷ್ಟು ಶಿಕ್ಷಣವಿತ್ತು. ಉದ್ಯೋಗದಲ್ಲಿ ಶೇಕಡಾವಾರು ದಲಿತರ ಸಂಖ್ಯೆ ಕಡಿಮೆ ಇದೆ. ಅಸ್ಪೃಶ್ಯತೆ ಹಳ್ಳಿಗೆ ಸೀಮಿತವಾಗಿಲ್ಲ. ನಗರ ಪ್ರದೇಶಗಳಲ್ಲಿ ಉದ್ಯೋಗಸ್ತ ದಲಿತರಿಗೂ ವಾಸಿಸಲು ಮನೆ ಸಿಗುವುದಿಲ್ಲ. ಬ್ರಾಹ್ಮಣ, ಲಿಂಗಾಯತ, ಗೌಡರ ಹೆಸರಿನಲ್ಲಿನ ಹೋಟೆಲುಗಳಿವೆ, ಆದರೆ ದಲಿತರ ಹೆಸರಿನಲ್ಲಿ ಹೋಟೆಲ್‌ಗಳು ಇರುವುದಿಲ್ಲ. ಊರಿಗೆ ಒಂದು ಕೇರಿ ಇದ್ದ ಹಾಗೇ, ನಗರಗಳಲ್ಲಿ ಸ್ಲಂಗಳು, ಗುಡಿಸಲುಗಳು ಇವೆ. ಇವುಗಳಲ್ಲಿ ಶೇ. 80ರಷ್ಟು ದಲಿತರು ಇದ್ದಾರೆ ಎಂದರು. ದಲಿತರ ಭೂಮಿ ವಿಚಾರ ಹಾಗೂ ಅಸ್ಪೃಶ್ಯತೆಯ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು.

ನಂತರ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಸಂಗಾತಿ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಾ, ನರೇಂದ್ರ ಮೋದಿ ಪ್ರಧಾನಿಯಾದ ನಂತರ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಈ ಅವಧಿಯಲ್ಲಿ ದಲಿತರ ಮೇಲಿನ ಆಕ್ರಮಣಗಳು, ದೌರ್ಜನ್ಯಗಳು ಹೆಚ್ಚಾಗಿವೆ, ಚೆನ್ನೈನ ತರಬೇತಿ ಕೇಂದ್ರದ ಮೇಲೆ ನಡೆದ ದಾಳಿ, ಪುಣೆಯಲ್ಲಿ ಪಿಲ್ಮ್ ವಿಶ್ವವಿದ್ಯಾಲಯದ ಮೇಲಿನ ದಾಳಿ, ಹೈದ್ರಾಬಾದ್‌ನ ಕೇಂದ್ರ ವಿಶ್ವವಿದ್ಯಾಲಯದ ಮೇಲಿನ ದಾಳಿ ಹಾಗೂ ದಲಿತ ಸಂಶೋಧಕ ವಿದ್ಯಾರ್ಥಿ ರೋಹಿತ್ ವೆಮುಲಾರ ಆತ್ಮಹತ್ಯೆಗೆ ಮೂಲ ಕಾರಣಕರ್ತರು ನಡೆಸಿದ ಪಿತೂರಿ, ಪ್ರಸಿದ್ಧ ವಿಶ್ವವಿದ್ಯಾಲಯ ಜವಾಹರ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ಮೇಲಿನ ವಿದ್ಯಾರ್ಥಿ ನಾಯಕರ ಮೇಲಿನ ದಾಳಿಗಳು – ಇವೆಲ್ಲಾ ಎಬಿವಿಪಿ ಮೂಲಕ ಬಿಜೆಪಿ ಸಂಘಪರಿವಾರ ತನ್ನ ಸೈದ್ಧಾಂತಿಕ ಧಾಳಿಯನ್ನು ನಡೆಸಿದ್ದು, ಇದಕ್ಕೆ ಉದಾಹಣೆಗಳು ಎಂಬ ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯದಲ್ಲಿ ನಮ್ಮ ಪಕ್ಷ ಹಾಗೂ ದಲಿತ ಹಕ್ಕುಗಳ ಸಮಿತಿಯ ನೇತೃತ್ವದಲ್ಲಿ ನಡೆಸಿದ ಹಲವು ಪ್ರತಿಭಟನೆಗಳು, ಹೋರಾಟಗಳ ಬಗ್ಗೆ ತಿಳಿಸಿಕೊಟ್ಟರು, ಉಡುಪಿಯ ಕೃಷ್ಣ ದೇವಸ್ಥಾನದಲ್ಲಿ ನಡೆಯುವ ಪಂಕ್ತಿಬೇಧ, ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ನಡೆಯುವ ಮಡೆ ಮಡೆ ಸ್ನಾನದ ವಿರುದ್ಧ ನಾವು ನಡೆಸಿದ ಹೋರಾಟಗಳು ಕರ್ನಾಟಕದಲ್ಲಿ ಹೊಸ ತಿರುವು ಪಡೆಯಲು ಸಾಧ್ಯವಾಗಿದೆ.

ಮರಕುಂಬಿ ದಲಿತ ವೀರೇಶಪ್ಪನ ಕೊಲೆ ವಿರುದ್ಧ, ಚಾಮರಾಜನಗರದಲ್ಲಿ ನಡೆದ ಇಬ್ಬರು ದಲಿತರ ಕಗ್ಗೊಲೆ, ಹಾಸನ ಜಿಲ್ಲೆಯ ಸಿಗರನಹಳ್ಳಿಯಲ್ಲಿ ದಲಿತರಿಗೆ ದೇವಸ್ಥಾನ ಪ್ರವೇಶ ಇಂತಹ ಹತ್ತು ಹಲವಾರು ಹೋರಾಟಗಳನ್ನು ಕೈಗೆತ್ತುಕೊಂಡು ಹೋರಾಟ ನಡೆಸಿದ್ದನ್ನು ಶ್ರೀರಾಮರೆಡ್ಡಿ ತಿಳಿಸಿದರು.

ಕರ್ನಾಟಕದಲ್ಲಿ ದಲಿತ ಚಳುವಳಿ 70–80 ದಶಿಕದಲ್ಲಿ ಉತ್ತಮ ಆರಂಭವನ್ನೂ ಕಂಡಿತ್ತು. ಆದರೆ ಪ್ರಸ್ತುತ ಇದೀಗ ಏನಾಗಿದೆ? ದಲಿತ ಚಳುವಳಿ ಯಾವ ದಿಕ್ಕಿಗೆ ಸಾಗುತ್ತಿದೆ? ಅವರಿಗೆ ಸ್ಪಷ್ಟತೆ ಇಲ್ಲ.

ಪ್ರಮುಖವಾಗಿ, ಕರ್ನಾಟಕದಲ್ಲಿ ಶೇ.32 ರಷ್ಟು ದಲಿತರಿಗೆ ಒಂದು ಇಂಚು ಭೂಮಿ ಇಲ್ಲ, ಇದರ ಹಿನ್ನೆಲೆಯಲ್ಲಿ, ದೊಡ್ಡ ಚಳುವಳಿ ಕಟ್ಟಿ ಬೆಳೆಸಬೇಕಾಗಿದೆ, ಈ ನಿಟ್ಟಿನಲ್ಲಿ ಸಾಮಾಜಿಕ ಧಮನ ಪ್ರಶ್ನೆಗಳನ್ನೂ ಕೈಗೆತ್ತಿಕೊಂಡು ಹೋರಾಡಬೇಕಾದ ಅಗತ್ಯತೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ದಲಿತ್ ಶೋಷಣ್ ಮುಕ್ತಿ ಮಂಚ್‌ನ ಅಖಿಲ ಭಾರತ ಮುಖಂಡರಾದ ಶ್ರೀನಿವಾಸ್ ರಾವ್ ವಹಿಸಿದ್ದರು. ಸಂಗಾತಿ, ಎಂ.ಜಿ.ಪೃಥ್ವಿ ನಿರೂಪಣೆ ಮಾಡಿದರು. ಧರ್ಮೆಶ್ ಹಾಗೂ ಗೋಪಾಲಕೃಷ್ಣ ಅರಳಹಳ್ಳಿ ಉಪಸ್ಥಿತರಿದ್ದರು. ಕಾಂ.ಕೆ.ಎಸ್.ಮಂಜುನಾಥ್ ಸ್ವಾಗತಿಸಿದರು. ಕೊನೆಯಲ್ಲಿ ಕಾಂ.ಮೀನಾಕ್ಷಿ ವಂದಿಸಿದರು. ●

@CMOKerala

ಈಗ ಮುಚ್ಚಿರುವ ಎಲ್ಲಾ ಗೇರುಬೀಜ ಕಾರ್ಖಾನೆಗಳನ್ನು ಓಣಂ ಮೊದಲು ತೆರೆಯಲು ಸರಕಾರ ಬ್ಯಾಂಕುಗಳೊಂದಿಗೆ ಸೇರಿ ಎಲ್ಲಾ ಸಹಕಾರ ಬೆಂಬಲ ನೀಡುವುದು

*– ಕೇರಳ ಮುಖ್ಯಮಂತ್ರಿ*
*ಪತ್ರಿಕಾ ಗೋಷ್ಠಿ ಹೇಳಿಕೆ*

## ದಲಿತ ಮಾನವ ಅಭಿವೃದ್ಧಿ ಸೂಚಿ............ ಪುಟ 6 ರಿಂದ

ಕುಡಿಯುವ ನೀರು, ಶೌಚಾಲಯ, ಚರಂಡಿ ವ್ಯವಸ್ಥೆ ಇವೆಲ್ಲವನ್ನು ಮೂಲಸೌಕರ್ಯಗಳೆಂದು ಪರಿಗಣಿಸಲಾಗಿದೆ. ಎಲ್ಲ ಊರುಗಳಲ್ಲಿ ಮತ್ತು ಪೇಟೆ ಪಟ್ಟಣಗಳಲ್ಲಿ ಈ ಮೂಲಸೌಕರ್ಯಗಳು ಅನುಕೂಲಸ್ಥರು ಇರುವ ಪ್ರದೇಶದಲ್ಲಿರುವಷ್ಟು ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ ಅನಾನುಕೂಲಸ್ಥರು ಇರುವ ಪ್ರದೇಶಗಳಲ್ಲಿ ಇಲ್ಲ. ಗ್ರಾಮೀಣ ಪ್ರದೇಶಗಳಲ್ಲೂ ಈ ಮೂಲಸೌಕರ್ಯಗಳು ಊರಲ್ಲಿದ್ದಷ್ಟು ದಲಿತ ಕೇರಿಯಲ್ಲಿ ಇಲ್ಲ. ಮೂಲಸೌಕರ್ಯಗಳ ವಿತರಣೆಯಲ್ಲಿರುವ ಈ ಅಂತರ ಅಭಿವೃದ್ಧಿಯನ್ನು ಪ್ರಭಾವಿಸುತ್ತದೆ. ಈ ಅಂತರವನ್ನು ಮಾಪನ ಮಾಡಲು ಈ ಸೂಚಿಯನ್ನು ಬಳಸಲಾಗಿದೆ.

**10. ಶಿಕ್ಷಣ ನಿಲುಕುವಿಕೆಯ ಸೂಚಿ:**

ಶಾಲಾ ಶಿಕ್ಷಣದಿಂದ ದಾಖಲಾತಿ, ಹೊರಗುಳಿಯುವ ಹಾಗು ಬಿಟ್ಟು ಹೋಗುವ ದರ ಈ ಮೂರು ಸೂಚ್ಯಂಕಗಳನ್ನು ಬಳಸಿಕೊಂಡು ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ದಲಿತೇತರ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಹೋಲಿಸಿ ಮಾಪನ ಮಾಡಲಾಗಿದೆ.

ಮೇಲಿನ ಎಲ್ಲ ಸೂಚಿಗಳು ದಲಿತೇತರರ ಅಭಿವೃದ್ಧಿಗೆ ಹೋಲಿಸಿ ದಲಿತ ಅಭಿವೃದ್ಧಿ ಸ್ಥಿತಿಯನ್ನು ತೋರಿಸುತ್ತವೆ. ಪ್ರತಿ ಸೂಚಿಯಲ್ಲೂ ಮೂರರಿಂದ ಐದು ಸೂಚ್ಯಂಕಗಳಿವೆ. ಪ್ರತಿ ಸೂಚ್ಯಂಕಕ್ಕೂ ದಲಿತೇತರರ ಅಭಿವೃದ್ಧಿಗೆ ಹೋಲಿಸಿ ದಲಿತ ಅಭಿವೃದ್ಧಿಯನ್ನು ಗುರುತಿಸುವ ಅಂಕ ಅಥವಾ ವೈಟೇಜ್ ನೀಡಲಾಗಿದೆ. ದಲಿತೇತರರಿಗೆ ಹೋಲಿಸಿದಾಗ ದಲಿತ ಅಭಿವೃದ್ಧಿ ಕಡಿಮೆಯಿದ್ದರೆ ಸೂಚ್ಯಾಂಕ ಶೂನ್ಯ ಅಂಕ ಅಥವಾ ವೈಟೇಜ್ ಪಡೆಯುತ್ತದೆ. ದಲಿತೇತರರಿಗೆ ಸಮನಾದ ದಲಿತ ಅಭಿವೃದ್ಧಿ ಇದ್ದರೆ ಒಂದು ವೈಟೇಜ್ ನೀಡಲಾಗುವುದು. ದಲಿತೇತರರಿಗಿಂತ ಉತ್ತಮ ದಲಿತ ಅಭಿವೃದ್ಧಿ ಇದ್ದರೆ ಎರಡು ಅಂಕ ನೀಡಲಾಗುವುದು. ಎಲ್ಲ ಸೂಚ್ಯಂಕಗಳು ಗಳಿಸಿದ ಮೌಲ್ಯಗಳನ್ನು ಕೂಡಿಸಿ ಅವುಗಳ ಗರಿಷ್ಠ ಮೌಲ್ಯದ ಮೊತ್ತದಿಂದ ಭಾಗಿಸಿ ಪ್ರತಿ ಸೂಚಿಯ ಮೌಲ್ಯವನ್ನು ಪಡೆಯಲಾಗಿದೆ. ಮೇಲಿನ ಹತ್ತು ಸೂಚಿಗಳ ಸರಾಸರಿ ಮೌಲ್ಯವನ್ನು ಸಮಗ್ರ ದಲಿತ ಮಾನವ ಅಭಿವೃದ್ಧಿ ಸೂಚಿಯ ಮೌಲ್ಯವೆಂದು ಪರಿಗಣಿಸಲಾಗಿದೆ. ಪ್ರತಿ ಸೂಚಿಯ ಅಂಕಗಳು ಸಕರಾತ್ಮಕವಾಗಿ ಜೋಡಿಸಲ್ಪಟ್ಟಿವೆ. ಅಂದರೆ ಸೂಚಿಯ ಅಂಕ ಹೆಚ್ಚಾದಂತೆ ದಲಿತ ಮಾನವ ಅಭಿವೃದ್ಧಿ ಸ್ಥಿತಿ ಸುಧಾರಿಸಿದಂತೆ ಮತ್ತು ಕಡಿಮೆಯಾದಂತೆ ದಲಿತ ಅಭಿವೃದ್ಧಿ ಸ್ಥಿತಿ ಕಡಿಮೆ ಇರುವುದನ್ನು ತೋರಿಸುತ್ತದೆ. ಸಮಗ್ರ ದಲಿತ ಮಾನವ ಅಭಿವೃದ್ಧಿ ಸೂಚಿ ಅಂಕ 0.4ಕ್ಕಿಂತ ಕಡಿಮೆ ಇದ್ದರೆ ದಲಿತ ಮಾನವ ಅಭಿವೃದ್ಧಿ ಸ್ಥಿತಿ ಕೆಟ್ಟದಿದೆ ಎನ್ನುವ ಅರ್ಥ. ದಲಿತ ಮಾನವ ಅಭಿವೃದ್ಧಿ ಸೂಚಿ ಅಂಕ 0.4 ಮತ್ತು 0.6ರ ಮಧ್ಯ ಇದ್ದರೆ ದಲಿತ ಮಾನವ ಅಭಿವೃದ್ಧಿ ಸ್ಥಿತಿ ಸಾಧಾರಣ ಇದೆ ಎನ್ನುವ ಚಿತ್ರಣ. ದಲಿತ ಸೂಚಿ ಅಂಕ 0.6 ಮತ್ತು 0.8ರ ನಡುವೆ ಇದ್ದರೆ ದಲಿತ ಮಾನವ ಅಭಿವೃದ್ಧಿ ಸ್ಥಿತಿ ಉತ್ತಮ. ಸೂಚಿ ಅಂಕ 0.8ಕ್ಕಿಂತ ಹೆಚ್ಚಿದ್ದರೆ ದಲಿತ ಮಾವನ ಅಭಿವೃದ್ಧಿ ಸ್ಥಿತಿ ಅತ್ಯುತ್ತಮ ಎನ್ನುವ ತೀರ್ಮಾನಕ್ಕೆ ಬರಬಹುದು. ●

# ವಸತಿ ಹೀನರ ಸಮರ್ಪಕ ಸರ್ವೇಗೆ ಒತ್ತಾಯಿಸಿ ಪ್ರತಿಭಟನೆ

ಸರ್ಕಾರಿ ಜಾಗದಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿರುವವರಿಗೆ ಹಕ್ಕುಪತ್ರ ನೀಡಲು, ಹಕ್ಕುಪತ್ರಗಳ ಮೇಲೆ ಸಾಲ ಪಡೆದು ಸಾಲ ಮರುಪಾವತಿ ಮಾಡಿರುವವರಿಗೆ ಹಕ್ಕುಪತ್ರಗಳನ್ನು ವಾಪಸ್ ನೀಡುವಂತೆ ಒತ್ತಾಯಿಸಿ ತುಮಕೂರು ಮಹಾನಗರ ಪಾಲಿಕೆ ಎದುರು ಸಿ.ಪಿ.ಐ(ಎಂ) ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ ಸೈಯದ್ ಮುಜೀಬ್ ಮಾತನಾಡಿ ತುಮಕೂರು ಮಹಾನಗರಪಾಲಿಕೆಯೂ ಸ್ಮಾರ್ಟ್ ಸಿಟಿ ಆಗುವತ್ತ ದಾಪುಗಾಲು ಹಾಕುತ್ತಿರುವ ಸಂದರ್ಭದಲ್ಲೇ ಕಳೆದ 23 ವರ್ಷಗಳಿಂದ ಬಡಜನರಿಗೆ ಒಂದೇ ಒಂದು ನಿವೇಶನವನ್ನು ಮಂಜೂರು ಮಾಡದ ಕ್ರಮ ನಿಜಕ್ಕೂ ವಿಷಾದನೀಯ. ಇದರಿಂದಾಗಿ ಬಡಜನರು ವಸತಿ ಸಮಸ್ಯೆಯನ್ನು ಎದುರಿಸುತ್ತಾ ನಗರದಲ್ಲಿ ಸ್ಲಂಗಳ ಸಂಖ್ಯೆ ಹೆಚ್ಚಿದೆಯಲ್ಲದೆ ಅಸಂಘಟಿತ ವಲಯದ ಬಡಕಾರ್ಮಿಕರು ತಮ್ಮ ದುಡಿಮೆಯ ಅರ್ಧದಷ್ಟು ಮನೆ ಬಾಡಿಗೆಯಾಗಿ ಪಾವತಿಸುವಂತಹ ದುಸ್ಥಿತಿ ಒದಗಿದೆ. ಈ ಅಂಶವನ್ನು ಗಮನಕ್ಕೆ ತೆಗೆದುಕೊಂಡು ಮಹಾನಗರಪಾಲಿಕೆ ತುಮಕೂರು ನಗರದಲ್ಲಿ ಬಡಜನರಿಗೆ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಈ ಕೂಡಲೇ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಮಾತನಾಡಿ ಸರ್ಕಾರಿ ಜಾಗಗಳಲ್ಲಿ ಹತ್ತಾರು ವರ್ಷಗಳಿಂದ ವಾಸವಾಗಿರುವ ಬಡಜನರಿಗೆ ಅಕ್ರಮ–ಸಕ್ರಮ ಯೋಜನೆಯನ್ನು ಜಾರಿಗೊಳಿಸಿ ಈ ಕೂಡಲೇ ಹಕ್ಕುಪತ್ರಗಳನ್ನು ನೈಜ ಫಲಾನುಭವಿಗಳಿಗೆ ನೀಡುವಂತೆ ಒತ್ತಾಯಿಸುತ್ತೇವೆ.



ಕೇಂದ್ರ–ರಾಜ್ಯ ಸರ್ಕಾರಗಳ ಬಡವರಿಗೆ ವಸತಿ ಒದಗಿಸುವ ಯೋಜನೆಗೆ ಸಂಬಂಧಿಸಿದಂತೆ ನಡೆಸುತ್ತಿರುವ ವಸತಿ ಹೀನರ ಸರ್ವೇ ಕಾರ್ಯವನ್ನು ಕಾಟಾಚಾರಕ್ಕೆ ನಡೆಸದೆ ನೈಜ ವಸತಿ ಹೀನರನ್ನು ಗುರುತಿಸಲು ಸರ್ವೇಯ ಅವಧಿಯನ್ನು ಹೆಚ್ಚಿಸಲು ಒತ್ತಾಯಿಸುತ್ತೇವೆ ಎಂದರು.

ಸ್ವಚ್ಛ ಭಾರತ ಅಭಿಯಾನ ಹಾಗೂ ಬಯಲು ಶೌಚಮುಕ್ತ ನಗರವಾಗಿಸುವ ನಿಟ್ಟಿನಲ್ಲಿ ಮನೆಗಳಲ್ಲಿ ಶೌಚಾಲಯ ನಿರ್ಮಿಸಿಕೊಂಡಿರುವ ಬಡಜನರಿಗೆ ನೀಡಬೇಕಾಗಿರುವ ಸಹಾಯ ಧನವನ್ನು ನೀಡಬೇಕು. ಸರಳ ಖಾತೆ ಅಂದೋಲನವನ್ನು ನಗರದ ಎಲ್ಲಾ ಸ್ಲಂಗಳಿಗೆ ವಿಸ್ತರಿಸಿ ವಿಶೇಷ ಅಭಿಯಾನ ನಡೆಸಬೇಕು. ವ್ಯಾಪಾರಿ ಕೇಂದ್ರಗಳಲ್ಲಿ ಶೌಚಾಲಯವನ್ನು ನಿರ್ಮಿಸಿ, ಅಸಹಾಯಕ ಪೌರಕಾರ್ಮಿಕರಿಗೆ ನಿರ್ವಹಣೆಯ ಜವಾಬ್ದಾರಿಯನ್ನು ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿಯ ನರಸಿಂಹಮೂರ್ತಿರವರು ಮಾತನಾಡಿ ಸರ್ಕಾರ ಅವೈಜ್ಞಾನಿಕವಾದ ಹಾಗೂ ಬಡಜನ ವಿರೋಧಿಯಾದಂತಹ ನಿಲುಮೆಗಳನ್ನು ಕೈಬಿಡುವಂತೆ ಒತ್ತಾಯಿಸಿದರಲ್ಲದೆ ಹೋರಾಟವನ್ನು ಬೆಂಬಲಿಸಿದರು.

**ಆಯುಕ್ತರೊಂದಿಗೆ ವಾಗ್ವಾದ :**

ಮಹಾನಗರಪಾಲಿಕೆಯ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಆಯುಕ್ತರು ನೀಡಿದ ಉತ್ತರಕ್ಕೆ ತೃಪ್ತರಾಗದೆ ವಾಗ್ವಾದವನ್ನೆ ನಡೆಸಿದರು. ಈ ಸದರ್ಭದಲ್ಲಿ ಮನವಿ ಸ್ವೀಕರಿಸಿ ಮಾತನಾಡಿದ ಮಹಾನಗರಪಾಲಿಕೆ ಆಯುಕ್ತ ಆರ್ಶದ್ ಆರ್. ಶರೀಫ್ ರವರು ವಸತಿ ಪ್ರಶ್ನೆಯನ್ನು ಇತ್ಯಾರ್ಥಪಡಿಸಲು ಭೂಮಿಯ ಕೊರತೆ ಸಮಸ್ಯೆಯಾಗಿದೆ ಎಂದರು. ಇದಕ್ಕೆ ಪ್ರತಿಯಾಗಿ ಪ್ರತಿಭಟನಾಕಾರರು ಕೈಗಾರಿಕೆಗಳಿಗೆ ನೀಡಲು ಭೂಮಿ ಇದ್ದು ಬಡಜನರಿಗೆ ಮನೆಗಳನ್ನು ನೀಡಲು ಯಾಕೆ ಇಲ್ಲ ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ನಗರ ಕಾರ್ಯದರ್ಶಿ ಎಸ್.ರಾಘವೇಂದ್ರ, ಮಳೇಕೋಟೆ ನಾಗರೀಕ ಹೋರಾಟ ಸಮಿತಿಯ ಶ್ರೀಧರ್, ಶಂಕರಪ್ಪ, ರಾಜೀವ್‌ಗಾಂಧಿ ನಗರದ ರಂಗಮ್ಮ, ಚನ್ನಕೇಶವ, ಬೀಮಸಂದ್ರ ಮತ್ತು ದಿಬ್ಬೂರು ಜನತಾ ಕಾಲೋನಿ ಹೋರಾಟ ಸಮಿತಿಯ ರಾಮಚಂದ್ರ, ಮಂಜುನಾಥ್, ವೆಂಕಟೇಶ್, ಸಿಪಿಐ(ಎಂ) ನಗರ ಸಮಿತಿ ಸದಸ್ಯರಾದ ಲೇಬಲ್ ರಫೀಕ್, ಶಹತಾಜ್, ಉಪ್ಪಾರಹಳ್ಳಿಯ ಲಕ್ಷ್ಮಣ್, ಎಸ್.ಎಫ್.ಐ ಜಿಲ್ಲಾಧ್ಯಕ್ಷ ಶಿವಣ್ಣ, ಡಿ.ವೈ.ಎಫ್.ಐನ ಪುಟ್ಟೇಗೌಡ, ನಾರಾಯಣಸ್ವಾಮಿ ಮುಂತಾದವರಿದ್ದರು.

ಮನವಿ ಪತ್ರವನ್ನು ಮಹಾಪೌರರಾದ ಯಶೋದ ಶ್ರೀನಿವಾಸ್, ಆಯುಕ್ತ ಆರ್ಶದ್ ಆರ್. ಶರೀಫ್ ಸ್ವೀಕರಿಸಿದರು. ■

## ಒಂದೆಡೆ ದಲಿತರ ಮೇಲೆ ಗೋರಕ್ಷಣೆ ದಾಳಿ...... ಪುಟ 9 ರಿಂದ

ಸರ್ಕಾರದ ಈ ಎರಡು ವರ್ಷಗಳ ಕೇಂದ್ರದ ಆಡಳಿತಾ ಅವಧಿಯಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿರುವುದು ಎನ್.ಸಿ.ಆರ್.ಬಿ.ಯ ವರದಿಯ ದಾಖಲೆಗಳು ದೃಢಪಡಿಸಿವೆ. ಉದಾಹರಣೆಗೆ ಹೇಳುವುವದಾದರೆ, ಇತ್ತೀಚಿಗೆ ಗುಜರಾತ್‌ನ ಉನಾ ಗ್ರಾಮದಲ್ಲಿ ಹಸು ಚರ್ಮವನ್ನು ತೆಗೆ–ಯುತ್ತಿದ್ದ, ದಲಿತರ ಮೇಲೆ ಅಮಾನುಷ್ಯವಾಗಿ ದೌರ್ಜನ್ಯ ಎಸಗಿರುವುದು. ಇದು ಗೋವು ಸಂರಕ್ಷಣೆ ಹೆಸರಿನಲ್ಲಿ ನಡೆಯುತ್ತಿದೆ. ಮುಂಬಯಿ ನಗರದಲ್ಲಿ ಅಂಬೇಡ್ಕರ್ ಭವನ ಕಟ್ಟಡದ ಧ್ವಂಸ, ಹಾಗೆಯೇ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಬಿಎಸ್‌ಪಿಯ ದಲಿತ ನಾಯಕಿ ಮಾಯಾವತಿಯನ್ನೂ, ಬಿಜೆಪಿಯ ಉತ್ತರ ಪ್ರದೇಶದ ಉಪಾಧ್ಯಕ್ಷರೊಬ್ಬರು ಸೂಳೆಗೆ ಹೋಲಿಸಿರುವುದು, ಬಿಜೆಪಿಗೆ ಮಹಿಳೆಯ ಮೇಲಿರುವ ಗೌರವ ಅಥವಾ ದಲಿತರ ಮೇಲಿರುವ ಪ್ರೀತಿಯ ಬೂಟಾಟಿಕೆಯನ್ನು ಎತ್ತಿ ತೋರಿಸುತ್ತದೆ ಎಂದರು.

ಇಂತಹ ದೌರ್ಜನ್ಯಗಳು, ನಿಂದನೆಗಳು ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಹೆಚ್ಚಾಗಿರುವುದು, ಅದೇ ರೀತಿ ಇಡೀ ದೇಶದಲ್ಲಿನ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲದಿರುವುದು ಕಂಡುಬಂದಿದೆ. ಒಂದು ಕಡೆ ಆರ್.ಎಸ್.ಎಸ್., ಭಜರಂಗದಳ ಹಾಗೂ ಇನ್ನಿತರೆ ಸಂಘಪರಿವಾರದವರು ದಲಿತರ ಮೇಲೆ ಗೋವು ಸಂರಕ್ಷಣೆ ಹೆಸರಿನಲ್ಲಿ ಆಕ್ರಮಣವೆಸಗುತ್ತಿದ್ದರೆ, ಮತ್ತೊಂದು ಕಡೆ ಈ ಆರ್.ಎಸ್.ಎಸ್.ನ ರಾಜಕೀಯ ಅಂಗವಾದ ಬಿಜೆಪಿಯು ಡಾ॥ಬಿ.ಆರ್. ಅಂಬೇಡ್ಕರ್‌ರವರು 125ನೇ ಜನ್ಮ ದಿನಾಚಾರಣೆ, ಪ್ರತಿಮೆ, ಕಟ್ಟಡ ನಿರ್ಮಾಣಗಳ ಮೂಲಕ 'ಬೂಟಾಟಿಕೆ'ಯ ಆಚರಣೆ ಮಾಡುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಡಾ. ಬಿ.ಆರ್.ಅಂಬೇಡ್ಕರ್‌ರವರು ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಧರ್ಮಗಳಿಗೆ ಮತಾಂತರವಾಗದೆ ಬುದ್ಧ ಧರ್ಮವನ್ನು ಒಪ್ಪಿಕೊಂಡರು. ಬೌದ್ಧ ಧರ್ಮವು ಹಿಂದು ಧರ್ಮದ ಒಂದು ಭಾಗವೆಂದು ಮನುವಾದಿಗಳು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಅಂಬೇಡ್ಕರ್‌ರವರು ಹಿಂದೂ ಧರ್ಮ ತೊರೆಯಲು ಮೂಲಕ ಕಾರಣಗಳೇನು ಎಂಬ ಅಂಶವನ್ನೇ ಸಂಪೂರ್ಣವಾಗಿ ಅಭ್ಯಾಸಿಸಿದರೆ ಮಾತ್ರ ಈ ಪ್ರಶ್ನೆಗೆ ಸೂಕ್ತ ಉತ್ತರ ಸಿಗುತ್ತದೆ. ಹಿಂದೂ ಧರ್ಮದಲ್ಲಿನ ಅಸ್ಪೃಶ್ಯತಾ ಆಚರಣೆಗಳು, ದಲಿತರನ್ನೂ ಈ ಧರ್ಮ ನೋಡುವ ಪರಿ, ಬಳಸಿಕೊಳ್ಳುವ ಅಮಾನವೀಯ ಆಂಶಗಳೇ ಇದಕ್ಕೆ ಮೂಲ ಕಾರಣವೆಂದು ಸೂಕ್ಷ್ಮವಾಗಿ ಹೇಳಿದರು.

ನಮ್ಮ ಸಂವಿಧಾನದ ಆಧಾರ ಸ್ತಂಭಗಳಾದ ಸಮಾನತೆ, ಜಾತ್ಯಾತೀತತೆ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವಲ್ಲಿ ಅಸಹಿಷ್ಣುತೆಯಿಂದ ವರ್ತಿಸುವ ಸಂಘಪರಿವಾರಕ್ಕೆ ಮನುವಾದವೇ ಮೂಲ, ದೇಶ ಪ್ರೇಮವನ್ನು 'ಭಾರತ ಮಾತೆ'ಎಂಬ ತಾಯಿಯ ಹೆಸರಿನಲ್ಲಿ ಅಳೆಯುವ ಈ ಸಂಪ್ರದಾಯವಾದಿಗಳು ಪ್ರಜಾಪ್ರಭುತ್ವದ ಆಶಯವನ್ನು ಗಾಳಿಕೆ ತೂರಿ, ದೇಶದ ಜನರನ್ನು ಅಡ್ಡದಾರಿಗೆ ಎಳೆಯುತ್ತಾ ಜಾತಿ, ಧರ್ಮ, ಗೋವು ಸಂರಕ್ಷಣೆಯ ಹೆಸರಿನಲ್ಲಿ ದೌರ್ಜನ್ಯಗಳನ್ನೇ ಆಚಾರ–ವಿಚಾರ ಮಾಡಿಕೊಂಡು ದೇಶದಲ್ಲಿ ಆಶಾಂತಿ ಸೃಷ್ಟಿಸಿ, ರಾಜಕೀಯ ಬೇಳೆ ಬೇಯಿಸಿಕೊತ್ತಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಸಮಾಜ ವಿಜ್ಞಾನಿ ಶ್ರೀ ಜಿ.ಎನ್.ನಾಗರಾಜ್ ಮಾತನಾಡಿದರು. ಖಾಸಗೀಕರಣ, ಜಾಗತೀಕರಣ, ಉದಾರೀಕರಣ ನೀತಿಗಳಿಂದಾಗಿ ಸಾರ್ವಜನಿಕ ವಲಯಗಳು ನಾಶ ಹೊಂದುತ್ತಿವೆ. ಇಲ್ಲಿಯ ಉದ್ಯೋಗವು ನಶಿಸಿ ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ವಿದ್ಯಾವಂತ ದಲಿತರಿಗೆ ಸ್ವಾವಲಂಬನೆ ಬದುಕು ಮರೀಚಿಕೆಯಾಗಿದೆ. ಆದ್ದರಿಂದ ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ಒದಗಿಸಬೇಕೆಂದು ಸರ್ಕಾರಗಳನ್ನೂ ಆಗ್ರಹಿಸಿದರು. ದೇಶದಲ್ಲಿ ಸಾವಿರ ಸಾವಿರ ಖಾಸಗಿ ಸಂಸ್ಥೆಗಳು ನಾಯಿಕೊಡೆಯ ಹಾಗೆ ಬೆಳೆದಿವೆ. ಅವುಗಳಲ್ಲಿ ಮೇಲು ಜಾತಿಯವರೆ ಉದ್ಯೋಗಗಳಲ್ಲಿ ತುಂಬಿ ಹೋಗಿದ್ದಾರೆ. ಶೇ. 44 ರಷ್ಟು ಬ್ರಾಹ್ಮಣರು, ಶೇ.48 ಸಾಮಾನ್ಯ ವರ್ಗ, ಕೇವಲ ಶೇ.01ರಷ್ಟು ಮಾತ್ರ ದಲಿತರ, ಶೇ. 07ರಷ್ಟು ಮುಸ್ಲಿಂರು ಮೇಲ್ಮಟ್ಟದ ಸ್ಥಾನಗಳಲ್ಲಿದ್ದಾರೆ. 20 ಲಕ್ಷಕ್ಕೂ ಅಧಿಕ ಸರ್ಕಾರಿ ಹುದ್ದೆಗಳು ಖಾಲಿ ಬಿದ್ದಿವೆ. ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮವಹಿಸಬೇಕೆಂದರು.

ಸಭೆಯಲ್ಲಿ ಯು.ಬಸವರಾಜು, ಆಚರಣಾ ಸಮಿತಿ ಗೌರವಾಧ್ಯಕ್ಷರಾದ ಶ್ರೀ ನಾರಾಯಣದಾಸ್ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ವಹಿಸಿದ್ದರು. ಎಂ.ಜಿ.ಪ್ರದೀಪ್ ಕುಮಾರ್ ನಿರೂಪಣೆಯನ್ನು ಉತ್ತಮವಾಗಿ ನಿರ್ವಹಿಸಿದರು. ಇವರು ದಲಿತ ಹಕ್ಕುಗಳ ಸಮಿತಿ, ಹಾಸನ ಜಿಲ್ಲೆಯ ಮುಖಂಡರು, ಆರಂಭದಲ್ಲಿ ಮಧುಸೂಧನ್, ಸಹ–ಸಂಚಾಲಕರು, ದ.ಹ.ಸ. ಹಾಸನ ಸ್ವಾಗತಿಸಿದರು. ಕೊನೆಗೆ ದ.ಹ.ಸ.ಯ ಎ.ಹರೀಶ್ ವಂದನಾರ್ಪಣೆ ಸಲ್ಲಿಸಿದರು. ■

## ಸಿಗರನಹಳ್ಳಿಗೆ ಸೀತಾರಾಂ ಯೆಚೂರಿ ಬೇಟಿ........ ಪುಟ 9 ರಿಂದ

ಮಾಡಿದ್ದಾರೆ. ಸವರ್ಣೀಯರು ತಮ್ಮ ಅಸ್ಪೃಶ್ಯತಾ ಆಚರಣೆಗಳನ್ನು ಮುಂದುವರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಹಾಸನದ ಡಾ:– ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ವಿಚಾರ ಸಂಕಿರಣವನ್ನೂ ಸಂಗಾತಿ ಸೀತಾರಾಂ ಯೆಚೂರಿಯವರು, ಉದ್ಘಾಟಿಸಲು ಆಗಮಿಸುತ್ತಿದ ಹಾದಿಯಲ್ಲಿದ್ದ, ಸಿಗರನಹಳ್ಳಿಗೆ ಬೇಟಿ ಕೊಟ್ಟಿದ್ದದ್ದು ತುಂಬ ಪ್ರಮುಖವಾಗಿತ್ತು. 'ಸ್ವತಂತ್ರ ಭಾರತದಲ್ಲಿ ದಲಿತರ ಸ್ಥಿತಿ – ಗತಿಗಳು ಮತ್ತು ಸವಾಲುಗಳು' ಎಂಬುದನ್ನು ಕಣ್ಣಾರೆ ಕಂಡು ಪ್ರತ್ಯಕ್ಷವಾಗಿ ಸಿಗರನಹಳ್ಳಿಗೆ ಭೇಟಿ ಮಾಡಿದ್ದು, ತುಂಬಾ ಅರ್ಥಪೂರ್ಣವಾಗಿತ್ತು.

ಡಾ:– ಬಿ.ಆರ್. ಅಂಬೇಡ್ಕರ್ ರವರ 125ನೇ ಜನ್ಮ ವರ್ಷಾಚರಣೆ ಸಂದರ್ಭದಲ್ಲಿಂದೂ, ದಲಿತರಿಗೆ ದೇವಾಲಯ ಪ್ರವೇಶಕ್ಕೆ ನಿಷೇದ ಇದೆ ಎಂಬ ಅಂಶ ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ವ್ಯಾಖ್ಯಾನಿಸಿದರು. ದಲಿತ ಕೇರಿಗೆ ಭೇಟಿ ನೀಡಿ, ಈ ಸಂದರ್ಭದಲ್ಲಿ ಹೋರಾಟ ನಡೆಸಿದ ದಲಿತ ಹಕ್ಕುಗಳ ಸಮಿತಿ ಹಾಗೂ ಇನ್ನಿತರೆ ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕ್ಕೆ ಸೀತಾರಾಂ ಶ್ಲಾಘನೆ ವ್ಯಕ್ತಪಡಿಸಿದರು.

ದಲಿತರು ದೇಗುಲ ಪ್ರವೇಶಿಸಿದರು ಎಂಬ ಕಾರಣದಿಂದ, ಸವರ್ಣೀಯರು ದೇವಾಲಯಕ್ಕೆ ಬರುವುದನ್ನೇ ನಿಲ್ಲಿಸಿದ್ದಾರೆ ಎಂಬ ವಾಸ್ತವ ಸತ್ಯ, ಬೇಸರ ತಂದಿದೆ, ಮಾತ್ರವಲ್ಲದೆ, ಸಂವಿಧಾನದ ಆಶಯಗಳಿಗೆ ಕೊಡಲಿ ಪೆಟ್ಟು ಕೊಡುವಂತ ವಿಚಾರವಿದಾಗಿದೆ. ಎಂದು ವಿಷಾದ ವ್ಯಕ್ತಪಡಿಸಿದರು.

'ಅಂಬೇಡ್ಕರ್ ಬಯಸಿದ್ದು, ಎಲ್ಲ ವರ್ಗ, ಜಾತಿ, ಧರ್ಮ, ಜನಾಂಗದ ಜನರು ಒಟ್ಟಾಗಿ ಬಾಳಬೇಕು, ಸಾಮಾಜಿಕ ನ್ಯಾಯ ಹಳ್ಳಿ ಹಳ್ಳಿಯಲ್ಲೂ ಮೆರೆಯಬೇಕಾದ ಈ ಸಂದರ್ಭದಲ್ಲಿ, ಸಾಮಾಜಿಕ ಅಸಮಾನತೆ, ಅಸ್ಪೃಶ್ಯತಾ ಆಚರಣೆಗಳು ಈ ಹಳ್ಳಿಗಳಲ್ಲಿ ತಾಂಡವವಾಡುತ್ತಿರುವುದು ನಮ್ಮ ದೇಶದ ದುರಂತವೆಂದರು. ಪ್ರತಿಯೊಬ್ಬರು ಗೌರವಯುತ ಜೀವನ ನಡೆಸುವಂತ ಪರಿಸ್ಥಿತಿ ನಿರ್ಮಿಸಬೇಕಾದ ಕರ್ತವ್ಯ ಎಲ್ಲರ ಮೇಲಿದೆ, ಆ ನಿಟ್ಟಿನಲ್ಲಿ ಒಂದಾಗಿ ಶ್ರಮಿಸಬೇಕಾದ ಅಗತ್ಯವಿದೆ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಜಿ.ವಿ. ಶ್ರೀರಾಮರೆಡ್ಡಿ, ಮಾತನಾಡಿ, ದಲಿತರಿಗೆ ಸ್ಥಳೀಯ ಜನಪ್ರತಿನಿಧಿಗಳು ಸಾಮಾಜಿಕ ನ್ಯಾಯ ದೊರಕಿಸಿ ಕೊಡದಿದ್ದಾಗ ದಲಿತ ಪರ ಮತ್ತು ಪ್ರಗತಿಪರ ಸಂಘಟನೆಗಳು ಹೋರಾಡಿ, ದೇವಸ್ಥಾನಕ್ಕೆ ಪ್ರವೇಶಕೊಡಿಸಲು ಸಾಧ್ಯವಾಗಿದೆ.

ಇದೇ ದೇಶದಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ದಲಿತರು ಬದುಕಿಗಾಗಿ ಜೀವನ ನಡೆಸುತ್ತಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 38 ರಷ್ಟು ದಲಿತರಿಗೆ ಒಂದಿಚು ಭೂಮಿ ಇಲ್ಲ.

ಹಂಪಿ ವಿಶ್ವ ವಿದ್ಯಾಲಯದ ಕನ್ನಡ ಅಭಿವೃದ್ಧಿ ವಿಭಾಗದ ಮುಖ್ಯಸ್ಥ ಡಾ: ಎಂ. ಚಂದ್ರ ಪೂಜಾರಿ, ದಲಿತ ಶೋಷಣಾ ಮುಕ್ತಿ ಮಂಚ್‌ನ ಶ್ರೀನಿವಾಸರಾವ್, ದಲಿತ ಹಕ್ಕುಗಳ ಸಮಿತಿ, ಕರ್ನಾಟಕದ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ, ಆಚರಣಾ ಸಮಿತಿಯ ನಾರಾಯಣದಾಸ್‌ರವರು ಹಾಗೂ ಸಹ – ಸಂಚಾಲಕರಾದ, ಎಂ.ಜಿ. ಪೃಥ್ವಿ ಹಾಗೂ ಹಾಸನ ಜಿಲ್ಲೆಯ ಪ್ರಗತಿಪರ ಹೋರಾಟಗಾರರಾದ ಧರ್ಮೇಶ್, ನವೀನ್ ಕುಮಾರ್ ಕೂಡ ಸಿಗರನಹಳ್ಳಿಗೆ ಈ ಸಂದರ್ಭದಲ್ಲಿ ಬೇಟಿಕೊಟ್ಟಿದರು.

ಕಾ. ಸೀತಾರಾಂ ಯೆಚೂರಿಯವರ ಈ ಭೇಟಿಯಿಂದ ಉತ್ಸಾಹ ಭರಿತರಾದ ಸಿಗರನಹಳ್ಳಿಯ ದಲಿತರು, ಸಿಪಿಐ(ಎಂ) ಪಕ್ಷದ 'ಸಾಮಾಜಿಕ ನ್ಯಾಯ' ಪರವಾದ ಈ ಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಡಾ। ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ವರ್ಷಾಚರಣೆಯನ್ನು ಆಚರಿಸುವಂತ ಎಲ್ಲಾ ಬೂಜ್ವಾ ಪಕ್ಷಗಳು, ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ ಸಮಾನತೆ, ಭ್ರಾತೃತ್ವ ಹಾಗೂ ಸಾಮಾಜಿಕ ನ್ಯಾಯ ಎತ್ತಿಹಿಡಿಯುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತಾರೆಂದು ಭಾವಿಸೋಣವೆ? ■

# 1.3 ಕೋಟಿ ಉದ್ಯೋಗಾಕಾಂಕ್ಷಿಗಳಿಗೆ 1.3 ಲಕ್ಷ ಉದ್ಯೋಗಗಳ ನಿರ್ಮಾಣ!

ಕಾರ್ಮಿಕ ಇಲಾಖೆಯ ಲೇಬರ್ ಬ್ಯುರೊದ ತ್ರೈಮಾಸಿಕ ತ್ವರಿತ ಉದ್ಯೋಗ ಸರ್ವೆ (ಕ್ಯುಇಎಸ್) ಪ್ರಕಾರ ಜವಳಿ, ವಾಹನಗಳು, ಚರ್ಮ, ಕೈಮಗ್ಗ, ಐಟಿ/ಬಿಪಿಒ ಮುಂತಾದ ಶ್ರಮಶಕ್ತಿ ಹೆಚ್ಚು ಬೇಕಾಗುವ ಮತ್ತು ರಫ್ತು ವಲಯದಲ್ಲಿ ಜನವರಿ 2014ರಿಂದ ಡಿಸೆಂಬರ್ 2014 ರ ನಡುವೆ 4,21ಲಕ್ಷ ಹೊಸ ಉದ್ಯೋಗಗಳು ಸೇರ್ಪಡೆಯಾದರೆ, ಜನವರಿ 2015ರಿಂದ ಡಿಸೆಂಬರ್2015ರ ನಡುವೆ ಕೇವಲ 1.35ಲಕ್ಷ ಹೊಸ ಉದ್ಯೋಗಗಳು ಸೇರ್ಪಡೆಯಾದವು.

**ಅಂದರೆ 2015ರಲ್ಲಿ 68% ದಷ್ಟು ಇಳಿಕೆಯಾಗಿದೆ. ಇದು 'ಒಳ್ಳೆಯ ದಿನಗಳ' ವಾಣಿಜ್ಯ ಮಂತ್ರಿಗಳು ಸಂಸತ್ತಿಗೆ ನೀಡಿರುವ ಮಾಹಿತಿ.**

ಲೇಬರ್ ಬ್ಯುರೊ ಪ್ರತಿ ಮೂರು ತಿಂಗಳಿಗೊಮ್ಮೆ ಶ್ರಮ ಶಕ್ತಿ ಅಂದರೆ ಕಾರ್ಮಿಕರು ಹೆಚ್ಚು ಬೇಕಾಗುವ ವಲಯಗಳು ಮತ್ತು ರಫ್ತು ವಲಯದ ಒಟ್ಟು ಎಂಟು ಉದ್ಯಮಗಲಲ್ಲಿ ಎಷ್ಟು ಉದ್ಯೋಗಗಳು ನಿರ್ಮಾಣಗೊಂಡಿವೆ ಎಂಬುದರ ಅಂದಾಜು ಮಾಡುವ ಮೂಲಕ ಆರ್ಥಿಕ ನಿಧಾನಗತಿ ದೇಶದಲ್ಲಿ ಉದ್ಯೋಗಾವಕಾಶಗಳ ಮೇಲೆ ಎಂತಹ ಪರಿಣಾಮ ಬೀರುತ್ತಿದೆ ಎಂದು ಅಂದಾಜು ಮಾಡಲು ಈ ಸರ್ವೆಯನ್ನು ನಡೆಸುತ್ತದೆ. ರಫ್ತು ವಲಯದಲ್ಲಿ ನಿವ್ವಳ 1.22ಲಕ್ಷ ಉದ್ಯೋಗಗಳು ಸೇರಿವೆ ಎಂದು ವಾಣಿಜ್ಯ ಮಂತ್ರಿಗಳು ತಿಳಿಸಿದ್ದಾರೆ.

ಇಡೀ ಸರಕು ಉತ್ಪಾದನಾ ವಲಯದಲ್ಲಿ ಉದ್ಯೋಗಾವಕಾಶಗಳ ನಿರ್ಮಾಣದ ಅಂದಾಜು ಈ ತ್ರೈಮಾಸಿಕ ಸರ್ವೆಯಲ್ಲಿ ಸೇರಿರುವುದಿಲ್ಲ. ಆದರೂ ಈ ಎಂಟು ವಲಯಗಳಲ್ಲಿ ಐದು, ಅಂದರೆ ಜವಳಿ(ಗಾರ್ಮೆಂಟ್‌ಗಳೂ ಸೇರಿ), ಲೋಹಗಳು, ರತ್ನಗಳು ಮತ್ತು ಆಭರಣ, ವಾಹನಗಳು, ಚರ್ಮ ಮತ್ತು ಕೈಮಗ್ಗ ಸರಕು ತಯಾರಿಕಾ ವಲಯದಲ್ಲೂ ಬರುತ್ತವೆ ಎಂದು ವಾಣಿಜ್ಯ ಮಂತ್ರಿಗಳು ಹೇಳಿದರು.

ಕಾರ್ಮಿಕರು ಹೆಚ್ಚಾಗಿ ಬೇಕಾಗುವ ವಲಯಗಳದ್ದೇ ಈ ಪರಿಸ್ಥಿತಿಯಾದರೆ ಉಳಿದ ವಲಯಗಳಿಂದ ಸೇರಬಹುದಾದ ಹೊಸ ಉದ್ಯೋಗಗಳ ಪ್ರಮಾಣವನ್ನು ಊಹಿಸಬಹುದು. ದೇಶದಲ್ಲಿ ವರ್ಷಕ್ಕೆ 1.3 ಕೋಟಿ ಯುವಜನ ಉದ್ಯೋಗಾಕಾಂಕ್ಷಿಗಳ ಪಟ್ಟಿ ಸೇರುತ್ತಾರೆ. ಕಳೆದ ವರ್ಷವೂ ಸೇರಿದ್ದಾರೆ. ಅಂದರೆ ಅವರಲ್ಲಿ ನೂರರಲ್ಲಿ ಒಬ್ಬರಿಗೋ, ಹೆಚ್ಚೆಂದರೆ ಇಬ್ಬರಿಗೋ ಉದ್ಯೋಗ ಸಿಕ್ಕಿದೆ.

ಕಳೆದ ವಾರ ತಮಿಳುನಾಡಿನಲ್ಲಿ ಒಬ್ಬ 23 ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಂದಿದೆ. ಆತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ)ದಲ್ಲಿ ಶೈಕ್ಷಣಿಕ ಸಾಲ ಮಾಡಿದ್ದ. ಎಸ್‌ಬಿಐ ತಾನು ಕೊಟ್ಟಿರುವ ಶೈಕ್ಷಣಿಕ ಸಾಲ(ಇಟಿಎಲ್)ಗಳನ್ನು ಖಾಸಗಿ ವಲಯದ ರಿಲಯಂಸ್ ಎಆರ್‌ಸಿಗೆ ಮಾರಿದೆಯಂತೆ. ಶಿಕ್ಷಣ ಮುಗಿದರೂ ಉದ್ಯೋಗ ಸಿಗದ್ದರಿಂದ ಈ ವಿದ್ಯಾರ್ಥಿ ಸಾಲ ಮರುಪಾವತಿ ಮಾಡಲಾಗಲಿಲ್ಲ. ಬ್ಯಾಂಕಿನ ಮತ್ತು ರಿಲಯಂಸ್ ಕಿರುಕುಳ ತಾಳಲಾರದೆ, ಆತ ಆತ್ಮಹತ್ಯೆಯ ಮೊರೆ ಹೋಗಿದ್ದಾನೆ ಎಂದು ವರದಿಯಾಗಿದೆ.

**ಜನಸಾಮಾನ್ಯರ ಕೈಗೆಟಕುವ ಗುಣಮಟ್ಟದ ಶಿಕ್ಷಣ ಕೊಡಲಾರದ ಸರಕಾರ ಶೈಕ್ಷಣಿಕ ಸಾಲಗಳ ಸೌಲಭ್ಯ ಕೊಡಿಸುತ್ತಿರುವುದೇ ತನ್ನ 'ಸಾಧನೆ' ಎನ್ನುವಂತೆ ಡಂಗುರ ಸಾರುತ್ತಿದೆ. ಆದರೆ ಈಗ ಉದ್ಯೋಗವನ್ನು ಕೊಡುವಲ್ಲಿಯೂ ವಿಫಲವಾಗಿ ಆ ಸೌಲಭ್ಯವೇ ನೇಣಾಗುವಂತೆ ಮಾಡಿದೆ.**

# ಪ್ರದರ್ಶನ ಗೊಂಬೆಗಳೂ ಆಗದ 'ಆದರ್ಶ ಗ್ರಾಮ'ಗಳ ಯೋಜನೆ

'ಸಾಂಸದ್ ಆದರ್ಶ ಗ್ರಾಮ ಯೋಜನಾ' ಪ್ರಸಕ್ತ ಘೋಷಣೆಗಳ ಪರ್ವದ ಒಂದು ಪ್ರಮುಖ ಘೋಷಣೆ. 'ಅಭಿವೃದ್ಧಿ ಪುರುಷ'ನ ಪ್ರಿಯ ಪ್ರದರ್ಶನ ಸ್ಕೀಮುಗಳಲ್ಲಿ ಒಂದು. ಪ್ರತಿ ಸಂಸದೀಯ ಕ್ಷೇತ್ರದಲ್ಲಿ ಕನಿಷ್ಟ ಮೂರು ಗ್ರಾಮಗಳನ್ನು 'ಆದರ್ಶ ಗ್ರಾಮ'ಗಳಾಗಿ ಬೆಳೆಸುವುದು ಇದರ ಘೋಷಿತ ಗುರಿ.


ಅಕ್ಟೋಬರ್ 2014ರಲ್ಲಿ ಜಯಪ್ರಕಾಶ ನಾರಾಯಣ್ ಅವರ ಜನ್ಮ ದಿನದಂದು ಈ ಯೋಜನೆಯ ಘೋಷಣೆಯಾದ ಕೂಡಲೇ 795 ಆಳುವ ಮತ್ತು ಪ್ರತಿಪಕ್ಷಗಳ ಸಂಸದರಲ್ಲಿ 701 ಮಂದಿ 2ವರ್ಷಗಳಲ್ಲಿ ಅಭಿವೃದ್ಧಿ ಪಡಿಇಸಲು ಒಂದೊಂದು ಗ್ರಾಮವನ್ನು ದತ್ತು ತೆಗೆದು–ಕೊಂಡರೆಂದು ವರದಿಯಾಗಿತ್ತು. ಈಗ ಎರಡು ವರ್ಷಗಳಾಗುತ್ತಿರುವಾಗ ಈ ಯೋಜನೆಯ ಬಗ್ಗೆ ಯಾವುದೇ ಉತ್ಸಾಹ ಉಳಿದಿಲ್ಲ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.(ಸ್ಕ್ರೋಲ್.ಇನ್, ಜುಲೈ25)

ಈಗ ಎರಡನೇ ಕಂತಿನ 'ಆದರ್ಶ ಗ್ರಾಮ'ಗಳ ಆಯ್ಕೆಯಾಗಬೇಕಾಗಿದೆ. ಆದರೆ ಇದುವರೆಗೆ 795ರಲ್ಲಿ 100ಮಂದಿ ಮಾತ್ರ ಇದಕ್ಕೆ ಮುಂದೆ ಬಂದಿದ್ದಾರೆ.

ಬಿಜೆಪಿಯ 278 ಸಂಸದರಲ್ಲಿ ಕೇವಲ 53 ಮಂದಿ ಈ ಬಗ್ಗೆ ಉತ್ಸುಕತೆ ತೋರಿದ್ದಾರೆ ಎಂದು ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಮಾಹಿತಿಗಳು ಹೇಳುತ್ತವೆಯಂತೆ. ಇದುವರೆಗೆ ಉತ್ಸುಕತೆ ತೋರದವರಲ್ಲಿ ಮಂತ್ರಿಗಳೂ ಇದ್ದಾರೆ; ಹಣಕಾಸು ಮಂತ್ರಿ, ರಸ್ತೆ ಸಾರಿಗೆ ಮಂತ್ರಿ, ಆಹಾರ ಸಂಸ್ಕರಣಾ ಮಂತ್ರಿ, ಬುಡಕಟ್ಟು ವ್ಯವಹಾರಗಳ ಮಂತ್ರಿ, ಮತ್ತು ಸ್ವತಃ ಗ್ರಾಮೀಣಾಭಿವೃದ್ಧಿ ಮಂತ್ರಿ ಕೂಡ ಇದ್ದಾರೆ ಎನ್ನಲಾಗಿದೆ.

ಈ ನಿರಾಸಕ್ತಿಗೆ ಸಾಕಷ್ಟು ನಿಧಿಯ ಕೊರತೆಯೇ ಕಾರಣ ಎಂದು ಆಳುವ ಪಕ್ಷದ ಸದಸ್ಯರೂ ಹೇಳಿರುವುದಾಗಿ ಸ್ಕ್ರೋಲ್.ಇನ್ ವರದಿ ಮಾಡಿದೆ. ಪ್ರತಿಪಕ್ಷಗಳ ಸದಸ್ಯರು ಮೊದಲ ಹಂತದಲ್ಲಿ ತಾವು ಆರಿಸಿದ ಗ್ರಾಮಗಳಲ್ಲಿ ಹೇಳಿಕೊಳ್ಳಬಹುದೇನನ್ನೂ ಮಾಡುವುದು ಸಾಧ್ಯವಾಗಿಲ್ಲ, ಆದ್ದರಿಂದ ಎರಡನೇ ಗ್ರಾಮವನ್ನು ಆರಿಸಿಕೊಳ್ಳುವುದು ವ್ಯರ್ಥ ಎಂದು ಭಾವಿಸುತ್ತಿದ್ದಾರೆ. ಇದು ಕಣ್ಣೊರೆಸುವ, ಕೇವಲ ಪ್ರಚಾರಕ್ಕಾಗಿ ಇರುವ ಸ್ಕೀಮ್ ಎಂದು ಅವರು ಹೇಳುತ್ತಿದ್ದಾರೆ.

'ಮಾದರಿ ಗ್ರಾಮ'ವೆಂದರೆ ಮೂಲರಚನೆಗಳು ಮತ್ತು ಮಹಾತ್ಮ ಗಾಂಧಿಯವರ ಮೌಲ್ಯಗಳು ಮೂರ್ತಿವೆತ್ತ ಗ್ರಾಮವಂತೆ. ಅಂದರೆ ಅಲ್ಲಿ ಸಾಮಾಜಿಕ ನ್ಯಾಯ, ಸ್ವಚ್ಛತೆ, ಶಾಂತಿ, ಸಾಮರಸ್ಯ, ಪರಸ್ಪರ ಸಹಕಾರ, ಸ್ವಾವಲಂಬನೆ ಇದ್ದು ಅವು ಇತರ ಗ್ರಾಮಗಳಿಗೆ ಮಾದರಿಯಾಗಬೆಕು, ಇದರಲ್ಲಿ ಅಲ್ಲಿಯ ಸಂಸದರೂ 'ಮಾದರಿ'ಗಳಾಗಬೇಕು! ಆದರೆ ದಾದ್ರಿಗಳು, ಲಾತೇಹಾರ್‌ಗಳು, ಉನಾಗಳನ್ನು 'ಅಭಿವೃದ್ಧಿ' ಪಡಿಸಿರುವ ಮಾದರಿಗಳೇ ಬೇರೆ. ಜತೆಗೆ ಈ ಬಗ್ಗೆ ಪ್ರಧಾನಿಗಳ ಸತತ ದಿವ್ಯ ಮೌನವನ್ನು ಕಾಣುತ್ತಿರುವಾಗ ಇವು ಪ್ರದರ್ಶನ ಗೊಂಬೆಗಳಾಗುವುದೂ ಸಾಧ್ಯವಿಲ್ಲ ಎಂದು ನಂಬಲು ಬಹಳೇನೂ ಸಂಶೋಧನೆ ಬೇಕಿಲ್ಲ.



ವ್ಯಂಗ್ಯ ಚಿತ್ರ: ಪಿ.ಮಹಮ್ಮದ್, ವಿಜಯ ಕರ್ನಾಟಕ

## ಮತ್ತೊಂದು 'ಚಮಚಾ' ನೇಮಕ?


ಭಾರತ ಪುರಾತತ್ವ ಸರ್ವೆ(ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ–ಎಎಸ್‌ಐ)ಯ ನಿವೃತ್ತ ಅಧಿಕಾರಿ ಡಾ.ಬುದ್ಧ ರಶ್ಮಿ ಮಣಿಯವರನ್ನು ರಾಷ್ಟ್ರೀಯ ಸಂಗ್ರಹಾಲಯ(ನ್ಯಾಶನಲ್ ಮ್ಯೂಸಿಯಂ)ದ ಮಹಾನಿರ್ದೇಶಕರಾಗಿ ನೇಮಕ ಮಾಡಲಾಗಿದೆ.

ಇವರು ಕಳೆದ ವರ್ಷ ಎಎಸ್‌ಐನ ಹೆಚ್ಚುವರಿ ಮಹಾ ನಿರ್ದೇಶಕ(ಎಡಿಜಿ)ರಾಗಿ ನಿವೃತ್ತರಾಗಿದ್ದರು. ಆದರೆ ಅವರ ಈ ಉನ್ನತ ಹುದ್ದೆಯ ನೇಮಕಕ್ಕೆ ಅದು ಮುಖ್ಯ ಅರ್ಹತೆಯೇನಲ್ಲ ಎನ್ನಲಾಗುತ್ತಿದೆ. 2003ರಲ್ಲಿ ಬಾಬ್ರಿ ಮಸೀದಿ ಧ್ವಂಸದ ವಿರುದ್ಧ ಅರ್ಜಿಗಳ ವಿಚಾರಣೆಯ ವೇಳೆಯಲ್ಲಿ ಅಲಹಾಬಾದ್ ಹೈಕೋರ್ಟ್ ರಾಮದೇವಸ್ಥಾನವನ್ನು ಕೆಡವಿ ಬಾಬ್ರಿ ಮಸೀದಿ ಕಟ್ಟಲಾಗಿದೆ ಎಂಬ ವಾದವನ್ನು ಪರೀಕ್ಷಿಸಲು ಮಸೀದಿ ಕೆಡವಿದ ಜಾಗದಲ್ಲಿ ಉತ್ಖನನ ನಡೆಸಿ ಒಂದು ತಿಂಗಳೊಳಗೆ ವರದಿ ಸಲ್ಲಿಸುವಂತೆ ಆದೇಶಿಸಿತ್ತು. ಆ ಕೆಲಸದ ಉಸ್ತುವಾರಿಯನ್ನು ಇವರಿಗೆ ಒಪ್ಪಿಸಲಾಗಿತ್ತು. ಆದರೆ ಎರಡು ತಿಂಗಳ ನಂತರ ಹೈಕೋರ್ಟ್ ಅವರನ್ನು ಆ ಸ್ಥಾನದಿಂದ ತೆಗೆದು ಬೇರೊಬ್ಬರನ್ನು ನೇಮಿಸಿತು. ಅದುವರೆಗೆ ಅಗೆದದ್ದರಿಂದಲೇ ದೇವಸ್ಥಾನ ಇದ್ದ ಕುರುಹು ದೊರೆತದ್ದರಿಂದ ಮುಂದೆ ಅಗೆಯುವ ಅಗತ್ಯವಿಲ್ಲ ಎಂದು ನಿರಾಕರಿಸಿದ್ದೇ ಅದಕ್ಕೆ ಕಾರಣ ಎಂದು ಡಾ.ಮಣಿ ಹೇಳುತ್ತಾರೆ.

ಆದರೆ ಅದು ನಿಜವಲ್ಲ ಎನ್ನುತ್ತಾರೆ ಇನ್ನೊಬ್ಬ ಪುರಾತತ್ವ ತಜ್ಞರಾದ ಡಾ.ಸುಪ್ರಿಯಾ ವರ್ಮ. ಅವರನ್ನು ಹೈಕೋರ್ಟ್ ಉತ್ಖನನ ಪ್ರಕ್ರಿಯೆಯ ಮೇಲೆ ಕಣ್ಣಿಡಲು ನೇಮಿಸಿತ್ತು. ಅವರ ಕೆಲಸದ ಸ್ವರೂಪದ ಬಗ್ಗೆ ದೂರುಗಳು ಬಂದದ್ದರಿಂದ ಅವರನ್ನು ಆ ಕೆಲಸದಿಂದ ತೆಗೆಯಲಾಯಿತು ಎಂದು ಅವರು ಹೇಳುತ್ತಾರೆ. ಉತ್ಖನನ ತಂಡ ಪ್ರಾಣಿಗಳ ಎಲುಬುಗಳು ಮತ್ತು ಹೊಳಪಿನ ಮಡಕೆಯ ಪುರಾವೆಗಳನ್ನು ಕಂಡು ಹಿಡಿದಿದ್ದವು. ಅವು ಮುಸ್ಲಿಂ ವಸತಿಯ ಕುರುಹುಗಳು. ಮಣಿಯವರು ಅವನ್ನೆಲ್ಲ ಎಸೆದು ಬಿಡಲು ಕೂಲಿಕಾರರಿಗೆ ನಿರ್ದೇಶನ ನೀಡಿದ್ದರಂತೆ! ಕೊನೆಗೂ ಎಎಸ್‌ಐ ಹೈಕೋರ್ಟಿಗೆ ಕೊಟ್ಟ ವರದಿ ವಿವಾದಾತ್ಮಕವೇ ಆಗಿತ್ತು. ಸಂಘಪರಿವಾರ ಅದನ್ನು ಸ್ವಾಗತಿಸಿದರೆ, ಪುರಾತತ್ವ ಶಾಸ್ತ್ರಜ್ಞರೂ ಸೇರಿದಂತೆ ಇತರರು ಆ ವರದಿ ಬಗ್ಗೆ ಮಾತ್ರವಲ್ಲ, ಅವಸರದ ಉತ್ಖನನದ ಬಗ್ಗೆಯೇ ಸಂದೇಹ ವ್ಯಕ್ತಪಡಿಸಿದ್ದರು.

ಅಂತೂ 'ಒಳ್ಳೆಯ ದಿನ'ಗಳಿಗೆ ತಕ್ಕುದಾದ ಮತ್ತೊಂದು ನೇಮಕ!

ಕಳೆದ ವರ್ಷ ಈ ಸಂಸ್ಥೆಯ ಮಹಾನಿರ್ದೇಶಕರಾಗಿದ್ದ ವೇಣು ವಾಸುದೇವನ್ ಅವರನ್ನು ಅವರ ಮೂರು ವರ್ಷಗಳ ಅವಧಿ ಮುಗಿಯುವ ಮೊದಲೇ ಕ್ರೀಡಾ ಮಂತ್ರಾಲಯಕ್ಕೆ ವರ್ಗ ಮಾಡಲಾಯಿತು. ಕಲಾ ಸಮುದಾಯ ಇದನ್ನು ಬಲವಾಗಿ ಪ್ರತಿಭಟಿಸಿ ರಾಷ್ಟ್ರಪತಿಗಳಿಗೆ ಮನವಿಯನ್ನೂ ಸಲ್ಲಿಸಿತ್ತು.




# 'ವ್ಯಾಪಾರದಲ್ಲಿ ಸುಗಮತೆ'ಗೆ ಆದ್ಯತೆಅಜೆಂಡಾದಲ್ಲಿದೆ 'ಕೂಲಿ ಪಡೆಯುವಲ್ಲಿ ಸುಗಮತೆ' ಅಜೆಂಡಾದಲ್ಲೇ ಇಲ್ಲ

ಮೋದಿ ಸರಕಾರ ಬಂದ ಮೇಲೆ 'ವ್ಯಾಪಾರ ಮಾಡುವಲ್ಲಿ ಸುಗಮತೆ' ಬಹಳಷ್ಟು ಹೆಚ್ಚಿದೆ ಎಂದು ಸರಕಾರದ ವಕ್ತಾರರು ಹೇಳಿಕೊಳ್ಳುತ್ತಿದ್ದಾರೆ, ಕಾರ್ಪೊರೇಟ್‌ಗಳ ವಕ್ತಾರರೂ ಆಗಾಗ ಏಳುವ ಒಡಕು ದನಿಗಳ ನಡುವೆಯೂ ದನಿಗೂಡಿಸುತ್ತಿದ್ದಾರೆ, ಆದರೆ ಅದೇ ಸರಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಜುಲೈ 25ರಂದು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಮಾಡಿದ ಬಡ ಕೂಲಿಗಾರರಿಗೆ ಕೂಲಿ ಕೊಡುವಲ್ಲಿ ಬಹಳಷ್ಟು ವಿಳಂಬವಾಗುತ್ತಿದೆ ಎಂದು ಸಂಸತ್ತಿನಲ್ಲಿ ಲಿಖಿತ ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ.

ಮನರೇಗ ಕಾನೂನಿನ ಪ್ರಕಾರ ಕೂಲಿ ಮಾಡಿದ 15 ದಿನಗಳೊಳಗೆ ಕೂಲಿ ಹಣ ಪಾವತಿಯಾಗಬೇಕು, ಇಲ್ಲವಾದರೆ ದಿನಕ್ಕೆ 0.05ಶೇ. ಪರಿಹಾರ ನೀಡಬೇಕು. **ಸರಾಸರಿಯಾಗಿ ಇಡೀ ದೇಶದಲ್ಲಿ 62.42ಶೇ. ಕೂಲಿಗಾರರು ತಾವು ಮಾಡಿದ ಕೆಲಸಕ್ಕೆ 15 ದಿನಗಳಾದರೂ ಕೂಲಿ ಪಡೆಯವುದಿಲ್ಲ ಎಂದು ಮಂತ್ರಿಗಳ ಉತ್ತರ ಹೇಳುತ್ತದೆ.** ಮೇಘಾಲಯದಲ್ಲಿ 99.23ಶೇ. ಮತ್ತು ಛತ್ತೀಸ್‌ಗಡದಲ್ಲಿ 92.26ಶೇ. ಕೂಲಿಕಾರರಿಗೆ ಕೂಲಿ ಪಡೆಯುವಲ್ಲಿ ವಿಳಂಬವಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ವಿಳಂಬಕ್ಕೆ ಮುಖ್ಯ ಕಾರಣ ಜಾರಿಯಲ್ಲಿನ ತೊಂದರೆಗಳು ಮತ್ತು ಬ್ಯಾಂಕಿಂಗ್ ಮೂಲರಚನೆಯ ಅಭಾವ ಎಂದು ಹೇಳಿದ ಅವರು ವಿಳಂಬಕ್ಕೆ ಪರಿಹಾರ ಕೂಲಿಯನ್ನು ಪಾವತಿ ಮಾಡುವಾಗ ತಂತಾನೇ ಸೇರುತ್ತದೆ, ಜುಲೈ 21ರ ವರೆಗೆ ಒಟ್ಟು 3.34 ಕೋಟಿ ರೂ.ಗಳನ್ನು ಹೀಗೆ ಪರಿಹಾರವಾಗಿ ನೀಡಲಾಗಿದೆ ಎಂದಿದ್ದಾರೆ. ಆದರೆ ವಿಳಂಬವನ್ನು ನಿವಾರಿಸುವ ಬಗ್ಗೆ ಏನೂ ಹೇಳಿಲ್ಲ.

# 'ಗೋರಕ್ಷಕ' ಪಡೆಗಳ ಮತ್ತೊಂದು ದಾಳಿ ಈ ಬಾರಿ ಇಬ್ಬರು ಮಹಿಳೆಯರ ಮೇಲೆ

'ಗೋರಕ್ಷಣೆಯ ಹೆಸರಲ್ಲಿ ಒಳ್ಳೆಯ ದಿನ'ಗಳ ಮಾದರಿ ರಾಜ್ಯದಲ್ಲಿ ನಡೆದ ಅಮಾನುಷ ಕೃತ್ಯದ ವಿರುದ್ಧ ದೇಶಾದ್ಯಂತ ಆಕ್ರೋಶ ವ್ಯಕ್ತವಾದರೂ ಪ್ರಧಾನ ಮಂತ್ರಿಗಳು ದಿವ್ಯ ಮೌನದ ನಡುವೆ 'ಗೋರಕ್ಷಕ' ಪಡೆಗಳ ದಾಳಿಗಳು ಮುಂದುವರೆಯುತ್ತಿವೆ.

ಮತ್ತೊಂದು ಬಿಜೆಪಿ ಆಳ್ವಿಕೆಯ ರಾಜ್ಯ ಮಧ್ಯಪ್ರದೇಶದ ಮಂದಸೌರ್‌ನಲ್ಲಿ ಇಬ್ಬರು ಮುಸ್ಲಿಂ ಮಹಿಳೆಯರು ಗೋಮಾಂಸ ಒಯ್ಯುತ್ತಿದ್ದಾರೆ ಎಂಬ 'ಸುದ್ದಿ' ಪೋಲೀಸರಿಗೆ ಬಂದಿತಂತೆ. ಅವರು ಆ ಮಹಿಳೆಯರನ್ನು ಬಂಧಿಸಲು ರೈಲ್ವೆ ನಿಲ್ದಾಣಕ್ಕೆ ತಲುಪುವ ಮೊದಲೇ ಆ ಇಬ್ಬರು ಮಹಿಳೆಯರ ಮೇಲೆ 'ಗೋರಕ್ಷಕ' ಪಡೆಗಳವರು ಸಾರ್ವಜನಿಕವಾಗಿಯೇ ಹಲ್ಲೆ ನಡೆಸಿದರು. 'ಗೋಮಾತಾಕೀ ಜೈ' ಎಂಬ ಘೋಷಣೆಗಳ ನಡುವೆ ಆ ಮಹಿಳೆಯರನ್ನು ಎಳೆದಾಡಿ, ಬೈದು ನೆಲಕ್ಕೆ ಬೀಳಿಸುವ ವರೆಗೂ ಹೆಚ್ಚಿನವರು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರೆ, ಕೆಲವರು ಅದರ ಮೊಬೈಲ್ ಚಿತ್ರೀಕರಣದಲ್ಲಿ ಮಗ್ನರಾದರು, ಇನ್ನು ಕೆಲವರಂತೂ ತಾವೂ ಹಲ್ಲೆಯಲ್ಲಿ ಭಾಗಿಯಾದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಆ ವೇಳೆಗಾಗಲೇ ಪೋಲೀಸರು ಅಲ್ಲಿಗೆ ಬಂದಿದ್ದರೂ ಮಹಿಳೆಯರನ್ನು ಹಲ್ಲೆಗಳಿಂದ ರಕ್ಷಿಸಲು ಮುಂದಾಗಲಿಲ್ಲ. ನಂತರ 'ಸೂಕ್ತ ಕ್ರಮ' ಕೈಗೊಳ್ಳಲಾಗಿದೆ, ಅಂದರೆ ಆ ಇಬ್ಬರು ಮಹಿಳೆಯರನ್ನು ಬಂಧಿಸಲಾಗಿದೆ, ಆದರೆ ಹಲ್ಲೆಕೋರರನ್ನು ಬಂಧಿಸಲಿಲ್ಲ, ನಿಷ್ಕ್ರಿಯ ಪೋಲಿಸರ ಮೇಲೂ ಕ್ರಮ ಕೈಗೊಂಡಿಲ್ಲ. ಅ ಮಹಿಳೆಯರ ಬಳಿ ಇದ್ದದ್ದು ಗೋಮಾಂಸವಲ್ಲ ಎಂದು ಈಗ ಖಚಿತವಾಗಿದೆಯಂತೆ.



ವ್ಯಂಗ್ಯ ಚಿತ್ರ: ಸಂದೀಪ್ ಅಧ್ವರ್ಯು. ಟೈಮ್ಸ್ ಆಫ್ ಇಂಡಿಯ

# ಐರೋಪ್ಯ ಒಕ್ಕೂಟದ ಬಿಕ್ಕಟ್ಟಿಗೆ ಶ್ರಮಿಕರ ವಲಸೆ ಕಾರಣವಲ್ಲ, 'ಮಿತವ್ಯಯ' ನೀತಿಗಳ ಹೇರಿಕೆ ಕಾರಣ–ಪ್ರೊ. ಪ್ರಭಾತ್ ಪಟ್ನಾಯಕ್




ಕೆ.ಎಂ. ನಾಗರಾಜ

"ಐರೋಪ್ಯ ಒಕ್ಕೂಟದಿಂದ ಹೊರಬರುವಂತೆ (ಬ್ರೆಕ್ಸಿಟ್) ಮತ ಚಲಾಯಿಸಿದ ಇಂಗ್ಲೆಂಡಿನ ಕಾರ್ಮಿಕರನ್ನು ಪ್ರಭಾವಿಸಿದ ಅಂಶ ಶ್ರಮಿಕರ ವಲಸೆಗೆ ಸಂಬಂಧಿಸಿತ್ತೇ ವಿನಹ ಅದು ಯೂರೋಪಿನ ಆರ್ಥಿಕ ಸಮಗ್ರೀಕರಣಕ್ಕೆ ಸಂಬಂಧಿಸಿರಲಿಲ್ಲ. ಒಂದು ವೇಳೆ ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳಲ್ಲಿ ಶ್ರಮಿಕರ ವಲಸೆಗೆ ಅನುಮತಿ ಇರದಿದ್ದರೆ, ಯೂರೋಪಿನ ಆರ್ಥಿಕ ಸಮಗ್ರೀಕರಣ ಸಂಪೂರ್ಣ ಯಶಸ್ವಿಯಾಗುತ್ತಿತ್ತು. ಶ್ರಮಿಕರ ವಲಸೆಗೆ ಅವಕಾಶ ಕೊಡದೆ, ಕೇವಲ ಬಂಡವಾಳ ಮತ್ತು ಸರಕುಗಳ ಮುಕ್ತ ಚಲನೆಗಷ್ಟೇ ಅವಕಾಶ ಸೀಮಿತಗೊಳಿಸಿದ್ದಿದ್ದರೆ ಯೂರೋಪಿನ ಆರ್ಥಿಕ ಸಮನ್ವಯತೆಯ ಪ್ರಯೋಜನವು ಅದರ ಸದಸ್ಯ ದೇಶಗಳಿಗೆ ಲಭಿಸುತ್ತಿತ್ತು" ಎಂಬ ವ್ಯಾಖ್ಯಾನ ಹೆಚ್ಚು ಪ್ರಚಲಿತಗೊಳ್ಳುತ್ತಿದೆ.

ಈಗ ಜಾರಿಯಲ್ಲಿರುವ ಜಾಗತೀಕರಣವು ಕೇವಲ ಬಂಡವಾಳದ ಮತ್ತು ಸರಕುಗಳ ಮುಕ್ತ ಚಲನೆಗಷ್ಟೇ ಸೀಮಿತವಾಗಿದೆ. ಅದರಲ್ಲಿ ಶ್ರಮಿಕರ ಮುಕ್ತ ವಲಸೆ/ಚಲನೆಗೆ ಅವಕಾಶವಿಲ್ಲ. ಇಂತಹ ಜಾಗತೀಕರಣವನ್ನು ಅನುಸರಿಸುತ್ತಿರುವ ದೇಶಗಳಿಗೆ ಪ್ರಯೋಜನವಾಗುತ್ತದೆ. ಆದ್ದರಿಂದ, ಬಂಡವಾಳದ ಮತ್ತು ಸರಕುಗಳ ಮುಕ್ತ ಚಲನೆಗಷ್ಟೇ ಸೀಮಿತವಾಗಿರುವ ಜಾಗತೀಕರಣವು ಜನತೆಗೆ ಕೇಡುಂಟುಮಾಡುತ್ತದೆ ಎಂದು ವಾದಿಸುವುದು ತಪ್ಪು ಎಂಬುದಾಗಿ ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಡಾ. ಸಿ. ರಂಗರಾಜನ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಡಾ. ರಂಗರಾಜನ್‌ರವರ ಈ ವರಸೆಯು, ಜಾಗತೀಕರಣದ ನೀತಿಗಳಿಂದ ಉಂಟಾದ ನಿರುದ್ಯೋಗ, ಆತಂಕ, ಅನಿಶ್ಚಿತತೆ ಮತ್ತು ಅಭದ್ರತೆಗಳಿಂದ ಕೋಪಗೊಂಡಿದ್ದ ಇಂಗ್ಲಿಷ್ ಕಾರ್ಮಿಕ ವರ್ಗದ ಬ್ರೆಕ್ಸಿಟ್ ವೋಟು ಒಂದು ಅಪ್ರಜ್ಞಾಪೂರ್ವಕವಾದ ಬಂಡಾಯ ಎಂಬ ಅಭಿಪ್ರಾಯಕ್ಕೆ ಎದು-ರೇಟು ಕೊಡುವ ಪ್ರಯತ್ನ. ಆದರೆ, ಐರೋಪ್ಯ ಒಕ್ಕೂಟವನ್ನು ಯಾವ ಮೂಲ ಆರ್ಥಿಕ ಸಿದ್ಧಾಂತಗಳ ತಳಹದಿಯ ಮೇಲೆ ಹುಟ್ಟು ಹಾಕಲಾಗಿತ್ತೋ ಅದು ಡಾ.ರಂಗರಾಜನ್ ಹೇಳುವ ಹೇಳುವ ಜಾಗತೀಕರಣವಲ್ಲ, ಅದಕ್ಕೆ ವ್ಯತಿರಿಕ್ತವಾದದ್ದು ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ.

ಅನಿಷ್ಟಗಳಿಗೆ ಶನೀಶ್ವರನೇ ಹೊಣೆ ಎಂಬ ಗಾದೆ ಮಾತಿನಂತೆ, ಯೂರೋಪ್‌ನಲ್ಲಿ ಜಾಗತೀಕರಣವು ಸೃಷ್ಟಿಸಿರುವ ಪ್ರಸಕ್ತ ಬಿಕ್ಕಟ್ಟಿಗೆ ಶ್ರಮಿಕರ ವಲಸೆಯೇ ಕಾರಣ ಎಂದು ಬಿಂಬಿಸಲಾಗುತ್ತಿದೆ. ಆದರೆ, ಬಿಕ್ಕಟ್ಟಿನ ಹಿಂದಿರುವ ಅಂಶಗಳೇ ಬೇರೆ ಎಂಬುದನ್ನು ಪ್ರೊ. ಪಟ್ನಾಯಕ್ ಹೀಗೆ ವಿವರಿಸುತ್ತಾರೆ:

"ಕೇವಲ ಬಂಡವಾಳ ಮತ್ತು ಸರಕುಗಳ ಮುಕ್ತ ಚಲನೆಗಷ್ಟೇ ಸೀಮಿತಗೊಂಡ ಜಾಗತೀಕರಣದಿಂದ ಆರ್ಥಿಕ ಸಮಗ್ರೀಕರಣ ಯಶಸ್ವಿಯಾಗುವುದರಲ್ಲಿ ಕೆಲವು ಅಡೆ ತಡೆಗಳಿವೆ. ಬಂಡವಾಳವು ಒಂದೆಡೆಯಲ್ಲಿ ನೆಲೆಗೊಂಡಾಗ ಅದು ಇತರೆ ಬಂಡವಾಳವನ್ನು ತಾನಿರುವ ಸ್ಥಳಕ್ಕೇ ಸೆಳೆಯಲು ಬಯಸುತ್ತದೆ. ಆದ್ದ-ರಿಂದ, ಬಂಡವಾಳದ ಮತ್ತು ಸರಕುಗಳ ಚಲನೆಗೆ ಮುಕ್ತ ಅವಕಾಶವಿದ್ದಾಗ ಕೆಲವು ಪ್ರದೇಶಗಳು ಅಭಿವೃದ್ಧಿಯಾಗುತ್ತವೆ ಮತ್ತು ಉಳಿದ ಪ್ರದೇಶಗಳು ಹಿಂದುಳಿಯುತ್ತವೆ ಎಂಬ ಸಿದ್ಧಾಂತ(cumulative causation-ಸಂಚಿತ ಕಾರಣ ತತ್ವ)ವನ್ನು ನೊಬೆಲ್ ಪುರಸ್ಕೃತ ಸ್ವೀಡನ್ ದೇಶದ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಗುನ್ನಾರ್‌ಮಿರ್ದಾಲ್, ಬಹಳ ಹಿಂದೆಯೇ ಪ್ರತಿಪಾದಿಸಿದ್ದರು.

ಹಿಂದುಳಿದ ಪ್ರದೇಶದ ಶ್ರಮಿಕರು ಉದ್ಯೋಗ ಅರಸಿ ಅಭಿವೃದ್ಧಿ ಹೊಂದಿದ ಪ್ರದೇಶಕ್ಕೆ ವಲಸೆ ಹೋಗಲು ಅವಕಾಶಗಳಿಲ್ಲದಿದ್ದಾಗ, ಆ ಹಿಂದುಳಿದ ಪ್ರದೇಶದಲ್ಲಿ ಕೂಲಿಯ ಮಟ್ಟ ಇಳಿಯುತ್ತದೆ. ಈ ಕಾರಣದಿಂದ ಆ ಪ್ರದೇಶವು ಅಭಿವೃದ್ಧಿ ಹೊಂದಿದ ಪ್ರದೇಶಗಳಿಂದ ಬಂಡವಾಳ ಆಕರ್ಷಿಸುತ್ತದೆ. ಅಂ-ದರೆ, ಈ ಎರಡು ಪ್ರದೇಶಗಳ ಕೂಲಿಯ ಮಟ್ಟದಲ್ಲಿ ಅಂತರವಿರುತ್ತದೆ. ಈ ಅಂತರವನ್ನು ಉಳಿಸಿಕೊಳ್ಳುವ ಮೂಲಕ 'ಸಂಚಿತ ಕಾರಣ ತತ್ವ'ದ ಪರಿಣಾಮವನ್ನು ತಡೆಯಬಹುದು ಎಂದು ಭಾವಿಸಲಾಗಿತ್ತು. ಆದರೆ, ಈ ಎಣಿಕೆ ಕಾರ್ಯಗತವಾಗಲಿಲ್ಲ. ಏಕೆಂದರೆ, ಕೂಲಿಯ ಮಟ್ಟ ಕೆಳಗಿದೆ ಎಂಬ ಒಂದೇ ಕಾರಣದಿಂದ ಬಂಡವಾಳ ಹರಿಯುವುದಿಲ್ಲ. ಉತ್ಪಾದನೆಯ ಒಟ್ಟು ವೆಚ್ಚದಲ್ಲಿ ಕೂಲಿ ಒಂದು ಬಹಳ ಸಣ್ಣ ಭಾಗವಾಗಿದ್ದರೆ ಅಂತಹ ಸಂದರ್ಭದಲ್ಲಿ ಬಂಡವಾಳವು, ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿರುವ ಮೂಲಸೌಕರ್ಯಗಳ ಪ್ರಯೋಜನಗಳನ್ನು ತೊರೆದು ಹಿಂದುಳಿದ ಪ್ರದೇಶಗಳಿಗೆ ಒಲಿಯುವುದಿಲ್ಲ.

ಅದೇ ರೀತಿಯಲ್ಲಿ, ಹಿಂದುಳಿದ ಪ್ರದೇಶಗಳು ಅಭಿವೃದ್ಧಿ ಹೊಂದುವ ಉದ್ದೇಶದಿಂದ ತಮ್ಮ ರಫ್ತುಗಳನ್ನು ಹೆಚ್ಚಿಸುವ ಸಲುವಾಗಿ ತಮ್ಮ ವಿದೇಶಿ ವಿನಿಮಯದ ಮೌಲ್ಯ ಇಳಿಕೆ ಮಾಡಿದಾಗಲೂ ಪ್ರಯೋಜನವಾಗುವುದಿಲ್ಲ. ಏಕೆಂದರೆ, ಅದು ಹಣದುಬ್ಬರಕ್ಕೆ ಕಾರಣವಾಗುತ್ತದೆ. ಆಗ, ಹಣಕಾಸು ಹೂಡಿಕೆದಾರರಿಗೆ ನಷ್ಟವಾಗುವುದರಿಂದ ಹಣಕಾಸು ಹಿತಾಸಕ್ತಿಗಳು ವಿದೇಶಿ ವಿನಿಮಯದ ಮೌಲ್ಯ ಇಳಿಕೆ ಮಾಡಲು ಬಿಡುವುದಿಲ್ಲ. ಸಾಂದರ್ಭಿಕವಾಗಿ ಹೇಳುವುದಾದರೆ, ತನ್ನ ವಿದೇಶಿ ವ್ಯಾಪಾರದ ಶಿಲ್ಕು ಚುಕ್ತಾ ಮಾಡಲು(ಜಿಡಿಪಿಯ ಶೇ.7 ರಷ್ಟು) ವಿದೇಶಿ ವಿನಿಮಯದ ಕೊರತೆ ಎದುರಿಸುತ್ತಿರುವ ಬ್ರಿಟನ್ ತನ್ನ (ಪೌಂಡ್) ಕರೆನ್ಸಿಯನ್ನು ಅಪಮೌಲ್ಯಗೊಳಿಸಲು ತಯಾರಿಲ್ಲ. ಏಕೆಂದರೆ, ಬ್ರಿಟಿಷ್ ಹಣಕಾಸು ಹಿತಾಸಕ್ತಿಗಳ ಕೇಂದ್ರ ಸ್ಥಾನವಾಗಿರುವ ಲಂಡನ್ ನಗರ ಕರೆನ್ಸಿಯ ಅಪಮೌಲ್ಯವನ್ನು ವಿರೋಧಿಸುತ್ತದೆ.

ಈ ಎಲ್ಲ ಅಡೆ ತಡೆಗಳ ಕಾರಣಗಳಿಂದ ಯೂರೋಪಿನ ಆರ್ಥಿಕ ಸಮಗ್ರೀಕರಣದ ಪ್ರಯತ್ನಗಳು ಯಶಸ್ವಿಯಾಗಿಲ್ಲ. ಅಂದರೆ, ಒಕ್ಕೂಟದ ಸದಸ್ಯ ದೇಶಗಳು, ಹಿಂದುಳಿಯುವ ಭಯ ಭೀತಿಗೊಳಗಾಗಿವೆ. ಇಂತಹ ಅಡೆ ತಡೆಗಳಿಂದ ಹೊರ ಬರಲು ಇರುವ ಒಂದೇ ದಾರಿ ಎಂದರೆ, ಶ್ರಮಿಕರ ವಲಸೆಗೆ ಮುಕ್ತ ಅವಕಾಶ ಕಲ್ಪಿಸುವುದು. ಬಂಡವಾಳವು ಹಿಂದುಳಿದ ಪ್ರದೇಶಗಳಿಗೆ/ದೇಶಗಳಿಗೆ ಹರಿಯದಿದ್ದರೂ, ಹಿಂದುಳಿಕೆಯ ಬೋನಿನಲ್ಲಿ ಸಿಕ್ಕಿಕೊಂಡು ಒದ್ದಾಡುವ ಅಲ್ಲಿನ ಶ್ರಮಿಕರು ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ/ದೇಶಗಳಿಗೆ ವಲಸೆ ಹೋಗುವ ಮೂಲಕ ಬಿಡುಗಡೆ ಪಡೆಯುತ್ತಾರೆ."

ಆದ್ದರಿಂದ, ಶ್ರಮಿಕರ ಮುಕ್ತ ವಲಸೆಯು ಯೂರೋಪಿನ ಆರ್ಥಿಕ ಸಮಗ್ರೀಕರಣದ ಯಶಸ್ಸಿಗೆ ಅನಿವಾರ್ಯವಾಗುತ್ತದೆ ಎಂದು ಪ್ರೊ. ಪಟ್ನಾಯಕ್ ವಿವರಿಸುತ್ತಾರೆ.

ಶ್ರಮಿಕರ ಮುಕ್ತ ವಲಸೆ/ಚಲನೆಗೆ ಅವಕಾಶವಿಲ್ಲದಿದ್ದರೆ, ಸಾರ್ವಭೌಮ ದೇಶಗಳು ಏಕರೂಪದ ಕರೆನ್ಸಿ ಒಕ್ಕೂಟದಲ್ಲಿ ಸೇರಿಕೊಳ್ಳಲು ಒಪ್ಪುವುದಿಲ್ಲ. ಆರ್ಥಿಕ ಏಕೀಕರಣದ ಯಶಸ್ಸಿಗೆ ಶ್ರಮಿಕರ ಮುಕ್ತ ವಲಸೆ ಎಷ್ಟು ಅವಶ್ಯವಾಗಿದೆ ಎಂದರೆ, ಒಂದು ದೇಶದ ಭಾಷಿಕ ಮತ್ತು ಸಾಂಸ್ಕೃತಿಕ ವಿವಿಧತೆಗಳು ಶ್ರಮಿಕರ ಮುಕ್ತ ವಲಸೆಗೆ ಕಠಿಣವಾಗಿವೆಯೇ ಎಂಬ ಅಂಶವನ್ನು ಅರ್ಥಶಾಸ್ತ್ರಜ್ಞರು ಚರ್ಚಿಸುವ ಮಟ್ಟಿಗೆ ಹೋಗಿದೆ. ಪರಿಸ್ಥಿತಿ ಹೀಗಿರುವಾಗ, ಶ್ರಮಿಕರ ಮುಕ್ತ ವಲಸೆ ಇಲ್ಲದಿದ್ದರೆ ಯೂರೋಪಿನ ಆರ್ಥಿಕ ಏಕೀಕರಣವು ಇನ್ನೂ ಹೆಚ್ಚು ಯಶಸ್ವಿಯಾಗುತ್ತಿತ್ತು ಎನ್ನುವ ಅಭಿಪ್ರಾಯವು ಮುಖ್ಯಧಾರೆಯ ಮೂಲ ಆರ್ಥಿಕ ತತ್ವಗಳಿಗೆ ವ್ಯತಿರಿಕ್ತವಾಗಿದೆ. ಈ ಮೂಲ ಆರ್ಥಿಕ ಅಭಿಪ್ರಾಯಗಳನ್ನು ಆಧರಿಸಿಯೇ ಒಕ್ಕೂಟದ ಗಡಿಯೊಳಗಿನ ದೇಶಗಳಲ್ಲಿ ಶ್ರಮಿಕರ ಮುಕ್ತ ವಲಸೆಗೆ ಅವಕಾಶ ಕಲ್ಪಿಸಲಾಗಿತ್ತು ಎಂದು ಪ್ರೊ. ಪಟ್ನಾಯಕ್ ನೆನಪಿಸುತ್ತಾರೆ.

ಐರೋಪ್ಯ ಒಕ್ಕೂಟದ ಯೋಜನೆ ಮತ್ತು ಜಾಗತಿಕ ಬಿಕ್ಕಟ್ಟಿನ ಬಗ್ಗೆ ಪ್ರೊ. ಪಟ್ನಾಯಕ್ ಅವರ ವಿಶ್ಲೇಷಣೆ ಹೀಗಿದೆ:

ಶ್ರಮಿಕರ ಮುಕ್ತ ವಲಸೆಯ ಕಾರಣದಿಂದಾಗಿ ಐರೋಪ್ಯ ಒಕ್ಕೂಟದ ಯೋಜನೆ ಸೋಲುತ್ತಿದೆ ಎಂದು ಬಲ ಪಂಥೀಯರು ವಾದಿಸುತ್ತಿದ್ದಾರೆ. ಅದು ನಿಜವಲ್ಲ. ಈಗಾಗಲೇ ಬ್ರಿಟನ್ ಸೇರಿದಂತೆ ಇಡೀ ಯೂರೋಪ್ ಒಂದು ತೀವ್ರ ಬಿಕ್ಕಟ್ಟಿಗೆ ಒಳಗಾಗಿರುವುದೇ ಒಕ್ಕೂಟ ಯೋಜನೆಯ ಸೋಲಿಗೆ ಕಾರಣ. ಶ್ರಮಿಕರ ವಲಸೆ ಅದಕ್ಕೆ ಕಾರಣವಲ್ಲ. ಏಕೆಂದರೆ, ಜಾಗತೀಕರಣದ ಆಳ್ವಿಕೆಯಲ್ಲಿ ಯೂರೋಪಿನಿಂದ ಅನೇಕ ಚಟುವಟಿಕೆಗಳನ್ನು ಚೀನಾ ಮತ್ತು ಭಾರತದಂತಹ ಕಡಿಮೆ ವೇತನದ ದೇಶಗಳಿಗೆ ವರ್ಗಾಯಿಸಲಾಗಿದೆ. ಅದ-ರಿಂದಾಗಿ ಬ್ರಿಟನ್ ಸೇರಿದಂತೆ ಯೂರೋಪಿನ ದೇಶಗಳ ದುಡಿಯುವ ಜನತೆ ನಿರುದ್ಯೋಗ ಮತ್ತು ಇತರ ಆರ್ಥಿಕ ಸಂಕಷ್ಟಗಳಿಂದ ಬಳಲಿದ್ದ ಪರಿಸ್ಥಿತಿಯಲ್ಲಿ, ಒಕ್ಕೂಟದ ಸಮಸ್ಯೆಗಳ ಭಾರವೂ ಬಿದ್ದಿರುವುದು, ಅವರ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಜಾಗತೀಕರಣವು ಹುಟ್ಟುಹಾಕಿದ ಈ ಬಿಕ್ಕಟ್ಟಿಗೆ ಎರಡು ಸ್ಪಷ್ಟವಾದ ಕಾರಣಗಳಿವೆ ಎಂದು ಪ್ರೊ.ಪಟ್ನಾಯಕ್‌ವಿಶ್ಲೇಷಿಸುತ್ತಾರೆ: ಮೊದಲನೆಯದು, ಅರ್ಥಶಾಸ್ತ್ರಜ್ಞ ಕೀನ್ಸ್‌ರವರು ಪ್ರತಿಪಾದಿಸಿದ್ದ ಆರ್ಥಿಕ ವ್ಯವಹಾರಗಳ ನಿರ್ವಹಣೆಯಲ್ಲಿ (ಅಂದರೆ, ಒಟ್ಟಾ-ರೆ ಬೇಡಿಕೆಯ ನಿರ್ವಹಣೆಯಲ್ಲಿ) ಪ್ರಭುತ್ವವು ಮಧ್ಯೆ ಪ್ರವೇಶಿಸುವುದನ್ನು ಜಾಗತೀಕರಣವು ತಡೆ-ಯುತ್ತದೆ. ತಾನು ಹೇಳಿದ್ದೇ ವೇದವಾಕ್ಯ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವ ಜಾಗತಿಕ ಹಣಕಾಸು ಬಂಡವಾಳವು ಪ್ರಭುತ್ವದ ಕ್ರಿಯಾಶೀಲತೆಯನ್ನು ತನ್ನ ಸ್ವಾರ್ಥಗಳಿಗೆ ಮಾತ್ರ ಬಳಸಿಕೊಳ್ಳುತ್ತದೆ, ಬೇರೆ ವಿಷಯಗಳಿಗೆ ವಿರೋಧಿಸುತ್ತದೆ. ಹಾಗಾಗಿ, ಬಿಕ್ಕಟ್ಟಿಗೆ ಉಳಿದಿರುವ ಒಂದೇ ಮದ್ದು ಎಂದರೆ ಆಸ್ತಿ-ಬೆಲೆಗಳ ಗುಳ್ಳೆಗಳು. ಈ ಗುಳ್ಳೆಗಳು ಬೇಕೆಂದಾಗ ಮೇಲೇಳುವುದಿಲ್ಲ. ಆದುದರಿಂದ ಆರಂಭಾವಸ್ಥೆಯ ಬಿಕ್ಕಟ್ಟು ಪೂರ್ಣ ಪ್ರಮಾಣಕ್ಕೆ ಬೆಳೆಯುತ್ತದೆ, ನಂತರ ಹಾಗೆಯೇ ಉಳಿಯುತ್ತದೆ.


ಎರಡನೆಯದು, ಜಾಗತೀಕರಣವು ಪ್ರಪಂಚದ ಉದ್ದಗಲಕ್ಕೂ ವೇತನಗಳ ನಡುವೆ ಒಂದು ಸಂಬಂಧ ಕಲ್ಪಿಸುತ್ತದೆ(ಆದರೆ, ಅವುಗಳನ್ನು ಸಮಗೊಳಿಸುವುದಿಲ್ಲ) ಮತ್ತು ಮೂರನೆ ಜಗತ್ತಿನಲ್ಲಿರುವ ಶ್ರಮಿಕರ ಬೃಹತ್ ಮೀಸಲು ಪಡೆಯ ಕಾರಣದಿಂದಾಗಿ ವೇತನಗಳು ಒಂದು ಮಿತಿಯ ಒಳಗೇ ಉಳಿಯುತ್ತವೆ. ಶ್ರಮಿಕರ ಉತ್ಪಾದಕತೆ ಹೆಚ್ಚುತ್ತಿರುವ ಸಮಯದಲ್ಲಿ ಅವರ ವೇತನಗಳು ಅದೇ ಪ್ರಮಾಣದಲ್ಲಿ ಏರಿಕೆಯಾಗದೆ, ಹೆಚ್ಚುವರಿ ಮೌಲ್ಯದ ಪಾಲು (share of surplus) ದೇಶಗಳಲ್ಲೂ ಮತ್ತು ವಿಶ್ವ ಮಟ್ಟದಲ್ಲೂ ಬೆಳೆಯುತ್ತದೆ. ಇದು ಅನಗತ್ಯ ಪ್ರಮಾಣದ ಉತ್ಪಾದನೆಗೆ ಕಾರಣವಾಗಿ ಒಂದು ಬಿಕ್ಕಟ್ಟು ನೆಲೆಗೊಳ್ಳುತ್ತದೆ. ನಾವೀಗ ಅಂತಹ ಒಂದು ಬಿಕ್ಕಟ್ಟು ಜರುಗುತ್ತಿರುವ ಕಾಲದಲ್ಲಿದ್ದೇವೆ.

ಈ ಬಿಕ್ಕಟ್ಟು ಕೊನೆಗೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ. ಏಕೆಂದರೆ, ಜಾಗತೀಕರಣದ ಆಳ್ವಿಕೆಯಲ್ಲಿ, ಜಾಗತಿಕ ಹಣಕಾಸು ಬಂಡವಾಳದ ಒತ್ತಡವನ್ನು ಮೀರಿ, ಬೇಡಿಕೆಯನ್ನು ಉತ್ತೇಜಿಸುವ(ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ) ಕ್ರಮ ಕೈಗೊಳ್ಳುವ ಸ್ವಾಯತ್ತತೆ ದೇಶಗಳಿಗಿಲ್ಲ. ಅದೇ ಹೊತ್ತಿನಲ್ಲಿ, ಜಾಗತಿಕ ಹಣಕಾಸು ಬಂಡವಾಳದ ಒತ್ತಡಗಳನ್ನು ತಾತ್ವಿಕವಾಗಿ ಮೀರುವ ತಾಕತ್ತಿರುವ ಮತ್ತು ಬೇಡಿಕೆ ಉತ್ತೇಜಿಸುವ ಕ್ರಮಗಳನ್ನು ಕೈಗೊಳ್ಳುವ ಸಾಮರ್ಥ್ಯದ ವಿಶ್ವಮಟ್ಟದ ಸಂಸ್ಥೆಯಾಗಲಿ ಅಥವಾ ಸರ್ಕಾರವಾಗಲಿ ಅಸ್ತಿತ್ವದಲ್ಲಿಲ್ಲ ಎಂಬ ಸಂಗತಿಯತ್ತ ಪ್ರೊ. ಪಟ್ನಾಯಕ್ ಗಮನ ಸೆಳೆಯುತ್ತಾರೆ.

ಇದೇ ಕಾರಣದಿಂದ, ಕೇವಲ ಇಂಗ್ಲೆಂಡ್ ಅಥವಾ ಯೂರೋಪ್ ಮಾತ್ರವಲ್ಲ, ಇಡೀ ವಿಶ್ವದ ಅರ್ಥವ್ಯವಸ್ಥೆಯೇ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದೆ. ತಮಗೆ ಅತಿ ಸಮೀಪದ ಜಾಗತೀಕರಣ-ರಂಗಭೂಮಿಯಾದ ಐರೋಪ್ಯ ಒಕ್ಕೂಟದಿಂದ ಸಂಬಂಧ ಕಳಚಿಕೊಳ್ಳಲು ಇಂಗ್ಲಿಷ್ ಕಾರ್ಮಿಕ ವರ್ಗದ ಬ್ರೆಕ್ಸಿಟ್ ವೋಟು ಪ್ರಜ್ಞಾಪೂರ್ವಕವಲ್ಲದ ಒಂದು ಬಂಡಾಯವಾಗಿತ್ತು ಹೇಗೆ ಎಂಬುದರ ವಿವರಣೆಯೂ ಈ ಬಿಕ್ಕಟ್ಟಿನಲ್ಲಿದೆ.

ಬೇರೆ ದೇಶಗಳಲ್ಲೂ ಇಂತಹ ಬಂಡಾಯಗಳು ನಡೆಯಲಿವೆ ಎಂದು ಪ್ರೊ. ಪಟ್ನಾಯಕ್ ನಿರೀಕ್ಷಿಸುತ್ತಾರೆ. ಏಕೆಂದರೆ, ಮಿತವ್ಯಯ ನೀತಿಗಳೇ, ಅಂದರೆ ದುಡಿಯುವ ಜನಗಳ ಆದಾಯಗಳನ್ನು ಮಿತಗೊಳಿಸುವುದೇ ಈಗ ಜಾಗತೀಕರಣದ ಪ್ರಧಾನ ಅಂಶವಾಗಿದೆ. ಇಂತಹ ಸನ್ನಿವೇಶದಲ್ಲಿ ಶ್ರಮಿಕರ ಮುಕ್ತ ವಲಸೆಯ ಮೇಲೆ ನಿರ್ಬಂಧ ಹೇರಿದರೆ ಅದರಿಂದ ಅನುಕೂಲವಾಗುತ್ತದೆ ಎಂದು ಭಾವಿಸಿದರೆ, ಅದು ಶ್ರಮಿಕರ ವಲಸೆಯನ್ನು ವಿರೋಧಿಸುವ, ಆದರೆ ಶ್ರಮಿಕರ ಆದಾಯಗಳನ್ನು ಮಿತಗೊಳಿಸುವ 'ಮಿತವ್ಯಯ' ನೀತಿಗಳ ವಿರುದ್ಧ ಸೊಲ್ಲೆತ್ತದ ಯೂರೋಪಿನ ಬಲಪಂಥೀಯ ಶಕ್ತಿಗಳ ವಿಶ್ವದೃಷ್ಟಿಯನ್ನು ಅಂಗೀಕರಿಸಿದಂತಾಗುತ್ತದೆ.

ಶ್ರಮಿಕರ ವಲಸೆಯ ಮೇಲೆ ಅಡೆ ತಡೆಗಳನ್ನು ಹಾಕಿದರೆ, ಅದರಿಂದ ಅವರ ಕಡು ಕಷ್ಟಗಳೇನೂ ಕೊನೆಗೊಳ್ಳುವುದಿಲ್ಲ, ಅವು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗವಾಗುತ್ತವೆ, ಅಷ್ಟೇ. ಹಾಗಾಗಿ, ಶ್ರಮಿಕರ ವಲಸೆಯ ಮೇಲೆ ನಿರ್ಬಂಧ ಹೇರುವ ಒಂದು ದೇಶವು ಐರೋಪ್ಯ ಒಕ್ಕೂಟದಿಂದ ಹೊರಬಂದಾಗಲೂ ಅದರ ಪರಿಸ್ಥಿತಿ ಬದಲಾಗುವುದಿಲ್ಲ. ಪರಿಸ್ಥಿತಿ ಬದಲಾಗಬೇಕಾದರೆ, ಆರ್ಥಿಕದಲ್ಲಿ ಬೇಡಿಕೆ ಹೆಚ್ಚುವಂತಹ ಅಂದರೆ ಜನಸಾಮಾನ್ಯರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವಂತಹ ಉತ್ತೇಜಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ, ಇದರ ಅರ್ಥ 'ಮಿತವ್ಯಯ' ನೀತಿಗಳನ್ನು ಮೆಟ್ಟಿ ನಿಲ್ಲಬೇಕು ಎಂದೇ ಆಗುತ್ತದೆ ಎಂದು ಪ್ರಭಾತ್ ಪಟ್ನಾಯಕ್ ವಿವರಿಸುತ್ತಾರೆ. ●




**ಶ್ರಮಿಕರ ವಲಸೆಯ ಮೇಲೆ ಅಡೆ ತಡೆಗಳನ್ನು ಹಾಕಿದರೆ, ಅದರಿಂದ ಅವರ ಕಡು ಕಷ್ಟಗಳೇನೂ ಕೊನೆಗೊಳ್ಳುವುದಿಲ್ಲ, ಅವು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗವಾಗುತ್ತವೆ, ಅಷ್ಟೇ. ಹಾಗಾಗಿ, ಶ್ರಮಿಕರ ವಲಸೆಯ ಮೇಲೆ ನಿರ್ಬಂಧ ಹೇರುವ ಒಂದು ದೇಶವು ಐರೋಪ್ಯ ಒಕ್ಕೂಟದಿಂದ ಹೊರಬಂದಾಗಲೂ ಅದರ ಪರಿಸ್ಥಿತಿ ಬದಲಾಗುವುದಿಲ್ಲ. ಪರಿಸ್ಥಿತಿ ಬದಲಾಗಬೇಕಾದರೆ, ಆರ್ಥಿಕದಲ್ಲಿ ಬೇಡಿಕೆ ಹೆಚ್ಚುವಂತಹ ಅಂದರೆ ಜನಸಾಮಾನ್ಯರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವಂತಹ ಉತ್ತೇಜಕ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ, ಇದರ ಅರ್ಥ 'ಮಿತವ್ಯಯ' ನೀತಿಗಳನ್ನು ಮೆಟ್ಟಿ ನಿಲ್ಲಬೇಕು**

# ನಿರುದ್ಯೋಗ ಮತ್ತು ಭ್ರಷ್ಟಾಚಾರದ ವಿರುದ್ಧ ಪ್ರಚಾರಾಂದೋಲನ

ನಿರುದ್ಯೋಗ ಮತ್ತು ಭ್ರಷ್ಟಾಚಾರದ ವಿರುದ್ಧ ಜುಲೈ ತಿಂಗಳಲ್ಲಿ ಸಿಪಿಐ(ಎಂ) ಪಕ್ಷವು ಹಮ್ಮಿಕೊಂಡ ರಾಷ್ಟ್ರವ್ಯಾಪಿ ಪ್ರತಿಭಟನಾ ಪ್ರಚಾರಾಂದೋಲನದ ಭಾಗವಾಗಿ ಮಂಗಳೂರು, ಉಡುಪಿ ಮತ್ತು ಬಳ್ಳಾರಿಗಳಿಂದ ಬಂದ ವರದಿಗಳು ಇಲ್ಲಿವೆ:

**ಮಂಗಳೂರು**

ಜುಲೈ 25ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ವತಿಯಿಂದ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಪಕ್ಷದ ಹಿರಿಯ ಮುಂದಾಳು ಕೆ.ಆರ್.ಶ್ರೀಯಾನ್, ಪಕ್ಷದ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ನರೇಂದ್ರ ಮೋದಿಯವರು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬೆಲೆ ಏರಿಕೆಯನ್ನು ತಡೆಗಟ್ಟುತ್ತೇವೆ, ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆ, ವಿದೇಶದಲ್ಲಿರುವ ಕಪ್ಪು ಹಣವನ್ನು ಭಾರತಕ್ಕೆ ವಾಪಸು ತರಿಸಿ, ಪ್ರತಿಯೊಬ್ಬ ಭಾರತೀಯನ ಬ್ಯಾಂಕ್ ಖಾತೆಗೂ ರೂ.15 ಲಕ್ಷ ಹಣ ಜಮೆ ಮಾಡುತ್ತೇವೆ, ಭ್ರಷ್ಟಾಚಾರ ನಿವಾರಿಸುತ್ತೇವೆ ಮೊದಲಾದ ಆಶ್ವಾಸನೆಗಳನ್ನು ಭರ್ಜರಿಯಾಗಿ ನೀಡಿ ಅಧಿಕಾರಕ್ಕೆ ಬಂದವರು, ಕಳೆದ 2 ವರ್ಷಗಳಲ್ಲಿ ಅವೆಲ್ಲಕ್ಕೂ ವ್ಯತಿರಿಕ್ತವಾಗಿ ಅಮೆರಿಕಾ ಹಾಗೂ ಬಂಡವಾಳಶಾಹಿಗಳ ಪರವಾದ ನೀತಿಗಳನ್ನು ಅನುಸರಿಸುತ್ತಿದ್ದಾರೆ ಎಂದು ಕೆ.ಆರ್.ಶ್ರೀಯಾನ್ ವಿವರಿಸಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.




ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಿ.ಲೋಕಯ್ಯ, ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಬಿ.ಎಂ.ಭಟ್, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು. ಪ್ರತಿಭಟನೆಗೂ ಮೊದಲು ಮಂಗಳೂರು ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಕ್ಷದ ಕಾರ್ಯಕರ್ತರು ಮೆರವಣಿಗೆ ನಡೆಸಿದರು.

**ಉಡುಪಿ**

ಉಡುಪಿ ತಾಲೂಕು ಕಚೇರಿ ಎದುರು ಜುಲೈ 25ರಂದು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಪಕ್ಷದ ತಾಲೂಕು ಕಾರ್ಯದರ್ಶಿ ವಿಠಲ ಪೂಜಾರಿ, ಜಿಲ್ಲಾ ಸಮಿತಿ ಸದಸ್ಯ ಪಿ.ವಿಶ್ವನಾಥ ರೈ ಮಾತನಾಡಿದರು. ಸಿಪಿಐ(ಎಂ) ತಾಲೂಕು ಮುಖಂಡರಾದ ಕವಿರಾಜ್, ಕೆ.ಲಕ್ಷ್ಮಣ್, ಉಮೇಶ್ ಕುಂದರ್, ಸುಜಾತ ಶೆಟ್ಟಿ, ನಳಿನಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಡುಪಿ ಜಿಲ್ಲೆಯ ಕುಂದಾಪುರದ ಶಾಸ್ತ್ರಿ ವೃತ್ತದ ಬಳಿ ಕುಂದಾಪುರ ಮತ್ತು ಬೈಂದೂರು ವಲಯ ಸಮಿತಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಶಂಕರ್‌ರವರು ಮಾತನಾಡಿ "ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ನರೇಂದ್ರಮೋದಿ ಸರ್ಕಾರವೂ ಚುನಾವಣೆ ಮುಂಚಿತವಾಗಿ ನೀಡಿರುವ ಭರವಸೆಗಳನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಪ್ರಧಾನಿಗಳು ವಿದೇಶಿ ಪ್ರವಾಸ ಮಾಡಿಕೊಂಡು ದೇಶದ ಜನತೆಯನ್ನು ಮರೆತ್ತಿದ್ದಾರೆ" ಎಂದು ತಿಳಿಸಿದರು.

ಪ್ರತಿಭಟನೆಗೂ ಮುನ್ನ ಕುಂದಾಪುರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಸಾಗಿ ತಹಶೀಲ್ದಾರ್ ಕಛೇರಿ ಬಳಿ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ತಹಶೀಲ್ದಾರ್ ರವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಸಿಪಿಐ(ಎಂ) ಕುಂದಾಪುರ ವಲಯ ಕಾರ್ಯದರ್ಶಿ ಎಚ್.ನರಸಿಂಹ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ್ ಸ್ವಾಗತಿಸಿದರು.

ಪ್ರತಿಭಟನೆಯಲ್ಲಿ ರಾಜೀವ ಪಡುಕೋಣೆ, ಮಹಾಬಲ ವಡೇರಹೋಬಳಿ, ವೆಂಕಟೇಶ ಕೋಣಿ, ಶೀಲಾವತಿ ಪಡುಕೋಣೆ, ನಾಗರತ್ನ ನಾಡ, ಸುಬ್ರಮಣ್ಯ ಆಚಾರ್ ಪಡುಕೋಣೆ, ಸಂತೋಷ ಹೆಮ್ಮಾಡಿ ಉಪಸ್ಥಿತರಿದ್ದರು.

**ಬಳ್ಳಾರಿ**

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನಲ್ಲಿ ಜುಲೈ 25ರಂದು ನಡೆದ ಪ್ರತಿಭಟನೆಯಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಪ್ರತಿಭಟನೆ ನಂತರ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸದರು.

ಬಡತನದ ರೇಖೆಯ ಕೆಳಗೆ ವಾಸಿಸುವವರ ಸಂಖ್ಯೆ ಬೆಳೆಯುತ್ತಿದೆ. ಈಗಲೂ ದೇಶದಲ್ಲಿ ತಲಾ ಆದಾಯ 20 ರೂಗಳಿಗಿಂತ ಕಡಿಮೆ ಇರುವವರ ಸಂಖ್ಯೆ ಶೇ 75 ಕ್ಕಿಂತಲೂ ಹೆಚ್ಚಿದೆ. 3000 ಕ್ಕಿಂತಲೂ ಹೆಚ್ಚಿನ ಜನತೆ ಅಪೌಷ್ಟಿಕತೆಯಿಂದ ಸಾಯುತ್ತಿದ್ದಾರೆ. ರೈತರು ಸಾಲಭಾದೆಯಿಂದ ಅರ್ಧ ಗಂಟೆಗೊಬ್ಬರಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪ್ರತಿ 20 ನಿಮಿಷಕ್ಕೊಬ್ಬ ಮಹಿಳೆ ಮೇಲೆ ಅತ್ಯಾಚಾರ ನಡೆಯುತ್ತಿದೆ. ದಲಿತರ ಮೇಲೆ ಹಾಡುಹಗಲೆ ದೌರ್ಜನ್ಯ ಹೆಚ್ಚುತ್ತಿದೆ. ಅಲ್ಪ ಸಂಖ್ಯಾಂತ ಸಮುದಾಯಕ್ಕೆ ರಕ್ಷಣೆಯೇ ಇಲ್ಲವಾದಂತಹ ಸ್ಥಿತಿ ಒದಗಿದೆ. ಕೋಮುಗಲಭೆಗಳು ಹೆಚ್ಚಾಗುತ್ತಿವೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಬರಗಾಲ, ಪ್ರವಾಹದಿಂದ ಅಲ್ಲಿಯ ಜನರು ತತ್ತರಿಸುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಗೆ ಮೀಸಲಿಡಬೇಕಾದ ಹಣ್ಣದಲ್ಲಿ ಕಡಿತ ಗೊಳಿಸಿರುವುದು ಖಂಡನೀಯ. ಇನ್ನಿತರೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಪ್ರತಿಭಟನೆಯಲ್ಲಿ ಆಗ್ರಹಿಸಲಾಯಿತು.

ಪ್ರತಿಭಟನೆಯಲ್ಲಿ ತಾಲ್ಲೂಕು ಕಾರ್ಯದರ್ಶಿ ಆರ್.ಭಾಸ್ಕರ್‌ರೆಡ್ಡಿ ಮತ್ತು ಸಿಪಿಐ(ಎಂ) ಪಕ್ಷದ ಮುಖಂಡರಾದ ಎ.ಕರುಣಾನಿಧಿ, ಕೆ.ನಾಗರತ್ನಮ್ಮ, ಎಂ.ಜಂಬಯ್ಯನಾಯಕ, ಎಂ.ಗೋಪಾಲ್, ಎನ್.ಯಲ್ಲಾಲಿಂಗ, ಕಲ್ಯಾಣಯ್ಯ, ಬಿಸಾಟಿ ಮಹೇಶ್ ಸೇರಿದಂತೆ ಮುಂತಾದ ಮುಖಂಡರು ಭಾಗವಹಿಸಿದ್ದರು.

# ಮಂಗಳೂರು ಬೀದಿ ಬದಿ ವ್ಯಾಪಾರಿಗಳ ಧರಣಿ ಸತ್ಯಾಗ್ರಹ


– ವಾಸುದೇವ ಉಚ್ಚಿಲ

ಬೀದಿ ಬದಿ ವ್ಯಾಪಾರಿಗಳ ದೀರ್ಘ ಹೋರಾಟದ ಫಲವಾಗಿ ಬೀದಿ ಬದಿ ವ್ಯಾಪಾರಿಗಳ ಹಿತರಕ್ಷಣಾ ಕಾಯಿದೆ ದೇಶದಲ್ಲಿ ಜಾರಿಯಾಗಿದ್ದರೂ, ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾಯ್ದೆಗನುಗುಣವಾದ ಸವಲತ್ತುಗಳನ್ನು ಕಲ್ಪಿಸುವಲ್ಲಿ ಪಾಲಿಕೆ ಆಡಳಿತ ವಿಫಲವಾಗಿದೆ. ಹಿಂದೆ ಬಿಜೆಪಿ ಆಡಳಿತವಿದ್ದಾಗ ಮಂಗಳೂರಿನ ಬೀದಿ ಬದಿ ವ್ಯಾಪಾರಿಗಳ ಮೇಲೆ ಹಲವಾರು ದಾಳಿಗಳು ನಡೆದಾಗ ವ್ಯಾಪಾರಿಗಳು ಸಿಐಟಿಯು ಅಡಿ ಸಂಘ ರಚಿಸಿಕೊಂಡು ಪ್ರತಿರೋಧ ತೋರಿದ ಮೇಲೆ ದಾಳಿ ದಬ್ಬಾಳಿಕೆಗಳು ನಿಲುಗಡೆಯಾದವು.

ಆ ವೇಳೆಗೆ ಅಂದಿನ ಕಾಂಗ್ರೆಸ್ ಪಕ್ಷದ ಪಾಲಿಕೆ ಸದಸ್ಯರು ಬೀದಿ ಬದಿ ವ್ಯಾಪಾರಿಗಳಿಗೆ ಬೆಂಬಲ ನೀಡಿದ್ದರು. ಈಗ ಕಾಂಗ್ರೆಸ್ ಪಕ್ಷ ನಗರ ಪಾಲಿಕೆ ಆಡಳಿತ ಹಿಡಿದಿದೆ. ಕೇಂದ್ರದಲ್ಲಿ ಬೀದಿ ಬದಿ ವ್ಯಾಪಾರಿಗಳ ಪರವಾದ ಕಾಯಿದೆ ಜಾರಿಯಾಗಿದೆ. ಆದಾಗ್ಯೂ ಪಾಲಿಕೆಯಲ್ಲಿ ಬೀದಿ ಬದಿ ವ್ಯಾಪಾರಿಗಳ ಪ್ರತಿನಿಧಿಗಳು ಟೌನ್ ವೆಂಡಿಂಗ್ ಕಮಿಟಿಯ ಸದಸ್ಯರಾಗಿ ನೀಡಿರುವ ಸಲಹೆ ಸೂಚನೆಗಳನ್ನು ಪರಿಗಣಿಸದೆ ಅನ್ಯಾಯ ಮಾಡಲಾಗುತ್ತಿದೆ ಎಂಬುದಾಗಿ ಸಿಐಟಿಯು ಮುಖಂಡರಾದ ವಸಂತ ಆಚಾರಿ ನುಡಿದರು.

ಅವರು ಜುಲೈ 28ರಂದು ಪಾಲಿಕೆ ಎದುರು ಗುರುತು ಚೀಟಿ, ಪರ್ಯಾಯ ವ್ಯವಸ್ಥೆಗಾಗಿ ಆಗ್ರಹಿಸಿ ನಡೆಸಿದ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದರು. ಸತ್ಯಾಗ್ರಹಿಗಳನ್ನು ಉದ್ದೇಶಿಸಿ ದ.ಕ. ಜಿಲ್ಲಾ ಬೀದಿ ಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ವಾಸುದೇವ ಉಚ್ಚಿಲ, ಯೋಗೀಶ್ ಜಪ್ಪಿನಮೊಗರು, ಜಯಂತಿ ಬಿ.ಶೆಟ್ಟಿ, ದಲಿತ ಹಕ್ಕುಗಳ ಸಮಿತಿಯ ಲಿಂಗಪ್ಪ ನಂತೂರು, ಮಂಗಳೂರು ನಗರ ಪಾಲಿಕೆಯ ಸಿಪಿಐ(ಎಂ) ಸದಸ್ಯ ದಯಾನಂದ ಶೆಟ್ಟಿ ಮತ್ತಿತರರು ಮಾತನಾಡಿದರು. ಸಂಘದ ಅಧ್ಯಕ್ಷ ಮಹಮ್ಮದ್ ಮುಸ್ತಾಫ, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಆರ್.ಎಸ್., ಖಜಾಂಚಿ ಅತ್ತಾವುಲ್ಲ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಧರಣಿ ಸತ್ಯಾಗ್ರಹ ಆರಂಭಿಸುವ ಮೊದಲು ಬೀದಿ ಬದಿ ವ್ಯಾಪಾರಿಗಳು ಮಂಗಳೂರು ನಗರದ ಪಿ.ವಿ.ಎಸ್.ವೃತ್ತದಿಂದ ಮಹಾನಗರ ಪಾಲಿಕೆ ಕಚೇರಿವರೆಗೆ ಮೆರವಣಿಗೆ ನಡೆಸಿದರು. 600ಕ್ಕೂ ಹೆಚ್ಚು ಮಂದಿ ಬೀದಿಬದಿ ವ್ಯಾಪಾರಿಗಳು ಧರಣಿಯಲ್ಲಿ ಭಾಗವಹಿಸಿದ್ದರು.




# ಕಟ್ಟಡ ಕಾರ್ಮಿಕರಿಗೆ ವೈದ್ಯಕೀಯ ಸಹಾಯಧನ ವಿತರಣೆ



ಕಟ್ಟಡ ಕಾರ್ಮಿಕರಿಗೆ ಸರಕಾರದ ಕಲ್ಯಾಣ ಮಂಡಳಿಯಿಂದ ಮಂಜೂರಾದ ವೈದ್ಯಕೀಯ ಸಹಾಯಧನ ರೂ. 1,25,000/– ಮಂಜೂರಾದ ಆದೇಶ ಪತ್ರವನ್ನು, ಯಡ್ತರೆ ಗ್ರಾಮದ ಕಟ್ಟಡ ಕಾರ್ಮಿಕ ಸಲ್ಪೋದರ ಫೆರ್ನಾಂಡೀಸ್ ಬಿಯಾರ ಹಾಗೂ ಪಡುವರಿ ಗ್ರಾಮದ ಕಟ್ಟಡ ಕಾರ್ಮಿಕ ರೊಯನ್ ಪ್ರಕಾಶ ನಜರತ್ ಇವರಿಗೆ ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಸುರೇಶ ಕಲ್ಲಾಗರ ಹಸ್ತಾಂತರಿಸಿದರು. ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಷನ್‌ಗೆ (ಅಫಈಖ) ಗೆ ಸಂಯೋಜಿಸಲ್ಪಟ್ಟ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್(ಸಿಐಟಿಯು)ನ ಕುಂದಾಪುರದ ಬೈಂದೂರು ವಲಯ ಸಮಿತಿ ಆಶ್ರಯದಲ್ಲಿ ಜುಲೈ 25ರಂದು ಸಿಐಟಿಯು ಕಛೇರಿ ಸಭಾಂಗಣದಲ್ಲಿ ಜರುಗಿದ ಕಟ್ಟಡ ಕಾರ್ಮಿಕರ ಸಮಾವೇಶದ ಸಮಾರಂಭದಲ್ಲಿ ಇದು ನಡೆಯಿತು.

ಬೈಂದೂರು ವಲಯ ಸಮಿತಿ ಸಿಐಟಿಯು ಅಧ್ಯಕ್ಷ ಗಣೇಶ ತೊಂಡೆಮಕ್ಕಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಟ್ಟಡ ಕಾರ್ಮಿಕ ಸಂಘದ ಮುಖಂಡರಾದ ಗಣಪತಿ ಮೊಗವೀರ ಬೈಂದೂರು, ರೋನಿನಜರತ್ ಪಡುವರಿ, ಉಪ್ಪುಂದ ಮಾಧವ ದೇವಾಡಿಗ, ಶ್ರೀಧರ ಉಪ್ಪುಂದ, ಅಮ್ಮಯ್ಯ ಪೂಜಾರಿ ಬಿಜೂರು, ಗೋವಿಂದ ಪೂಜಾರಿ ತಗ್ಗರ್ಸೆ, ಮಂಜ ಪೂಜಾರಿ ಪಡುವರಿ, ಮಂಜು ಪಡುವರಿ ಉಪಸ್ಥಿತರಿದ್ದರು. ಸಿಐಟಿಯು ಕುಂದಾಪುರ ತಾಲೂಕು ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಕಾರ್ಯಕ್ರಮ ನಿರೂಪಿಸಿದರು.

## ನಾಳಿನ ಕಾರ್ಯಕ್ರಮಗಳು

**ಆಗಸ್ಟ್ 09 :** ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ, ಬೆಂಗಳೂರು.

**ಆಗಸ್ಟ್ 14 :** ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ, ರಾಜಾಜಿನಗರ, ಬೆಂಗಳೂರು.

**ಆಗಸ್ಟ್ 20–21 :** ದುಡಿಯುವ ಮಹಿಳೆಯರ ಸಮನ್ವಯ ಸಮಿತಿ(ಸಿಐಟಿಯು) ರಾಜ್ಯ ಸಮಾವೇಶ, ಮೈಸೂರು.

**ಆಗಸ್ಟ್ 26–28 :** ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ, ಕೋಲಾರ.

**ಸೆಪ್ಟಂಬರ್ 02 :** ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

**ಸಿಐಟಿಯು ಜಿಲ್ಲಾ ಸಮ್ಮೇಳನಗಳು**

| | |
|---|---|
| **ಜುಲೈ 29–30** | : ಕಲಬುರಗಿ ಜಿಲ್ಲೆ |
| **ಜುಲೈ 30–31** | : ಉತ್ತರ ಕನ್ನಡ |
| **ಜುಲೈ 30–31** | : ಚಿತ್ರದುರ್ಗ |
| **ಜುಲೈ 30** | : ಯಾದಗಿರಿ ಜಿಲ್ಲೆ |
| **ಜುಲೈ 31–ಆಗಸ್ಟ್ 01** | : ಕೋಲಾರ ಜಿಲ್ಲೆ |
| **ಆಗಸ್ಟ್ 06–07** | : ಬೆಳಗಾಂ |
| **ಆಗಸ್ಟ್ 6–7** | : ತುಮಕೂರು ಜಿಲ್ಲೆ |
| **ಆಗಸ್ಟ್ 11–12** | : ವಿಜಯಪುರ ಜಿಲ್ಲೆ |
| **ಆಗಸ್ಟ್ 13** | : ಬೀದರ್ ಜಿಲ್ಲೆ |
| **ಆಗಸ್ಟ್ 13–14** | : ಹಾಸನ ಜಿಲ್ಲೆ |

## ಸಾರಿಗೆ ನೌಕರರ ಮುಷ್ಕರ..... ಪುಟ 5 ರಿಂದ

ಹೇರಿತು. ಕೆಲವು ಸಂಘಟನೆಗಳನ್ನು ಹೊರಗಿಟ್ಟು ಘೋಷಣೆ ಮಾಡಿದ್ದನ್ನು ಸಿಐಟಿಯು ತೀವ್ರವಾಗಿ ಪ್ರತಿಭಟಿಸಿತು. ನಂತರ ಮುಖ್ಯಮಂತ್ರಿಯವರ ಬಳಿ ಸಿಐಟಿಯು ಮುಖಂಡರನ್ನು ಕರೆದೊಯ್ದರು. ನಾವು ಮುಖ್ಯಮಂತ್ರಿಯವರಿಗೂ ನಮ್ಮ ವಿರೋಧವನ್ನು ವ್ಯಕ್ತಪಡಿಸಿದೆವು.

**ಕಾರ್ಮಿಕರಿಗಾಗುತ್ತಿದ್ದ ಅನ್ಯಾಯವನ್ನು ತಡೆಗಟ್ಟಿದ ಸಿಐಟಿಯು**

ಆಡಳಿತ ವರ್ಗ ಈ ರೀತಿ ಮಾಡಿದ್ದು ಏಕೆ–ಂದು ಮುಖ್ಯಮಂತ್ರಿಯವರ ಬಳಿ ಗೊತ್ತಾಯಿತು. ವೇತನ ಹೆಚ್ಚಳವನ್ನು ಮೂಲವೇತನಕ್ಕೆ ಬದಲಾಗಿ, ಎಲ್ಲಾ ಭತ್ಯೆಗಳನ್ನು ಒಳಗೊಂಡು ಒಟ್ಟಾರೆ ವೇತನಕ್ಕೆ (ಗ್ರಾಸ್) ನೀಡುತ್ತಿರುವುದಾಗಿ ಅದಕ್ಕೆ ಈಗಾಗಲೇ ಪ್ರತ್ಯೇಕವಾಗಿ ಸಭೆ ನಡೆಸಲಾದ ಸಂಘಟನೆಗಳ ಮುಖಂಡರು ಒಪ್ಪಿರುವುದಾಗಿ ಅಲ್ಲಿ ಆಡಳಿತ ವರ್ಗದ ಅಧಿಕಾರಿಗಳು ತಿಳಿಸಿದರು. ಸಿಐಟಿಯು ಮುಖಂಡರು ಇದನ್ನು ತೀವ್ರವಾಗಿ ವಿರೋಧಿಸಿದೆವು. ಯಾವುದೇ ಹೆಚ್ಚಳವನ್ನು ಮೂಲವೇತನಕ್ಕೇ ನೀಡಬೇಕೆಂದು ನಾವು ಪಟ್ಟು ಹಿಡಿದೆವು. ಇಲ್ಲದಿದ್ದರೆ ಕಾರ್ಮಿಕರಿಗೆ ದೊಡ್ಡ ಮೋಸವಾಗುತ್ತದೆ ಎಂದು ಪ್ರತಿಪಾದಿಸಿದೆವು. ಕೊನೆಗೆ ಮುಖ್ಯಮಂತ್ರಿಯವರು ಒಳ ಒಪ್ಪಂದ ಮಾಡಿಕೊಂಡಿದ್ದ ಸಂಘಟನೆಗಳ ಮುಖಂಡರೊಂದಿಗೆ ಪ್ರತ್ಯೇಕವಾಗಿ ದೀರ್ಘ ಸಭೆ ನಡೆಸಿ ಸಿಐಟಿಯುನ ಪ್ರತಿಪಾದನೆಯನ್ನು ಒಪ್ಪಿಕೊಂಡರು. ಇದರಿಂದಾಗಿ 1.25 ಲಕ್ಷ ಕಾರ್ಮಿಕರಿಗೆ ಆಗುತ್ತಿದ್ದ ದೀರ್ಘಕಾಲಿಕ ಅನ್ಯಾಯವನ್ನು ತಪ್ಪಿಸಿದಂತಾಯಿತು. ಆಡಳಿತ ವರ್ಗ ಕಾರ್ಮಿಕರಿಗೆ ಮಾಡಲು ಹೊರಟಿದ್ದ ಅನ್ಯಾಯವನ್ನು ತಡೆಯಲು ಸಾಧ್ಯವಾಯ್ತು.

**ಮುಷ್ಕರದ ಮುಂದಾಳುಗಳ ವಜಾ**

ಈ ಹಿನ್ನೆಲೆಯಲ್ಲಿ ಸರ್ಕಾರ ವೇತನ ಹೆಚ್ಚಳ ಮಾಡಿದ ಮರುದಿನವೇ ಸಾರಿಗೆ ಆಡಳಿತ ವರ್ಗ ಮುಷ್ಕರದ ಮುಂದಾಳುಗಳನ್ನು ಕೆಲಸದಿಂದ ವಜಾಗೊಳಿಸುವಂತಹ ತೀವ್ರತರವಾದ ಕಿರುಕುಳಗಳಿಗೆ ಮುಂದಾಗಿದೆ. ಇದನ್ನು ಸಿಐಟಿಯು ಫೆಡರೇಷನ್ ತೀವ್ರವಾಗಿ ಖಂಡಿಸುತ್ತದೆ. ಈ ಸದ್ಯ ಸಿಐಟಿಯುನ ಕೆಳಕಂಡ ಮುಖಂಡರನ್ನು ಕೆಲಸದಿಂದ ವಜಾಗೊಳಿಸಿರುವುದು ಗಮನಕ್ಕೆ ಬಂದಿದೆ.

1. ಹೆಚ್.ಎಸ್.ಮಂಜುನಾಥ್, ಸಿಐಟಿಯು ರಾಜ್ಯ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಕೆಎಸ್‌ಆರ್‌ಟಿಸಿ ಕೇಂದ್ರ ವಿಭಾಗದಲ್ಲಿ ಕಿರಿಯ ಸಹಾಯಕ
2. ಆನಂದ, ಸಿಐಟಿಯುನ ಬಿಎಂಟಿಸಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಬಿಎಂಟಿಸಿ 12 ನೇ ಡಿಪೋ ಚಾಲಕ ಕಂ ನಿರ್ವಾಹಕ
3. ವೆಂಕಟೇಶ್ (ಅಪ್ಪು), ಬಿಎಂಟಿಸಿ ಪಶ್ಚಿಮ ವಿಭಾಗದ ಸಿಐಟಿಯುನ ಅಧ್ಯಕ್ಷ ಹಾಗೂ 21 ನೇ ಡಿಪೋ ಚಾಲಕ
4. ಸುರೇಶ್ ಎಂ.ಎಸ್., ಬಿಎಂಟಿಸಿ ದಕ್ಷಿಣ ವಿಭಾಗದ ಸಂಘಟನಾ ಕಾರ್ಯದರ್ಶಿ, ಡಿಪೋ 33ರ ಸಹಾಯಕ ಕುಶಲಕರ್ಮಿ
5. ಸಿದ್ಧರಾಮ ತಿಳಿಹಾಳ, ಸಿಐಟಿಯು ಮುಖಂಡ ಹಾಗೂ ಬಿಎಂಟಿಸಿ 21 ನೇ ಡಿಪೋ ಚಾಲಕ

ಇದಲ್ಲದೆ ಇನ್ನೂ ಹಲವಾರು ಸಿಐಟಿಯು ಮುಖಂಡರನ್ನು ವಜಾಗೊಳಿಸುವ ಅಥವಾ ಅಮಾನತ್ತಿಲ್ಲಿಡುವ ಮತ್ತು ಸುಳ್ಳು ಆಪಾದನಾ ಪತ್ರಗಳನ್ನು ನೀಡಿ ಕಾರ್ಮಿಕರನ್ನು ಬಲಿಪಶು ಮಾಡುವ ಪ್ರಯತ್ನಗಳನ್ನು ಆಡಳಿತ ವರ್ಗ ಮಾಡುತ್ತಿದೆ.

**ಪ್ರಜಾಪ್ರಭುತ್ವ ವಿರೋಧಿ ಆಡಳಿತ ವರ್ಗ**

ಮುಷ್ಕರವನ್ನು ಶೇ.100 ರಷ್ಟು ಯಶಸ್ವಿಗೊಳಿಸಿದ ಕಾರ್ಮಿಕರ ಸಮಸ್ಯೆಗಳನ್ನು ಅತ್ಯಂತ ಸಂವೇದನೆಯಿಂದ ಪ್ರಜಾಪ್ರಭುತ್ವ ರೀತಿಯಲ್ಲಿ ಸೌಹಾರ್ದತಯುತವಾಗಿ ಪರಿಹರಿಸಲು ಆಡಳಿತ ವರ್ಗ ಮುಂದಾಗಬೇಕಿತ್ತು. ಮುಖ್ಯಮಂತ್ರಿಗಳ ಮಧ್ಯಸ್ಥಿಕೆಯಲ್ಲಿ ವೇತನ ಹೆಚ್ಚಳ ಘೋಷಿಸಿದ ಆಡಳಿತ ವರ್ಗ, ಕಾರ್ಮಿಕರು ಮುಷ್ಕರ ನಿಲ್ಲಿಸುವಂತಹ ತಂತ್ರವನ್ನು ಅನುಸರಿಸಿ, ಈಗ ದ್ವೇಷದ ಕಾರ್ಯಾಚರಣೆಗೆ ಮುಂದಾಗಿದೆ. ವೇತನವನ್ನು ಹೊರತುಪಡಿಸಿ ಉಳಿದ ಎಲ್ಲಾ ಬೇಡಿಕೆಗಳ ಬಗ್ಗೆ ಇನ್ನೊಂದು ತಿಂಗಳಲ್ಲಿ ಸಾರಿಗೆ ಸಚಿವರ ನೇತೃತ್ವದಲ್ಲಿ ಚರ್ಚಿಸಿ ಪರಿಹರಿಸುವುದಾಗಿ ಸರ್ಕಾರ ಮತ್ತು ಆಡಳಿತ ವರ್ಗ ಒಪ್ಪಿಕೊಂಡಿತ್ತು. ಇದನ್ನು ಸ್ವತಃ ಮುಖ್ಯಮಂತ್ರಿಗಳೇ ಹೇಳಿದ್ದರು. ಹಾಗಿದ್ದರೂ ಸಹ ಮುಂದಿನ ಮಾತುಕತೆಯ ಪ್ರಜಾಪ್ರಭುತ್ವ ವಾತಾವರಣವನ್ನೇ ಹಾಳು ಮಾಡುವ ರೀತಿಯಲ್ಲಿ ಆಡಳಿತ ವರ್ಗ ಮುಷ್ಕರವನ್ನು ಅಭೂತಪೂರ್ವವಾಗಿ ಮುನ್ನಡೆಸಿದ ಮುಂಖಂಡರನ್ನು ವಜಾ ಮಾಡುವಂತಹ ದ್ವೇಷ ಮತ್ತು ಕಿರುಕುಳದ ನೀತಿಗಳಿಗೆ ಮುಂದಾಗಿರುವುದು ಅತ್ಯಂತ ಖಂಡನೀಯವಾಗಿದೆ.

ಮುಂದಿನ ಮಾತುಕತೆಗಳನ್ನು ನ್ಯಾಯಯುತವಾಗಿ ಮತ್ತು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸಲು ಅನುವಾಗುವಂತೆ ಆಡಳಿತವರ್ಗ ಮತ್ತು ಸರ್ಕಾರ ಕೂಡಲೇ ಈ ವಜಾ ಆದೇಶಗಳನ್ನು ಹಿಂಪಡೆಯಬೇಕೆಂದು ಸಿಐಟಿಯು ಫೆಡರೇಷನ್ ಒತ್ತಾಯಿಸುತ್ತದೆ. ಮಾನ್ಯ ಸಾರಿಗೆ ಸಚಿವರು ಕೂಡಲೇ ಮಧ್ಯಪ್ರವೇಶಿಸಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ. ಕ್ಷುಲ್ಲಕ ಮತ್ತು ಹಳೆಯ ಪ್ರಕರಣಗಳನ್ನು ಮುಂದಿಟ್ಟುಕೊಂಡು ವಜಾದಂತಹ ತೀವ್ರ ಕ್ರಮಗಳನ್ನು ನಿಲ್ಲಿಸದಿದ್ದರೆ ರಾಜ್ಯಾದ್ಯಂತ ತೀವ್ರ ಚಳುವಳಿಯನ್ನು ಎದುರಿಸಬೇಕಾಗುತ್ತದೆಂದು ಸಿಐಟಿಯು ಎಚ್ಚರಿಸುತ್ತದೆ. ■

## ಬೆಂಗಳೂರು ದಕ್ಷಿಣ ಸಿಐಟಿಯು ಸಮ್ಮೇಳನ...... ಪುಟ 16 ರಿಂದ

ಇಂತಹ ಲಾಭಗಳಿಕೆಯ ಪರಿಸ್ಥಿತಿಯಲ್ಲಿಯೂ ರಾಜ್ಯ ಸರ್ಕಾರ ಹೆಚ್ಚಿಸಿದ ರೂ.10,500/– ಕನಿಷ್ಠ ವೇತನಕ್ಕೆ ಹೈಕೋರ್ಟ್‌ನಲ್ಲಿ ತಡೆ ಆಜ್ಞೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಲಾಭಾಂಶವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಕಾರ್ಖಾನೆ ಯೊಳಗಿನ ವಿವಿಧ ಬಿಸಿನೆಸ್ ವಿಭಾಗಗಳನ್ನು ಪ್ರತ್ಯೇಕ ಕಾರ್ಖಾನೆಗಳನ್ನಾಗಿ ಮಾಡುವ ಪ್ರಕ್ರಿಯೆಗಳು ನಡೆದಿವೆ. ಇದರ ವಿರುದ್ಧ ಕಾರ್ಮಿಕರು ಸಹಜವಾಗಿಯೆ ಪ್ರತಿಭಟಿಸುವ, ಪ್ರತಿರೋಧಿಸುವ ಬೆಳವಣಿಗೆಗಳು ನಡೆದಿವೆ. ಕಾರ್ಮಿಕ ಸಂಘಗಳಲ್ಲಿ ವಿಭಜನೆ ಉಂಟಾಗುವ ಐಕ್ಯತೆಗೆ ದಕ್ಕೆ ಬರುವ ಸಾಧ್ಯತೆಗಳು ಇವೆ. ಮೇಲಿನ ಲಾಭದಲ್ಲಿನ ಪಾಲಿನ ಸಂರಕ್ಷಣೆಗಾಗಿ, ಅದನ್ನು ಹೆಚ್ಚಿಸಿಕೊಳ್ಳುವ ಸಲುವಾಗಿಯೆ ಸಂಘ ರಚಿಸದಂತೆ ಶತಯಾಗತಾಯ ತಡೆಯಲಾಗುತ್ತಿದೆ. ಕಾರ್ಮಿಕ ಸಂಘದ ಬದಲು "ವರ್ಕ್ಸ್ ಕಮಿಟಿ" ಮಾಡಲು ಒತ್ತಾಯಿಸಲಾಗುತ್ತಿದೆ.

**ಹೆಚ್ಚುತ್ತಿರುವ ಗುಲಾಮಗಿರಿಯ ಗುತ್ತಿಗೆ ಪದ್ಧತಿ**

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳಲು ನೊಂದಾಯಿಸಿಕೊಳ್ಳುವ ಸಂಸ್ಥೆಗಳು ಹೆಚ್ಚುತ್ತಿವೆ. ಅಂತೆ–ಯೆ ಪರವಾನಗಿ ಪಡೆದ ಗುತ್ತಿಗೆದಾರರ ಸಂಖ್ಯೆಯು ಹೆಚ್ಚುತ್ತಿದೆ. 19 ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವ ಗುತ್ತಿಗೆದಾರರೆಲ್ಲಾ ಪರವಾನಗಿ ಪಡೆಯುವುದು ಶಾಸನ ಬದ್ಧವಾಗಿ ಕಡ್ಡಾಯವಾಗಿದೆ. ಪರವಾನಗಿ ಪಡೆದ ಗುತ್ತಿಗೆದಾರರಡಿ ರಾಜ್ಯದಲ್ಲಿ ಒಟ್ಟು ಕನಿಷ್ಠ 3.24 ಲಕ್ಷ ಗುತ್ತಿಗೆ ಕಾರ್ಮಿಕರು ಇದ್ದಾರೆ ಎಂದು ಅಂದಾಜಿಸಬಹುದು. ವಾಸ್ತವದಲ್ಲಿ ಪರವಾನಗಿ ಪಡೆಯುವುದನ್ನು ತಪ್ಪಿಸಿಕೊಳ್ಳಲು 19 ಕ್ಕಿಂತ ಕಡಿಮೆ ಲೆಕ್ಕ ತೋರಿಸಿ ನೇಮಿಸಿಕೊಂಡಿರುವ ಕಾರ್ಮಿಕರ ಸಂಖ್ಯೆ ಇದಕ್ಕೂ ಹೆಚ್ಚಿದೆ. ಇದರಲ್ಲಿ ಬೆಂಗಳೂರಿನದ್ದೆ ಸಿಂಹಪಾಲು.

**ಹೆಚ್ಚುತ್ತಿರುವ ಅಸಂಘಟಿತರು**

ಹೆಚ್ಚುತ್ತಿರುವ ಗ್ರಾಮಾಂತರ ಪ್ರದೇಶಗಳಲ್ಲಿನ ಕಾರ್ಷಿಕ ಬಿಕ್ಕಟ್ಟು ಕೃಷಿಯಿಂದ ರೈತಾಪಿ ಜನತೆಯನ್ನು ವಿಮುಖರನ್ನಾಗಿಸುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗುತ್ತಿರುವ "ಗ್ರಾಮಾಂತರ ಕಾರ್ಮಿಕರ" ಸಂಖ್ಯೆ ಹೆಚ್ಚುತ್ತಿದೆ. ಅಂತೆಯೆ ನಗರ ಪ್ರದೇಶಕ್ಕೆ ವಲಸೆ ಬಂದಿರುವ ಜನ ಆಟೋ, ಟ್ಯಾಕ್ಸಿ, ಮನೆಕೆಲಸ, ಬೀದಿ ಬದಿ ಮಾರಾಟ, ಕಟ್ಟಡ ಮತ್ತು ಇತರೆ ನಿರ್ಮಾಣ ಮುಂತಾದ ನಗರಗಳಲ್ಲಿನ ಅಸಂಘಟಿತ ಕೆಲಸಗಳಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ.

**ಸಂಘದ ಹಕ್ಕಿಗಾಗಿ ಸಂಘರ್ಷಕ್ಕೆ ಪಣ**

ಸಂಘ ಕಟ್ಟಲು ಬಿಡುವುದಿಲ್ಲ, ಕೆಂಬಾವುಟ ಬಿಡದಿಗೆ ಬರಲು ಬಿಡುವುದಿಲ್ಲ ಎಂಬ ಮಾಲೀಕರ ಗೂಂಡಾಗಿರಿಯ ವಿರುದ್ಧ ಸಮರಧೀರ ಚಳುವಳಿಗೆ ಮುಂದಾಗುವಂತೆ ಸಮ್ಮೇಳನವು ಕರೆ ನೀಡಿತು. ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಕಾರ್ಖಾನೆಗಳಲ್ಲಿ ಸಂಘ ಮಾಡಿದ್ದರಿಂದ 290ಕ್ಕೂ ಹೆಚ್ಚು ಸಂಘದ ಮುಖಂಡರನ್ನು ಸಸ್ಪೆಂಡ್, ಡಿಸ್ಮಿಸ್, ಟರ್ಮಿನೇಟ್ ಮಾಡಲಾಗಿದೆ. ಇದು ಬೆಂಗಳೂರಿನ ಎಲ್ಲ ಕೈಗಾರಿಕೆಗಳಲ್ಲಿ ನಡೆಯುತ್ತಿದೆ. ಬೇರಾವುದೇ ಸಂಘವನ್ನು ಮಾಡಿದರೂ, ಸಿಐಟಿಯು ಮಾತ್ರ ಒಳಬರಬಾರದೆಂದು ಇಡೀ ಮಾಲೀಕ ವರ್ಗ ತೀರ್ಮಾನಿಸಿದೆ. ಇದರ ಭಾಗವಾಗಿಯೇ ಕಾರ್ಮಿಕ ಮುಖಂಡರ ಮೇಲೆ ದಾಳಿಗಳು ನಡೆಯುತ್ತಿವೆ. ಇಂಥ ಎಲ್ಲಾ ದಾಳಿಗಳನ್ನು ಸಮರ್ಥವಾಗಿ ಎದುರಿಸುತ್ತಲೇ ತಲುಪದಿರುವ ಕಾರ್ಮಿಕರನ್ನು ತಲುಪಲು ಆದ್ಯತೆ ನೀಡಬೇಕೆಂದು ಸಮ್ಮೇಳನವು ತೀರ್ಮಾನಿಸಿದೆ. ಹಾಗೆಯೇ ನಗರದಲ್ಲಿ ಅಸಂಘಟಿತ ವಲಯದ ಕಾರ್ಮಿರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದು, ಅಸಂಘಟಿತ ಕಾರ್ಮಿರನ್ನು ಸಂಘಟಿಸಲು ಗಮನ ಕೇಂದ್ರೀಕರಿಸಬೇಕೆಂದು ನಿರ್ಧರಿಸಿದೆ.

ಸಮ್ಮೇಳನವು 33 ಜನರ ನೂತನ ಜಿಲ್ಲಾ ಪದಾಧಿಕಾರಿ ಸಮಿತಿಯನ್ನು, ಹಾಗೂ 81 ಜನರ ಜಿಲ್ಲಾ ಸಮಿತಿ ಆಯ್ಕೆ ಮಾಡಿತು.

ಅಧ್ಯಕ್ಷರು : ಕೆ.ಪ್ರಕಾಶ್
ಪ್ರಧಾನ ಕಾರ್ಯದರ್ಶಿ: ಬಿ.ಎನ್.ಮಂಜುನಾಥ್
ಖಜಾಂಚಿ : ಜೋಮಿ ಜಾರ್ಜ್

**97ರ ನಂತರ ಕೆಂಬಾವುಟ ಎತ್ತಿ ಹಿಡಿದ ಕಾರ್ಮಿಕರು**

1997ರಲ್ಲಿ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಮಿಕರ ಹೋರಾಟ, ಗೋಲಿಬಾರ್ ನಂತರ ಕೆಂಬಾವುಟ ಹಿಡಿಯಲು ಬಿಡುವುದಿಲ್ಲ ಎಂಬ ಮಾಲೀಕರ ಸ್ಥಳೀಯ ಗೂಂಡಾಗಳ ಬೆದರಿಕೆಯನ್ನು ಭೇದಿಸಿ ಜುಲೈ 24 ರಂದು ಎರಡೂವರೆ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಂಪುವಸ್ತ್ರ ಧರಿಸಿ, ಕೆಂಬಾವುಟ ಹಿಡಿದು ಬಿಡದಿ ನಗರದಲ್ಲಿ ಬೃಹತ್ ರ‍್ಯಾಲಿ ನಡೆಸಿದರು. ಈ ಮೂಲಕ ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲೆಯ 11ನೇ ಸಮ್ಮೇಳನಕ್ಕೆ ಸ್ಫೂರ್ತಿಯುತ ಚಾಲನೆ ದೊರಕಿತು. ರ‍್ಯಾಲಿಯು ನಗರದ ರಸ್ತೆಗಳಲ್ಲಿ ಸಂಚರಿಸಿ ರೈತ ಭವನ (ಕಾಂ.ಜಲೀಲ್ ಅಹಮ್ಮದ್ ಸಭಾಂಗಣ) ದಲ್ಲಿ ಸೇರುತ್ತಿದ್ದಂತೆ ಸಿಐಟಿಯು ಜಿಲ್ಲಾ ಅಧ್ಯಕ್ಷ ಎಂ.ರಾಜಣ್ಣ ಧ್ವಜಾರೋಹಣ ನೆರವೇರಿಸಿದರು.

**ಸಂಘಟಿತ ಹೋರಾಟವೇ ಪರಿಹಾರ – ತಪನ್ ಸೇನ್**

ಕೇಂದ್ರ ಸರ್ಕಾರವು ಕಾರ್ಮಿಕ ಕಾನೂನುಗಳನ್ನು ಕಾರ್ಪೊರೇಟ್ ಬಂಡವಾಳದ ಪರ ತಿದ್ದುಪಡಿ ಮಾಡುತ್ತಿರುವ ಪರಿಣಾಮ ಕಾರ್ಮಿಕರನ್ನು ಬಹುರಾಷ್ಟ್ರೀಯ ಬಂಡವಾಳದ ಗುಲಾಮರನ್ನಾಗಿಸಲು ಮುಂದಾಗಿದೆ ಎಂದು ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯ ತಪನ್ ಸೇನ್ ಆರೋಪಿಸಿದರು. ಸಮ್ಮೇಳನದ ಅಂಗವಾಗಿ ಆಯೋಜಿಸಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಮುಂದುವರಿದು ಮೋದಿ ಸರ್ಕಾರ ರಾಷ್ಟ್ರದ ಸಂಪತ್ತನ್ನು ಖಾಸಗಿ ಬಂಡವಾಳಕ್ಕೆ ಧಾರೆ ಎರೆ–ಯುತ್ತಿದೆ. ಇದರ ಪರಿಣಾಮವಾಗಿ ಭದ್ರಾವತಿಯ ಉಕ್ಕಿನ ಕಾರ್ಖಾನೆಯನ್ನು ಖಾಸಗೀಕರಿಸಲು ಅದು ಮುಂದಾಗಿದೆ. ಸರ್ಕಾರ ಇಂಥ ನೀತಿಗಳನ್ನು ಹಿಮ್ಮೆಟ್ಟಿಸಲು ಸಂಘಟಿತ ಹೋರಾಟ ಮಾತ್ರವೇ ಪರಿಹಾರವಾಗಿದೆ. ಸೆಪ್ಟಂಬರ್ 2ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಬೇಕು. ಅದರಲ್ಲಿ ಎಲ್ಲ ವಿಭಾಗದ ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಸೇರಿ ಮೋದಿಗೆ ಉತ್ತರ ನೀಡಬೇಕೆಂದು ಕರೆ ನೀಡಿದರು.

ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯಾಧ್ಯಕ್ಷ ವಿಜೆಕೆ ನಾಯರ್, ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಮತ್ತಿತರರು ಮಾತನಾಡಿದರು. ಎಸ್.ಆರ್.ದೀಪಕ್ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಮುಖಂಡ ಬಿ.ವಿ.ರಾಘವೇಂದ್ರ ಕಾರ್ಯಕ್ರಮ ನಿರೂಪಿಸಿದರು. ಸ್ವಾಮಿರಾಜ್ ಸ್ವಾಗತಿಸಿ, ಟಿ.ಜೆ.ಥಾಮಸ್ ವಂದಿಸಿದರು. ಭೂಮಿತಾಯಿ ಬಳಗದವರು ಹೋರಾಟದ ಹಾಡು ಹಾಡಿದರು.

**ಹಿರಿಯರಿಗೆ ಸನ್ಮಾನ**

ಜಿಲ್ಲೆಯ ಕಾರ್ಮಿಕ ಚಳುವಳಿಗೆ ತಮ್ಮ ಅಮೂಲ್ಯವಾದ ಕೊಡುಗೆ ನೀಡಿದ ಹಿರಿಯ ಕಾರ್ಮಿಕ ಮುಂದಾಳುಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದವರು ಕಾರ್ಮಿಕ ಚಳುವಳಿಗೆ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟ ಎಂ.ರಾಜಣ್ಣ, ವಿ ಕೋದಂಡರಾಮ್, ಸ್ವಾಮಿರಾಜ್ ಹಾಗೂ ಕೆ.ಎಸ್.ಸುಬ್ರಮಣ್ಯ. ■

### PEÁ½ZÀÁÝ

ಸರ್ಕಾರ ಭ್ರಷ್ಟಗೊಂಡಿದೆ, ಅದು ಅಸಮರ್ಥವಾಗಿದೆ ಎಂದು ಹೇಳುವವರ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸುವುದು ಸರಿಯಲ್ಲ.. ಟೀಕೆಗಳ ಬಗ್ಗೆ ಸಹನೆ ಇರಬೇಕು. ರಾಜಕೀಯ ಅಸ್ತ್ರವಾಗಿ ಮಾನಹಾನಿ ಪ್ರಕರಣಗಳನ್ನು ಬಳಸಿಕೊಳ್ಳಬಾರದು. ಸರ್ಕಾರ ಅಥವಾ ಅಧಿಕಾರಿಗಳನ್ನು ಟೀಕಿಸಿದಾಗ ಮಾನನಷ್ಟ ಮೊಕದ್ದಮೆ ದಾಖಲಿಸುವುದು ಆತಂಕದ ವಾತಾವರಣ ನಿರ್ಮಾಣಕ್ಕೆ ಕಾರಣವಾಗುತ್ತದೆ?

*ನ್ಯಾ. ದೀಪಕ್ ಮಿಶ್ರಾ ಮತ್ತು ಆರ್.ಎಫ್. ನಾರಿಮನ್*
*(ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ )*

ಡಿಎಂಡಿಕೆ ಪಕ್ಷದ ಮುಖ್ಯಸ್ಥ, ನಟ ವಿಜಯಕಾಂತ್ ಮತ್ತು ಅವರ ಪತ್ನಿ ಪ್ರೇಮಲತಾ ವಿರುದ್ಧ ತಮಿಳುನಾಡು ಸರಕಾರ ಹೊರಡಿಸಿದ್ದ ಜಾಮೀನು ರಹಿತ ವಾರಂಟ್ಗೆ ತಡೆಯಾಜ್ಞೆ ನೀಡುತ್ತಾ

JANASHAKTHI KANNADA VARA PATRIKE AUG 07, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

## ಬೆಂಗಳೂರು ದಕ್ಷಿಣ ಸಿಐಟಿಯು ಸಮ್ಮೇಳನ

# 1997ರ ನಂತರ ಮೊದಲ ಬಾರಿಗೆ 'ಬಿಡದಿ ಚಲೋ' ನಡೆಸಿ ಕೆಂಬಾವುಟ ಹಾರಿಸಿದ ಕಾರ್ಮಿಕರು

ಲಿಂಗರಾಜು




ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ 11ನೇ ಸಮ್ಮೇಳನವು 24-25 ಜುಲೈ 2016 ರಂದು ಬಿಡದಿಯಲ್ಲಿ ನಡೆಯಿತು. ಸಮ್ಮೇಳನದಲ್ಲಿ ಬೆಂಗಳೂರು ನಗರದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆ ಹಾಗೂ ಕಾರ್ಮಿಕರ ಸ್ಥಿತಿಗತಿ ಕುರಿತು ವರದಿ ಮಂಡಿತವಾಗಿ ಗಹನವಾದ ಚರ್ಚೆ ನಡೆಯಿತು. ಅದರ ಸಾರಾಂಶ ಹೀಗಿದೆ.

**ಬಂಡವಾಳದಾರರ ಸ್ವರ್ಗವಾಗುತ್ತಿರುವ ಬೆಂಗಳೂರು!**

ಕರ್ನಾಟಕ ರಾಜ್ಯವು 3ನೇ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಸ್ವೀಕರಿಸುತ್ತಿರುವ ರಾಜ್ಯವಾಗಿದ್ದು, ಬೆಂಗಳೂರು ಏಷ್ಯ ಖಂಡದಲ್ಲೇ ಪ್ರಮುಖ ಜ್ಞಾನದ ಕೇಂದ್ರವಾಗಿದೆ. ಇದು ಆರೋಗ್ಯ ಮತ್ತು ಕ್ಷೇಮ ಪ್ರವಾಸೋದ್ಯಮದ ಕೇಂದ್ರವಾಗಿಯೂ ರೂಪಿತವಾಗುತ್ತಿದೆ. ವಿಶ್ವದ 4 ಅನ್ವೇಷಣಾ ಕೇಂದ್ರಗಳಲ್ಲಿ ಕರ್ನಾಟಕವೂ ಒಂದೆಂದು ವಿಶ್ವ ಆರ್ಥಿಕ ವೇದಿಕೆಯು (WEF) ಗುರುತಿಸಿದೆ. ವಿಶ್ವಬ್ಯಾಂಕ್ ಹೂಡಿಕೆ ಹವಾಗುಣ ಸೂಚ್ಯಂಕವು ಆರೋಗ್ಯಕರ ವ್ಯವಹಾರ ಹವಾಗುಣ ಮತ್ತು ಹೂಡಿಕೆ ಆಕರ್ಷಿಸುವುದರಲ್ಲಿ ಕರ್ನಾಟಕಕ್ಕೆ ಪ್ರಥಮ ಸ್ಥಾನ ನೀಡಿದೆ. 2020ರ ವೇಳೆಗೆ ಬೆಂಗಳೂರು ಭೂಗ್ರಹದ ಮೇಲಿನ ಅತಿ ಹೆಚ್ಚು ಪ್ರತಿಭೆಗಳನ್ನು ಹೊಂದಿದ ಏಕಮಾತ್ರ ಕೇಂದ್ರವಾಗಲಿದೆ ಎಂದೂ ಅಂದಾಜಿಸಿದೆ.

ಬೆಂಗಳೂರು ಭಾರತದ ಮುಂಚೂಣಿ ಮಾಹಿತಿ ತಂತ್ರಜ್ಞಾನ ಕೇಂದ್ರವಾಗಿದೆ ಹಾಗು ಜಗತ್ತಿನ 2ನೇ ಅತಿ ದೊಡ್ಡ ತಂತ್ರಜ್ಞಾನ ಕ್ಲಸ್ಟರಾಗಿದೆ. 500 ಜಾಗತಿಕ ಫಾರ್ಟ್ಯೂನ್ ಕಂಪನಿಗಳಲ್ಲಿ 400 ಕಂಪೆನಿಗಳು ಮಾಹಿತಿ ತಂತ್ರಜ್ಞಾನದ ಸೇವೆಗಳನ್ನು ಬೆಂಗಳೂರಿನಿಂದ ಹೊರಗುತ್ತಿಗೆ ಆಧಾರಿತವಾಗಿ ಪಡೆಯುತ್ತಿವೆ. 85 ಚಿಪ್ ವಿನ್ಯಾಸಗೊಳಿಸುವ ಸಂಸ್ಥೆಗಳು ಮತ್ತು 370 ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಸಂಸ್ಥೆಗಳು 2014-15 ರಲ್ಲಿ ನೇರವಾಗಿ 10 ಲಕ್ಷ ಮತ್ತು ಪರೋಕ್ಷವಾಗಿ 25 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ. ಜೈವಿಕ ತಂತ್ರಜ್ಞಾನದ (ಬಿ.ಟಿ) 200 ಕ್ಕೂ ಹೆಚ್ಚು ಸಂಸ್ಥೆಗಳಿದ್ದು, ರಾಷ್ಟ್ರದ 26 ಶೇಕಡ ಜೈವಿಕ ತಂತ್ರಜ್ಞಾನದ ಆದಾಯ ಬೆಂಗಳೂರಿನಿಂದ ಬರುತ್ತಿದೆ. ಹೀಗಾಗಿ ಬೆಂಗಳೂರು ಈಗ ಜೈವಿಕ ತಂತ್ರಜ್ಞಾನದ ರಾಜಧಾನಿಯೂ ಆಗಿದೆ. ನಗರದಲ್ಲಿ 19 ಸಾವಿರ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿದ್ದಾರೆ. ಅವರಲ್ಲಿ 15.6 ಶೇಕಡ ಮಹಿಳೆಯರಿದ್ದಾರೆ. ಭಾರತದ ಶೇಕಡ 25 ರಷ್ಟು ವಿಮಾನ ಮತ್ತು ಬಾಹ್ಯಾಕಾಶ ನೌಕೆಗಳ ಉತ್ಪಾದನೆ ಬೆಂಗಳೂರಿನಲ್ಲಿ ಆಗುತ್ತಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 984




ಎಕರೆ ಪ್ರದೇಶದಲ್ಲಿ ಅಂತರಿಕ್ಷಯಾನ ಕೈಗಾರಿಕೆಗಳ ವಿಶೇಷ ಆರ್ಥಿಕ ವಲಯ ನಿರ್ಮಾಣವಾಗಿದೆ. ರಾಷ್ಟ್ರದ ಪ್ರಥಮ "ಸಮಗ್ರ ಮೆಷಿನ್ ಟೂಲ್ಸ್ ಕೈಗಾರಿಕಾ ಪಾರ್ಕ್" (ಐಎಂಟಿಐಪಿ) ಬೆಂಗಳೂರಿನಲ್ಲಿ ಸ್ಥಾಪಿತವಾಗುತ್ತಿದೆ. ಹೀಗಾಗಿ ಸಾಫ್ಟ್‌ವೇರ್ ಸಿಟಿಯಾಗಿದ್ದ ಬೆಂಗಳೂರು ಹಾರ್ಡ್‌ವೇರ್ ನಗರವಾಗಿಯೂ ಬದಲಾಗುತ್ತಿದೆ.

ನೂತನ ಕೈಗಾರಿಕ ನೀತಿಯಲ್ಲಿ ಬೆಂಗಳೂರು-ಮಂಡ್ಯ-ಮೈಸೂರು-ಚಾಮರಾಜನಗರ ಕೈಗಾರಿಕ ಕಾರಿಡಾರನ್ನು ಜ್ಞಾನ ಆಧಾರಿತ ಕೈಗಾರಿಕ ಕಾರಿಡಾರ್ ಆಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ 'ಕೈಗಾರಿಕಾ ಪ್ರದೇಶ ಪ್ರಾಧಿಕಾರ' ಸ್ಥಾಪಿಸಿ ಕೈಗಾರಿಕೋದ್ಯಮಿಗಳಿಗೆ ಅದರ ಮೂಲ ಸೌಲಭ್ಯಗಳ ನಿರ್ವಹಣೆ ಜವಾಬ್ದಾರಿಯನ್ನು ನೀಡಲು ಯೋಜಿಸಿದೆ. ಜಿಗಣಿಯಲ್ಲಿ ರಾಸಾಯನಿಕ ಮತ್ತು ತೈಲ ಉತ್ಪನ್ನ, ಬಿಡದಿಯಲ್ಲಿ ಆಟೋಮೊಬೈಲ್, ಮೈಸೂರು ರಸ್ತೆಯಲ್ಲಿ ಜವಳಿ, ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಎಲೆಕ್ಟ್ರಾನಿಕ್ಸ್ ಕುರಿತ ಕೌಶಲ್ಯ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಉದ್ಯೋಗ ಪರಿಸ್ಥಿತಿ ಕುರಿತು ರಾಷ್ಟ್ರದ ಮಾಲೀಕರ ಸಂಘ ASSOCHAM ಕೈಗೊಂಡಿರುವ ಅಧ್ಯಯನದಲ್ಲಿ ಬೆಂಗಳೂರನ್ನು ಉದ್ಯೋಗ ಸೃಷ್ಟಿಯ ಸಕಾರಾತ್ಮಕ ನಗರ ಎಂದು ಗುರುತಿಸಿದೆ.

ಆದರೆ ಇದೇ ವೇಳೆ 'ಭಾರತದ ಆರ್ಥಿಕ ಭೌಗೋಳ 2025 : ರಾಜ್ಯಗಳು, ಕೈಗಾರಿಕಾ ಸಮುಚ್ಚಯಗಳು ಮತ್ತು ನಗರಗಳು' ಈ ಕುರಿತ Mckinsey ವರದಿಯು 'ಬೆಂಗಳೂರಿನಲ್ಲಿ ನಡೆದಿರುವ ಬೆಳವಣಿಗೆಯ ಸ್ಫೋಟವು ನಗರವನ್ನು ಗಂಭೀರ ನಾಗರಿಕ ಸಮಸ್ಯೆಗಳಿಗೆ ದೂಡಿದೆ' ಎಂದು ಗುರುತಿಸಿ, 'ವಾಹನಗಳಿಂದ ತುಂಬಿ ಹೋಗಿರುವ ರಸ್ತೆಗಳು, ಪದೇ ಪದೇ ಕೈ ಕೊಡುವ ವಿದ್ಯುತ್ ಸರಬರಾಜು, ಖಚಿತತೆ ಇಲ್ಲದ ನೀರು ಸರಬರಾಜು ಮತ್ತು ಕಳಪೆ ಒಳಚರಂಡಿಯಂತಹ ಕಷ್ಟಕರ ಸಮಸ್ಯೆಗಳಿಂದಾಗಿ ಹೂಡಿಕೆದಾರರು ಬೆಂಗಳೂರಿಗೆ ಬದಲು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಗುಡ್‌ಗಾಂವ್ ಮತ್ತು ನೋಯಿಡಗಳನ್ನು ಆಯ್ಕೆ ಮಾಡುತ್ತಿದ್ದಾರೆ' ಎಂದು ಗುರುತಿಸಿದೆ. 'ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯಾದ ಬೆಂಗಳೂರಿನ ಕುಸಿಯುತ್ತಿರುವ ಮೂಲ ಸೌಕರ್ಯವೇ ಇದಕ್ಕೆ ಕಾರಣ' ಎಂದಿದೆ.

ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಕಾರ್ಖಾನೆಗಳ ಸಂಖ್ಯೆ ಏರಿಳಿತವನ್ನು ಕಾಣುತ್ತಿದೆ. ಬೆಂಗಳೂರು ನಗರ ಹಾಗು ರಾಮನಗರ ಜಿಲ್ಲೆಯಲ್ಲಿ ಕಾರ್ಖಾನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಸಣ್ಣ ಕೈಗಾರಿಕೆಗಳು ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚುತ್ತಿವೆ. ಸೇವಾ ವಲಯದ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ಮತ್ತು ಅವುಗಳಲ್ಲಿನ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ನಗರ ಪ್ರದೇಶದ ವ್ಯಾಪ್ತಿಯಿಂದ ಹೊರ ಭಾಗಕ್ಕೆ ರಾಜ್ಯದ ಇತರೆಡೆಗೆ ಸ್ಥಳಾಂತರಗೊಳ್ಳುತ್ತಿರುವುದು ಸಹ ಕಾರಣವಾಗಿದೆ. ಗುತ್ತಿಗೆ, ಅರೆಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಸಂಘಟಿತ ವಲಯದೊಳಗೆ ಅಸಂಘಟಿತ ವಲಯದ ಕಾರ್ಮಿಕರು ಹೆಚ್ಚುತ್ತಿರುವುದರ ಸೂಚಕ ಇದಾಗಿದೆ. ಕಾರ್ಮಿಕ ಇಲಾಖೆಯ ಮಾಹಿತಿಯಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆಯಡಿ ನೊಂದಾಯಿತ ಸಂಸ್ಥೆಗಳು 2,25,237 ಇದ್ದು, ಅದರಲ್ಲಿ 22,74,372 ಕಾರ್ಮಿಕರು ದುಡಿಯುತ್ತಿದ್ದಾರೆ.

**ಕಾರ್ಮಿಕ ಕಾನೂನಿಗೆ ಕಿಮ್ಮತ್ತಿಲ್ಲ!**

ರಾಜ್ಯದಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆ ವರ್ಷಂಪ್ರತಿ ಹೆಚ್ಚುತ್ತಿವೆ. ಕಾರ್ಮಿಕ ಅಧಿಕಾರಿಗಳು ನಡೆಸಿದ ಒಟ್ಟು ತಪಾಸಣೆಯ 25 ಶೇಕಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲೆ ಆಗಿದೆ. ಹೂಡಲಾದ ಮೊಕದಮೆಗಳು, ಶಿಕ್ಷೆಗೆ ಒಳಪಟ್ಟ ಸಂಸ್ಥೆಗಳು ಮತ್ತು ವಿಧಿಸಿದ ದಂಡಗಳ ಮೊತ್ತದಲ್ಲೂ ಅವುಗಳದೆ ಹೆಚ್ಚು ಪಾಲಿದೆ. ಆದರೆ ಕಾರ್ಮಿಕ ಸಂಘಗಳು ಇಲ್ಲದಿರುವುದು ಸಹಾ ಇದೇ ವಿಭಾಗದಲ್ಲಿ ಎಂಬುದನ್ನು ಸಹಾ ಗಮನಿಸಬೇಕಿದೆ. ಗುತ್ತಿಗೆ ಕಾರ್ಮಿಕರ ಕಾಯ್ದೆಯಡಿ ಉಲ್ಲಂಘನೆಯನ್ನು ತಪಸಾಣೆ ನಡೆಸಲಾದ ಸಂಸ್ಥೆಗಳು, ಹೂಡಲಾದ ಮೊಕದ್ದಮೆಗಳು, ಶಿಕ್ಷೆ ಹಾಗು ವಿಧಿಸಿದ ದಂಡನ ಮೊತ್ತ ಪರಿಶೀಲಿಸಿದಲ್ಲಿ ಸಮಸ್ಯೆಯ ಪ್ರಮಾಣಕ್ಕೆ ಹೋಲಿಸಿದಲ್ಲಿ ತೀರಾ ಕಡಿಮೆ ಪ್ರಮಾಣದಲ್ಲಿದೆ.

**ಕಾರ್ಮಿಕರ ಪ್ರತಿರೋಧ!**

ರಾಜ್ಯದಲ್ಲಿ ಪ್ರತಿ ವರ್ಷ ಮಾಲೀಕರು ಮತ್ತು ಕಾರ್ಮಿಕರ ನಡುವಿನ ತಿಕ್ಕಾಟ ಹೆಚ್ಚುತ್ತಿದೆ. ವಿವಾದಗಳು ಸೌಹಾರ್ದಯುತವಾಗಿ ಬಗೆಹರಿಯುತ್ತಿಲ್ಲ. ಪರಿಣಾಮವಾಗಿ ಕಾರ್ಮಿಕರಲ್ಲಿ ಅತೃಪ್ತಿ ಆಕ್ರೋಶ ಹೆಚ್ಚುತಿದೆ. ಅದರ ಆಂಶಿಕ ಸ್ಫೋಟವಾಗಿ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ ಹೊರಹೊಮ್ಮಿದೆ. ಮಾತ್ರವಲ್ಲದೆ ಹಲವು ರೀತಿಯ ಸಾಮಾಜಿಕ, ಸಾಂಸ್ಕೃತಿಕ ಪರಿಣಾಮಗಳನ್ನು ಉಂಟುಮಾಡುತ್ತಿದೆ.

ರಾಜ್ಯ ಕಾರ್ಮಿಕ ಇಲಾಖೆ ವಾರ್ಷಿಕ ವರದಿಯಂತೆ ಕಾರ್ಮಿಕರ ಮುಷ್ಕರಕ್ಕಿಂತ ಮಾಲೀಕರ ಬೀಗ ಮುದ್ರೆಗಳಿಂದ ಹೆಚ್ಚು ಮಾನವ ದಿನಗಳು ನಷ್ಟವಾಗಿವೆ. ರಾಜಿ ಸಂಧಾನದಲ್ಲಿ ಪರಿಹಾರವಾದ ವಿವಾದಗಳ ಸಂಖ್ಯೆ-ಪ್ರಮಾಣ ವರ್ಷದಿಂದ ವರ್ಷಕ್ಕೆ ಕಮ್ಮಿ ಆಗುತ್ತಿದೆ. ಆದರೆ 'ಮನೆ ಬಾಗಿಲಿಗೆ ನ್ಯಾಯ' ಪರಿಕಲ್ಪನೆಯ ರಾಜ್ಯ ಹೈಕೋರ್ಟ್ ತೀರ್ಪಿನ ಪರಿಣಾಮವಾಗಿ ಕೈಗಾರಿಕಾ ವಿವಾದಗಳು ಸ್ಥಳೀಯ ಜಿಲ್ಲಾ ನ್ಯಾಯಾಲಯಗಳಿಗೆ ಹೋಗುತ್ತಿವೆ. ಅಲ್ಲಿ ತರಬೇತಿಯ ಕೊರತೆ, ಸಿಬ್ಬಂದಿ ಕೊರತೆ, ಈಗಾಗಲೇ ಹೆಚ್ಚಿರುವ ದಾವೆಗಳ ಪರಿಣಾಮದಿಂದಾಗಿ ಇನ್ನಷ್ಟು ವಿಳಂಬವಾಗಲಿವೆ.

**ದುಡಿಯೋರು ದಯನೀಯ ಸ್ಥಿತಿಯಲ್ಲಿ-ಮಾಲೀಕರು ಲಾಭದ ಉತ್ತುಂಗದಲ್ಲಿ!**

ರಾಜ್ಯದ ಕಾರ್ಖಾನೆಗಳ ವಿಭಾಗದ ವಾರ್ಷಿಕ ಕೈಗಾರಿಕಾ ಸರ್ವೇಕ್ಷಣ ವರದಿಗಳ ಪ್ರಕಾರ 2009-10 ರಿಂದ 2012-13 ರ ನಾಲ್ಕು ವರ್ಷಗಳಲ್ಲೂ ವಾರ್ಷಿಕ ನಿವ್ವಳ ಮೌಲ್ಯವರ್ಧನೆ ಏರಿಕೆಯಾಗಿದೆ ಹಾಗೂ ಅದರಲ್ಲಿನ ಲಾಭದ ಪಾಲು ಏರುತ್ತಾ ಬಂದಿದೆ. ಆದರೆ ಕಾರ್ಮಿಕರ ವೇತನದ ಪಾಲು ಮಾತ್ರ ಇಳಿಕೆಯಾಗುತ್ತಾ ಬಂದಿದೆ. ನಾಲ್ಕು ವರ್ಷಗಳ ಒಟ್ಟು 2.34 ಲಕ್ಷ ಕೋಟಿ ರೂಗಳ ನಿವ್ವಳ ಮೌಲ್ಯ ವರ್ದನೆಯಲ್ಲಿ ಲಾಭದ ಪಾಲು ಶೇಕಡ 60.40 ರಷ್ಟಾಗಿದೆ. ಅದೇ ವೇಳೆ ಕಾರ್ಮಿಕರ ವೇತನದ ಪಾಲು ಶೇಕಡ 16.45 ರಷ್ಟಾಗಿದೆ. ಮಾಲೀಕರು

**ಪುಟ 15 ಕ್ಕೆ**



ಅಧ್ಯಕ್ಷರು: **ಕೆ.ಪ್ರಕಾಶ್,** ಪ್ರಧಾನ ಕಾರ್ಯದರ್ಶಿ: **ಬಿ.ಎನ್.ಮಂಜುನಾಥ್,** ಖಜಾಂಚಿ: **ಜೋಮಿ ಜಾರ್ಜ್**

**JANASHAKTHIKANNADAVARAPATRIKE:** Printed by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**